بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 43

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05 ನವೆಂಬರ್ 2020, 05 ನಬುವ್ವತ್ 1399 ಹಿಜರಿ ಶಮ್‌ಸಿ,
18 ರಬಿಉಲ್ ಅವ್ವಲ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ۔

## ಅಲ್ಲಾಹನ ಉಪದೇಶ

وَمَنۡ یَّعۡمَلۡ سُوۡٓءًا اَوۡ یَظۡلِمۡ نَفۡسَہٗ
ثُمَّ یَسۡتَغۡفِرِ اللّٰہَ یَجِدِ اللّٰہَ
غَفُوۡرًا رَّحِیۡمًا

(ಅನ್ನಿಸಾಅ್:*111*)

ಅಂದರೆ: ಯಾವನಾದರೂ ಒಂದು ಕೆಡುಕನ್ನು ಮಾಡಿ ಅಥವಾ ತನ್ನ ಆತ್ಮದೊಡನೆ ದ್ರೋಹವನ್ನೆಸಗಿ ಮತ್ತೆ ಅಲ್ಲಾಹನೊಡನೆ ಪಾಪ ಮುಕ್ತಿಗಾಗಿ ಪ್ರಾರ್ಥಿಸಿದರೆ, ಅವನು ಅಲ್ಲಾಹನನ್ನು ಅತ್ಯಂತ ಕ್ಷಮಿಸುವವನಾಗಿಯೂ ಕಾರುಣ್ಯನಿಧಿಯಾಗಿಯೂ ಕಾಣುವನು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಹಝ್‌ರತ್ ರಸೂಲುಲ್ಲಾಹ್(ಸ) ಹಝ್‌ರತ್ ಅಬೂಬಕರ್(ರ) ಅವರಿಗೆ ನಮಾಝಿನಲ್ಲಿ ಬೇಡಿಕೊಳ್ಳಲು ಈ ಪ್ರಾರ್ಥನೆ (ದುಆ) ಕಲಿಸಿಕೊಟ್ಟರು.**

* ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ. ನಾನು ರಸೂಲುಲ್ಲಾಹ್(ಸ) ರಿಂದ ಕೇಳಿದೆ. ಅವರು (ಸ) ದಜ್ಜಲ್ ಉಪದ್ರವದಿಂದ ಅಭಯ ಯಾಚಿಸುತ್ತಿದ್ದರು.

* ಹಝ್‌ರತ್ ಅಬುಬಕರ್ ಸಿದ್ದೀಖ್(ರ) ವರದಿ ಮಾಡುತ್ತಾರೆ. ಅವರು ರಸೂಲುಲ್ಲಾಹ್(ಸ) ರವರಿಗೆ ಹೇಳಿದರು. ನನಗೆ ದುಆ ಕಲಿಸಿಕೊಡಿರಿ. ಅದನ್ನು ನಾನು ನಮಾಝಿನಲ್ಲಿ ಮಾಡುವೆನು. ಅವರು(ಸ) ಹೇಳಿದರು. ಈ ದುಆ ಮಾಡಿ.

(ಓ ಅಲ್ಲಾಹ್ ! ನಾನು ನನ್ನ ಜೀವನದ ಮೇಲೆ ದೌರ್ಜನ್ಯ ವೆಸಗಿದವನಾಗಿದ್ದೇನೆ. ನಿನ್ನ ಹೊರತು ಯಾರು ನಮ್ಮ ಪಾಪಗಳನ್ನು ಕ್ಷಮಿಸುವುದಿಲ್ಲ. ಕಾರಣ ನೀನು ನಿನ್ನ ಕಡೆಯಿಂದ ನನ್ನನ್ನು ಕ್ಷಮಿಸು ಮತ್ತು ನನಗೆ ಕಾರುಣ್ಯ ದಯಪಾಲಿಸು. ನಿಶ್ಚಯವಾಗಿಯೂ ನೀನು ಅತ್ಯಂತ ಕ್ಷಮಾಶೀಲನು ಮತ್ತು ಕಾರುಣ್ಯನಿಧಿಯೂ ಆಗಿರುವೆನು.)

* ಹಝ್‌ರತ್ ಅಬ್ದುಲ್ಲ ಬಿನ್ ಅಬಿ ಘತಾದ ಅನ್ಸಾರಿ ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ನಾನು ನಮಾಝಿನಲ್ಲಿ ನಿಂತಿರುವಾಗ ನಾನು ಅದನ್ನು ದೀರ್ಘ ಮಾಡಬಯಸುತ್ತೇನೆ. ಅಷ್ಟರಲ್ಲಿ ಮಕ್ಕಳ ಅಳುವ ಸದ್ದು ಕೇಳಿದಂತೆಯೇ ನಾನು ನಮಾಝ್ ಸಂಕ್ಷಿಪ್ತಗೊಳಿಸುತ್ತೇನೆ. ಏಕೆಂದರೆ ನಾನು ಮಾತೆಯರಿಗೆ ತೊಂದರೆ ಕೊಡಲು ಇಷ್ಟಪಡುವುದಿಲ್ಲ

**(ಸಹೀಹ್ ಬುಖಾರಿ ಸಂಪುಟ-2, ಕಿತಾಬುಲ್ ಅಝಾನ್ ಮುದ್ರಣ ಖಾದಿಯಾನ್ 2006)**

**ನನಗೆ ಆಶ್ಚರ್ಯ ಅತಿ ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ. ಜನರು ತಮ್ಮಂತಿರುವ ಜನರನ್ನು ಸಂತುಷ್ಟಪಡಿಸಲು ಪ್ರಯತ್ನಿಸುತ್ತಾರೆ ಆದರೆ ಅಲ್ಲಾಹನನ್ನು ಸಂತುಷ್ಟಪಡಿಸಲು ಪ್ರಯತ್ನಿಸುವುದಿಲ್ಲ. ಅಕಟಾಕಟ:**

**ನೆನಪಿಡಿರಿ ದುಆ ಮಾಡಿದ ತಕ್ಷಣ ಉತ್ತರ ದೊರೆತರೆ ಸಾಮಾನ್ಯವಾಗಿ ಅಷ್ಟು ಒಳ್ಳೆಯ ಪರಿಣಾಮ ದೊರಕುವುದಿಲ್ಲ. ಒಂದಿಷ್ಟು ತಡವಾದರೆ ಯಶಸ್ಸಿಗೆ ಕಾರಣವಾಗುತ್ತದೆ.**

**ಸ್ವಪ್ನ ಸಾಕ್ಷ್ಯದ ಅರ್ಥ ತಿಳಿಯುವ ಜ್ಞಾನ ಸಂಪತ್ತು ಯಕೃತ್ತಿನ ಸ್ಥಾನ ಪಡೆಯುತ್ತದೆ. ಆದುದರಿಂದ ಅದನ್ನು ದಾನ ಮಾಡುವುದು ಯಕೃತ್ತು ನೀಡಿದಂತೆಯೇ ಸರಿ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಅಲ್ಲಾಹನ ಚಾಂಚಲ್ಯವೂ (ತಲೂನ್) ಸಹ ಅನುಗ್ರಹವಾಗಿದೆ.

ಅಲ್ಲಾಹನ ಸಮಯಾವಕಾಶ ನೀಡುವುದು ಸಹ ಅನುಗ್ರಹವಾಗಿದೆ. ನೋಡಿರಿ ಯೂನುಸ್(ಅ) ರವರು ತನ್ನ ಸಮುದಾಯದ ಬಗ್ಗೆ ದೇವವಾಣಿಯ ನಿರ್ಧಿಷ್ಠ ಆಜ್ಞೆ ನೀಡಿದಾಗ ಆ ಜನರು ಕ್ಷಮೆಯಾಚಿಸಲು ಪ್ರಾರಂಭಿಸಿದರು. ಆಗ ಅಲ್ಲಾಹನು ಅವರನ್ನು ಶಿಕ್ಷೆಯಿಂದ ಪಾರು ಮಾಡಿದನು. ಮತ್ತು ಅವರ ಮೇಲೆ ಕಾರುಣ್ಯ ತೋರಿದನು. ಆದುದರಿಂದ ಅಲ್ಲಾಹನ ಸಮಯಾವಕಾಶ ನೀಡುವುದರಲ್ಲಿಯೂ ಒಂದು ಸಂತೋಷ ಅಡಗಿದೆ. ಆದರೆ ಅದರಿಂದ ಪ್ರಯೋಜನ ಪಡೆಯಲು ಅವನ ಮುಂದೆ ವಿನಮ್ರ ಕಳವಳ ತೋರಿಸಬೇಕಾಗುತ್ತದೆ. ನನಗೆ ಅತ್ಯಂತ ಆಶ್ಚರ್ಯದ ಸಂಗತಿಯಾಗಿ ಕಾಣುವುದೇನೆಂದರೆ ಜನರು ತಮ್ಮಂತಿರುವ ಜನರನ್ನು ಸಂತುಷ್ಟಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಅಲ್ಲಾಹನನ್ನು ಸಂತುಷ್ಟಪಡಿಸಲು ಪ್ರಯತ್ನಿಸುವುದಿಲ್ಲ. ಅಕಟಾಕಟ!

ದುಆ ಸ್ವೀಕೃತಿಯಲ್ಲಿ ತಡವಾಗುವುದು ಯಶಸ್ಸಿನ ಸಂಕೇತವಾಗಿದೆ. ಇದನ್ನು ನೆನಪಿಡಿರಿ. ಒಂದು ವೇಳೆ ದುಆ ಮಾಡಿದ ತಕ್ಷಣ ಉತ್ತರ ಲಭಿಸಿದರೆ ಅದು ಸಾಮಾನ್ಯವಾಗಿ ಒಳ್ಳೆಯದಲ್ಲ. ಆದುದರಿಂದ ದುಆ ಮಾಡುವುದರಲ್ಲಿ ನಿರಾಶೆ ಹೊಂದುವುದು ಬೇಡ. ದುಆದಲ್ಲಿ ಎಷ್ಟು ತಡವಾಗುತ್ತದೆಯೋ, ತಕ್ಷಣ ಉತ್ತರ ದೊರೆಯದಿದ್ದರೂ ಸಂತೋಷದಿಂದ, ಕೃತಜ್ಞಾಪೂರ್ವಕವಾಗಿ ಸಾಷ್ಟಾಂಗವೆರಗುತ್ತಿರಿ. ಏಕೆಂದರೆ ಅದರಲ್ಲಿಯೇ ನಿಮಗೆ ಒಳಿತಿದೆ. ಮತ್ತು ಅದು ಉತ್ತಮವಾಗಿದೆ. ತಡವಾಗುವುದು ಯಶಸ್ಸಿಗೆ ಕಾರಣವಾಗುತ್ತದೆ.

### ಯೂನುಸ್(ಅ) ರವರ ಸಮುದಾಯದವರಿಗೆ ಶಿಕ್ಷೆ ದೂರವಾಗಲು ಕಾರಣ

ಯೂನುಸ್(ಅ) ರವರ ಸಮುದಾಯದವರಿಗೆ ಶಿಕ್ಷೆ ದೂರವಾಗಲು ಕಾರಣ ದುಆ (ಪ್ರಾರ್ಥನೆ)ಯಾಗಿದೆ. ಅದು ವಿಜಯಕ್ಕಾಗಿ ಅತ್ಯಂತ ಅವಶ್ಯವಾಗಿದೆ. ಯೂನುಸ್(ಅ) ರವರ ಸಮುದಾಯ ಪಶ್ಚಾತ್ತಾಪಪಟ್ಟು ತಮ್ಮ ವ್ಯಥೆ ವ್ಯಕ್ತಪಡಿಸುತ್ತ ದುಆ ಮಾಡಿರುವುದರಿಂದಲೇ ಅವರು ಶಿಕ್ಷೆಯಿಂದ ಪಾರಾದರು. ನನ್ನ ದೃಷ್ಟಿಯಲ್ಲಿ ಮಹಾತಿಬತ್ (ಪ್ರೀತಿ) ಮಗಾಝಿಬತ್ (ಕೋಪ) ಎಂಬ ಅರ್ಥದಲ್ಲಿ ಹೇಳಲಾಗಿದೆ ಮತ್ತೆ ಹೂತ್ ಎಂದರೆ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

**ಅಲ್ಲಾಹನ ದೃಷ್ಟಿಯಲ್ಲಿ ಹಲಾಲ್ ಸಂಗತಿಗಳಲ್ಲಿ ಅತ್ಯಂತ ಅನಿಷ್ಠದ ಸಂಗತಿಯೆಂದರೆ "ತಲಾಖ್."**

**ಜನರು ತಮ್ಮ ಮಿತ್ರರ ಅನಿಷ್ಠದಿಂದ ಮತ್ತು ತನ್ನ ಸಮುದಾಯದ ಅನಿಷ್ಠದಿಂದ ದೂರವಿರ ಬಯಸುವುದಾದರೆ, ಅಲ್ಲಾಹನ ಅನಿಷ್ಠದಿಂದ ದೂರ ಬಯಸುವುದರಿಂದ ಅಲಕ್ಷ್ಯ ಮಾಡಬಹುದೆ, ಖಂಡಿತ ಇಲ್ಲ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು.

"ಅಲ್ಲಾಹನ ದೃಷ್ಟಿಯಲ್ಲಿ ಹಲಾಲ್ ಸಂಗತಿಗಳಲ್ಲಿ ಅತ್ಯಂತ ಅನಿಷ್ಠದ ಸಂಗತಿಯೆಂದರೆ 'ತಲಾಖ್'." ತಲಾಖ್ ಹಲಾಲ್ ಸಂಗತಿಗಳಲ್ಲಿ ಅತ್ಯಂತ ಅಪ್ರಿಯ ಸಂಗತಿಯಾಗಿದೆ ಎಂದು ತಿಳಿದಿರುವಂತಹ ಸತ್ಯವಿಶ್ವಾಸಿ, ತಮ್ಮ ಹೃದಯದಲ್ಲಿ ಅಲ್ಲಾಹನ ಪ್ರೀತಿಯುಳ್ಳ ಸತ್ಯವಿಶ್ವಾಸಿ, ಹೇಗೆ ತಾನೇ ಆ ಸಂಗತಿಯ ಹತ್ತಿರ ಹೋಗಲು ಸಾಧ್ಯ ಎಲ್ಲ ಧರ್ಮ ಸಮ್ಮತ (ಜಾಯಝ್) ಕಾರ್ಯಗಳನ್ನು ಸಾಧಿಸುವುದು ಅವಶ್ಯವಾಗಿರುವುದಿಲ್ಲ. ಎಲ್ಲರೂ ಅರಿಯುವ ವಿಷಯವಾಗಿದೆ. ಬನಾರಸ್, ಕೋಲ್ಕತ್ತ, ಮದ್ರಾಸ್ ಅಥವಾ ಮುಂಬಯಿ ಇತ್ಯಾದಿ, ಪ್ರವಾಸ ಹೊರಡುವುದು ಜಾಯಝ್ ಆಗಿದೆ. ಆದರೆ ಆ ಸ್ಥಳಗಳಲ್ಲಿ ಹೋಗಿ ಬಂದವರು ಎಷ್ಟು ಜನರಿದ್ದಾರೆ. ಹಲಾಲ್‌ನ ಅರ್ಥ ಸಹ ಮಾಡಲೇ ಬೇಕು ಎಂದಾಗುತ್ತಿದ್ದರೆ,

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನಿಮಗೆ ದಾರಿದ್ರ್ಯ ಬರುವುದು ಎಂಬ ಭಯ ನನಗಿಲ್ಲ, ಬದಲಿಗೆ, ಲೌಕಿಕ ಸಂಪತ್ತು ನಿಮಗೆ ಲಭಿಸುವಾಗ, ನೀವು ಅತಿಯಾಗಿ ಲಾಲಸೆ ಪಡುವಿರಿ ಎಂಬುವುದರ ಬಗ್ಗೆ ನನಗೆ ಹೆದರಿಕೆಯಿದೆ. (ಹದೀಸ್)**

**ಹಝ್ರತ್ ಅಬೂ ಉಬೈದ(ರ) ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ತಬ್ಲೀಗ್ ಮೂಲಕ ಮುಸ್ಲಿಮರಾಗಿದ್ದರು. ಇದು ಮುಸ್ಲಿಮರು ದಾರೇ ಅರ್ಕಮ್‌ನಲ್ಲಿ ಅಭಯ ಪಡೆದಿದ್ದ ಕಾಲಕ್ಕೂ ಮುಂಚಿನ ಸಂಗತಿಯಾಗಿದೆ. ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಮುಸ್ಲಿಮರಾದ ಒಂಬತ್ತನೇ ವ್ಯಕ್ತಿಯಾಗಿದ್ದರು.**

**ಸಮುದಾಯದ ಅಮೀನ್, ಅಶ್ರ ಮುಬಶ್ಶಿರ ಎಂದರೆ, ಸ್ವರ್ಗಕ್ಕೆ ಅರ್ಹರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತಕಾಲದಲ್ಲಿ ಸುವಾರ್ತೆ ನೀಡಿದ ಹತ್ತು ಸಹಾಬಿವರ್ಯರಲ್ಲಿ ಸೇರಿದ್ದ ಸಹಾಬಿ ಹಾಗೂ ಮುಹಮ್ಮದ್(ಸ)ರವರೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಜರಾಹ್‌ರ(ರ) ಅನುಸರಣೆಯ ಕುರಿತು ಕೇಳಿದಾಗ, "ರಹಿಮಲ್ಲಾಹು ಅಬಾ ಉಬೈದ" ಎಂದು ಹೇಳಿದರು. ಎಂದರೆ, ಅವರು ಅನುಸರಣೆಯ ಉನ್ನತ ಮಟ್ಟವನ್ನು ಸ್ಥಾಪಿಸಿರುವರು, ಆದ್ದರಿಂದ ಅವರ ಮೇಲೆ ಅಲ್ಲಾಹನ ಕಾರುಣ್ಯ ವರ್ಷಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-10-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ـ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ـ اَلرَّحْمٰنِ الرَّحِيمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಇಂದು ಬದರಿ ಸಹಾಬಿಯರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಲಾಗುವುದು. ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ(ರ) ಹೆಸರು ಆಮಿರ್ ಬಿನ್ ಅಬ್ದುಲ್ಲಾಹ್ ಎಂದಾಗಿತ್ತು. ಅವರ ತಂದೆಯ ಹೆಸರು ಅಬ್ದುಲ್ಲಾಹ್ ಬಿನ್ ಜರಾಹ್ ಎಂದಾಗಿತ್ತು. ಹಝ್ರತ್ ಅಬೂ ಉಬೈದ ತನ್ನ ಉಪನಾಮದೊಂದಿಗೆ ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದ್ದರು. ಅವರ ವಂಶವಳಿಯನ್ನು ಅವರ ತಾತರಾದ ಜರಾಹ್‌ರೊಂದಿಗೆ ಜೋಡಿಸಿ ಹೇಳಲಾಗುತ್ತದೆ. ಅವರ ತಾಯಿಯ ಹೆಸರು ಅಮೀಮ ಬಿನ್ತ್ ಗ್ನಮ್ ಎಂದಾಗಿತ್ತು.ಅವರ ಸಂಬಂಧ ಖುರೈಶಿ ಗೋತ್ರದ ಒಂದು ಕುಟುಂಬವಾದ ಬನೂ ಹಾರಿಸ್ ಬಿನ್ ಫಹರ್‌ನೊಂದಾಗಿತ್ತು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ-2, ಪುಟ-475, ದಅರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಅಬೂ ಉಬೈದ ಉದ್ದ ಮೈಕಟ್ಟಿನ ಸಪೂರ ದೇಹದ ವ್ಯಕ್ತಿಯಾಗಿದ್ದರು. ಮುಖದಲ್ಲಿಯೂ ಮಾಂಸ ಕಮ್ಮಿಯಾಗಿತ್ತು. ಉಹದ್ ಯುದ್ಧದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖದಲ್ಲಿ ಸಿಲುಕಿಕೊಂಡಿದ್ದ ಶಿರಸ್ತ್ರಾಣದ ವರ್ತುಲವನ್ನು ಕಿತ್ತೆಗೆಯುವಾಗ ಹಝ್ರತ್ ಅಬೂ ಉಬೈದರ ಮುಂದಿನ ಎರಡು ಹಲ್ಲುಗಳು ಮುರಿದುಹೋಗಿತ್ತು. ಅವರಿಗೆ ಹೆಚ್ಚು ದಟ್ಟವಾದ ಗಡ್ಡವಿರಲಿಲ್ಲ. ಅವರು ಗಡ್ಡಕ್ಕೆ ಬಣ್ಣ ಹಚ್ಚುತ್ತಿದ್ದರು.
(ಸೈರುಸ್ಸಹಾಬ, ಸಂಪುಟ-2, ಪುಟ-135, ದಾರುಲ್ ಇಶಾಅತ್ ಉರ್ದು ಬಝಾರ್ ಕರಾಚಿ)

ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಹಲವು ವಿವಾಹಗಳನ್ನು ಮಾಡಿದ್ದರು. ಆದರೆ ಕೇವಲ ಎರಡು ಪತ್ನಿಯರಿಂದ ಅವರಿಗೆ ಮಕ್ಕಳಾಗಿದ್ದುವು. ಅವರಿಗೆ ಯಝೀದ್ ಮತ್ತು ಉಮೈರ್ ಎಂಬ ಎರಡು ಗಂಡು ಮಕ್ಕಳಿದ್ದುವು. (ರೌಶನ್ ಸಿತಾರೆ ಗುಲಾಮ್ ಬಾರಿ ಸೈಫ್, ಸಂಪುಟ-2, ಪುಟ-41)

ಅಶ್ರ ಮುಬಶ್ಶಿರ ಎಂದರೆ, ಸ್ವರ್ಗಕ್ಕೆ ಅರ್ಹರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತಕಾಲದಲ್ಲಿ ಸುವಾರ್ತೆ ನೀಡಿದ ಹತ್ತು ಸಹಾಬಿವರ್ಯರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಒಳಪಡುತ್ತಾರೆ. (ಅಸದುಲ್‌ಗಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-22, ದಾರುಲ್ ಫಿಕರ್ ಬೈರೂತ್ 2003)

ಖುರೈಶಿನ ಗೌರವಾನ್ವಿತ, ಸದ್ಗುಣಗಳನ್ನು ಹೊಂದಿರುವ ಮತ್ತು ಸುಶೀಲರಾದ ಜನರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಗಣಿಸಲ್ಪಡುತ್ತಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ-3, ಪುಟ-477, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2005)

ಹಝ್ರತ್ ಅಬೂ ಉಬೈದ(ರ) ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ತಬ್ಲೀಗ್ ಮೂಲಕ ಮುಸ್ಲಿಮರಾಗಿದ್ದರು. ಇದು ಮುಸ್ಲಿಮರು ದಾರೇ ಅರ್ಕಮ್‌ನಲ್ಲಿ ಅಭಯ ಪಡೆದಿದ್ದ ಕಾಲಕ್ಕೂ ಮುಂಚಿನ ಸಂಗತಿಯಾಗಿದೆ. ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಮುಸ್ಲಿಮರಾದ ಒಂಬತ್ತನೇ ವ್ಯಕ್ತಿಯಾಗಿದ್ದರು. (ಅಶ್‌ರಹ್ ಮುಬಶ್ಶಿರಹ್, ಲೇಖಕ ಮುಬಶ್ಶಿರ್ ಸಾಜಿದ್, ಪುಟ-477, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2005)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ಹಝ್ರತ್ ಅನಸ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಅಮೀನ್ ಎಂದರೆ, ಅತ್ಯಂತ ವಿಶ್ವಸ್ತ ವ್ಯಕ್ತಿಯಿರುತ್ತಾರೆ. ನನ್ನ ಸಮುದಾಯದ ಅಮೀನ್ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಆಗಿರುವರು. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ(ಸ) ಹದೀಸ್-3744)

ಸಹೀಹ್ ಮುಸ್ಲಿಮ್ ಮತ್ತು ಸಹೀಹ್ ಬುಖಾರಿಯ ವರದಿಗಳ ಪ್ರಕಾರ ನಜ್‌ರಾನಿನ ಜನರು, ಸಹೀಹ್ ಮುಸ್ಲಿಮಿನ ವರದಿಯ ಪ್ರಕಾರ ಯಮನಿನ ಜನರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಧರ್ಮವನ್ನು ಕಲಿಸಿಕೊಡಲಿಕ್ಕಾಗಿ ನಮ್ಮೊಂದಿಗೆ ಒಬ್ಬ ವ್ಯಕ್ತಿಯನ್ನು ಕಳುಹಿಸಿಕೊಡಿರಿ. ಒಂದು ವರದಿಯಲ್ಲಿ **"ನಮ್ಮೊಂದಿಗೆ ಒಬ್ಬ ವಿಶ್ವಸ್ತ ವ್ಯಕ್ತಿಯನ್ನು ಕಳುಹಿಸಿಕೊಡಿರಿ"** ಎಂದು ಹೇಳಿದ್ದಾಗಿ ಬಂದಿದೆ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಖಂಡಿತವಾಗಿಯೂ ಈ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸುವ ಒಬ್ಬ ವಿಶ್ವಸ್ತ ವ್ಯಕ್ತಿಯನ್ನು ನಿಮ್ಮೊಂದಿಗೆ ಕಳುಹಿಸುತ್ತೇನೆ. ಹೀಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರ ಕೈಯನ್ನು ಹಿಡಿದು ಹೀಗೆ ಹೇಳಿದರು: **ಹಾದಾ ಅಮೀನುನ್ ಹಾಧಿಹಿಲ್ ಉಮ್ಮತಿ**. ಇವರು ಈ ಸಮುದಾಯದ ವಿಶ್ವಸ್ತ ವ್ಯಕ್ತಿಯಾಗಿರುವರು. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ(ಸ) ಹದೀಸ್-3745) (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಇಲುಸ್ಸಹಾಬ, ಹದೀಸ್-2419-2420)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾಗಿ ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಅಬೂಬಕ್ಕರ್, ಉಮರ್, ಉಬೈದ ಬಿನ್ ಜರಾಹ್, ಉಸ್ಸೈದ್ ಬಿನ್ ಹಝೀರ್, ಸಾಬಿತ್ ಬಿನ್ ಖೈಸ್ ಬಿನ್ ಶುಮಾಸ್, ಮಆಧ್ ಬಿನ್ ಅಮ್ರ್ ಬಿನ್ ಜಮೂಹ್ ಎಷ್ಟು ಒಳ್ಳೆಯ ವ್ಯಕ್ತಿಗಳಾಗಿರುವರು. (ಜಾಮೆ ತಿರ್‌ಮಿಝಿ ಅಬ್ವಾಬುಲ್ ಮನಾಖಿಬ್, ಹದೀಸ್–3795) ಹೀಗೆ ಒಂದು ಸಭೆಯಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ವ್ಯಕ್ತಿಗಳನ್ನು ಪ್ರಶಂಸಿದರು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಉತ್ತರಾಧಿಕಾರಿಯನ್ನಾಗಿ ಯಾರನ್ನಾದರೂ ಮಾಡುವವರಾದರೆ, ಯಾರನ್ನು ಮಾಡುತ್ತಿದ್ದರು ಎಂದು ಒಂದು ಸಲ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹರೊಡನೆ ಕೇಳಲಾಯಿತು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರನ್ನು ಎಂದು ಅವರು ಉತ್ತರಿಸಿದರು. ಅನಂತರ ಯಾರನ್ನು ಎಂದು ಜನರು ಕೇಳಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರನ್ನು ಎಂದು ಅವರು ಉತ್ತರಿಸಿದರು. ಅನಂತರ ಯಾರನ್ನು ಎಂದು ಜನರು ಕೇಳಿದರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರನ್ನು ಎಂದು ಹಝ್ರತ್ ಆಯಿಶಾ(ರ) ಹೇಳಿದರು. ಇದು ಸಹೀಹ್ ಮುಸ್ಲಿಮಿನ ವರದಿಯಾಗಿದೆ. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–2385)

ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಹಾಬರಲ್ಲಿ ಅತ್ಯಂತ ಪ್ರಿಯರು ಯಾರಾಗಿದ್ದರು ಎಂದು ಅಬ್ದುಲ್ಲಾಹ್ ಬಿನ್ ಶಖೀಖ್ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹುರೊಡನೆ ಕೇಳಿದರು. ಹಝ್ರತ್ ಅಬೂಬಕ್ಕರ್(ರ) ಎಂದು ಹಝ್ರತ್ ಆಯಿಶಾ(ರ) ಹೇಳಿದರು. ಅವರ ನಂತರ ಯಾರೆಂದು ಕೇಳಿದರು. ಹಝ್ರತ್ ಉಮರ್(ರ) ಎಂದು ಹಝ್ರತ್ ಆಯಿಶಾ(ರ) ಹೇಳಿದರು. ಅವರ ನಂತರ ಯಾರೆಂದು ಕೇಳಿದರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಎಂದು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹು ಹೇಳಿದರು. ಅನಂತರ ಯಾರೆಂದು ಕೇಳಿದರು.ಆಗ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹು ಏನೂ ಉತ್ತರಿಸದೆ ಮೌನವಾದರು ಎಂದು ವರದಿಗಾರ ಹೇಳುತ್ತಾರೆ. (ಜಾಮರ ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3657)

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹೇಳುತ್ತಾರೆ: ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹರ ದೃಷ್ಟಿಯಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರ ಆದರಣೀಯ ಸ್ಥಾನ ಎಷ್ಟಿತ್ತೆಂದರೆ, ಅವರ ಪ್ರಕಾರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ನಿಧನದ ನಂತರ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಜೀವಂತವಾಗಿ ಇದ್ದಿದ್ದರೆ, ಅವರೇ ಖಲೀಫರಾಗುತ್ತಿದ್ದರು. (ಸೀರತ್ ಖಾತುಮುನ್ನಬೀಯೀನ್, ಲೇಖಕ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–123)

ಒಂದು ವರದಿಯಲ್ಲಿ ಹೀಗೆ ಬಂದಿದೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ತನ್ನ ಮರಣ ಸಮೀಪಿಸಿದಾಗ ಹೀಗೆ ಹೇಳಿದ್ದರು: ಇಂದು ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಜೀವಂತವಾಗಿದ್ದರೆ, ಖಲೀಫರಾಗಲು ನಾನು ಅವರ ನಾಮ ನಿರ್ದೇಶಿಸುತ್ತಿದ್ದೆ. ಅವರ ನಾಮವನ್ನು ಏಕೆ ನಿರ್ದೇಶಿಸಿದೆ ಎಂದು ಇದರ ಬಗ್ಗೆ ನನ್ನ ಪ್ರಭು ನನ್ನೊಡನೆ ಕೇಳಿದರೆ, ಹಝ್ರತ್ ಅಬೂ ಉಬೈದ ಈ ಸಮುದಾಯದ ಅಮೀನ್ ಆಗಿರುವರು ಎಂದು ನಿನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದನ್ನು ನಾನು ಕೇಳಿದ್ದೇನೆ. ಅದಕ್ಕಾಗಿ ಅವರನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದ್ದೆ ಎಂದು ನಾನು ಹೇಳುವೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–315, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಅಬೂ ಉಬೈದ(ರ) ವಿಶ್ವಾಸ ಕೈಗೊಂಡಾಗ ಅವರ ತಂದೆ ಅವರಿಗೆ ತುಂಬ ಕಷ್ಟಗಳನ್ನು ಕೊಡುತ್ತಿದ್ದರು. ಇಥಿಯೋಪಿಯಾಗೆ ವಲಸೆ ಹೋದ ಜನರಲ್ಲಿ ಸಹ ಹಝ್ರತ್ ಅಬೂ ಉಬೈದ(ರ) ಇದ್ದರು. ಹಝ್ರತ್ ಅಬೂ ಉಬೈದ(ರ) ಮದೀನಗೆ ಹಿಜ್‌ರತ್ ಮಾಡಿ ಬಂದಾಗ, ಅವರನ್ನು ನೋಡಿಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖ ಸಂತೋಷದಿಂದ ಹೊಳೆಯುತ್ತಿತ್ತು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಮುಂದೆ ಹೋಗಿ ಹಝ್ರತ್ ಅಬೂ ಉಬೈದರನ್ನು ಆಲಂಗಿಸಿದರು. ಅವರು ಹಝ್ರತ್ ಕುಲ್ಸೂಮ್ ಬಿನ್ ಹದಮ್‌ರ ಮನೆಯಲ್ಲಿ ನೆಲೆಸಿದರು. (ರೌಶನ್ ಸಿತಾರೆ, ಲೇಖಕರು: ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–11–12) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–313, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಅಬೂ ಉಬೈದರ(ರ) ಸಾಹೋದರ್ಯ ಸಂಬಂಧದ ಬಗ್ಗೆ ಹಲವು ವರದಿಗಳು ಇವೆ. ಕೆಲವರ ಪ್ರಕಾರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಸಾಹೋದರ್ಯ ಸಂಬಂಧವನ್ನು ಹಝ್ರತ್ ಅಬೂಹುದೈಫರು ಸ್ವತಂತ್ರಗೊಳಿಸಿದ ಗುಲಾಮರಾದ ಹಝ್ರತ್ ಸಾಲಿಮ್‌ರೊಂದಿಗೆ ಮಾಡಿದ್ದರು. ಕೆಲವರ ಪ್ರಕಾರ ಅವರ ಸಾಹೋದರ್ಯ ಸಂಬಂಧವನ್ನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮರೊಂದಿಗೆ ಸ್ಥಾಪಿಸಿದರು.ಇನ್ನು ಕೆಲವರ ಪ್ರಕಾರ ಅವರ ಸಾಹೋದರ್ಯ ಸಂಬಂಧವನ್ನು ಹಝ್ರತ್ ಸಅದ್ ಬಿನ್ ಮಆಧ್‌ರೊಂದಿಗೆ ಸ್ಥಾಪಿಸಿಲಾಗಿತ್ತು ಎಂದು ಇದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–313, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಅಲ್‌ಅಸಾಬ ಫೀ ಮಾರಿಫತಿಸ್ಸಹಾಬ, ಭಾಗ–3, ಪುಟ–476, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2005)

ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಬದ್ರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–316, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಬದ್ರ್ ಯುದ್ಧದ ವೇಳೆ ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರಿಗೆ(ರ) 41 ವಯಸ್ಸಾಗಿತ್ತು. ಬದ್ರ್ ಯುದ್ಧದ ವೇಳೆ ಹಝ್ರತ್ ಉಬೈದ ಬಿನ್ ಜರಾಹ್(ರ) ಮುಸ್ಲಿಮರ ಪರವಾಗಿ ಯುದ್ಧ ಮೈದಾನಕ್ಕೆ ಬಂದಾಗ, ಅವರ ತಂದೆ ಸತ್ಯನಿಷೇಧಿಗಳ ಪರವಾಗಿ ಯುದ್ಧ ಮೈದಾನಕ್ಕೆ ಬಂದಿದ್ದರು. ತಂದೆ ಮತ್ತು ಮಗನು ಮುಖಾಮುಖಿಯಾದರು. ಯುದ್ಧದ ಸಂದರ್ಭದಲ್ಲಿ ತಂದೆಯು ಮಗನನ್ನು ನಿಶಾನೆಪಡಿಸಲು ಶ್ರಮಿಸಿದ್ದರು. ಆದರೆ ಮಗನಾದ ಹಝ್ರತ್ ಉಬೈದ(ರ) ತನ್ನನ್ನು ತಂದೆಯ ನಿಶಾನೆಯಿಂದ ತಪ್ಪಿಸಿಕೊಂಡು ರಕ್ಷೆಪಡುತ್ತಿದ್ದರು. ಆದರೆ ತಂದೆಯು ಅವರ ಬೆನ್ನಟ್ಟುತ್ತಿದ್ದರು. ತಂದೆಯು ಮಗನನ್ನು ಹೇಗಾದರೂ ಕೊಲ್ಲಲ್ಲು ಪ್ರಯತ್ನಿಸುತ್ತಿದ್ದರು. ಮಗನಾದ ಅಬೂ ಉಬೈದರಿಗೂ(ರ) ಅದರ ಅವಕಾಶವಿತ್ತು. ಅವರು ಸಹ ತಂದೆಯನ್ನು ಕೊಲ್ಲಬಹುದಾಗಿತ್ತು. ಆದರೆ ಅವರು ತಂದೆಯಿಂದ ರಕ್ಷೆಪಡಲು ಪ್ರಯತ್ನಿಸುತ್ತಿದ್ದರು. ತಂದೆಯನ್ನು ಕೊಲ್ಲಲ್ಲು ಬಯಸಿರಲಿಲ್ಲ ಹಾಗೂ ಸ್ವತಃ ಅವರ ಕೈಯಿಂದ ಕೊಲ್ಲಲ್ಲು ಸಹ ಬಯಸಿರಲಿಲ್ಲ. ಆದರೆ ತಂದೆಯು ತನ್ನ ಬೆನ್ನು ಬಿಡುವುದೇ ಇಲ್ಲ ಎಂದು ಹಝ್ರತ್ ಉಬೈದ(ರ) ನೋಡಿದಾಗ, ದೇವನ ಏಕತ್ವದ ಆವೇಶ ರಕ್ತಸಂಬಂಧದ ಮೇಲೆ ಮೇಲುಗೈ ಸಾಧಿಸಿತು. ಹೀಗೆ ತಂದೆಯಾದ ಅಬ್ದುಲ್ಲಾಹ್ ತನ್ನ ಮಗನಾದ ಹಝ್ರತ್ ಉಬೈದ ಬಿನ್ ಜರಾಹ್‌ರ(ರ) ಕೈಯಿಂದ ಕೊಲ್ಲಲ್ಪಟ್ಟರು. ಎಂದರೆ, ಕೊನೆಗೆ ಅವರನ್ನು ಕೊಲ್ಲದೆ ಇರಲು ನಿರ್ವಾಹವಿರಲಿಲ್ಲ. (ಸೈರುಸ್ಸಹಾಬ, ಸಂಪುಟ–2, ಪುಟ–124, ದಾರುಲ್ ಇಶಾಅತ್ ಕರಾಚಿ)

ಉಹದ್ ಯುದ್ಧದ ದಿವಸ, ಅಬ್ದುಲ್ಲಾಹ್ ಬಿನ್ ಖುಮಿಅ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಜೋರಾಗಿ ಕಲ್ಲುಗಳನ್ನು ತೂರಿದನು. ಇದರಿಂದ ಅವರ ಅನುಗ್ರಹೀತ ಮುಖಕ್ಕೆ ಗಾಯವಾಯಿತು. ಅವರ ಹಲ್ಲುಗಳು ಮುರಿದುಹೋಯಿತು. ಆಗ ಅವನು ನಾನು ಇಬ್ನು ಖುಮೈಅ ಎಂದು ಘೋಷಿಸಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮುಖದಿಂದ ರಕ್ತವನ್ನು ಒರೆಸಿ ಸ್ವಚ್ಛಗೊಳಿಸುತ್ತಾ ಹೇಳಿದರು: ಅಲ್ಲಾಹನು ನಿನ್ನನ್ನು ಅವಮಾನಿಸಲಿ. ವರದಿಗಾರ ಹೇಳುತ್ತಾರೆ: ಅನಂತರ ಅಲ್ಲಾಹನ ವಿಧಿ ಪ್ರಕಾರ ಒಂದು ಗುಡ್ಡೆಗಾಡಿನ ಆಡು ಬಂದು ಅದರ ಕೊಂಬಿನಿಂದ ಅವನನ್ನು ಸತತವಾಗಿ ತಿವಿದು ಕೊಂದು ಹಾಕಿತ್ತು. (ಮುಜಮುಲ್ ಕಬೀರ್ ಲಿತ್ತಿಬ್ರಾನಿ, ಪುಟ–154, ಹದೀಸ್–7596, ಇಬ್‌ನೆ ತೈಮಿನ ಖಾಹಿರ, 1994)

ಈ ಘಟನೆಯ ಬಗ್ಗೆ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದ್ದಾಗಿ ಹಝ್ರತ್ ಆಯಿಶ ಹೀಗೆ ವರದಿ ಮಾಡುತ್ತಾರೆ: ಉಹದ್ ಯುದ್ಧದ ದಿನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಎಷ್ಟು ಜೋರಾಗಿ ಕಲ್ಲುಗಳನ್ನು ಎಸೆಯಲಾಯಿತು ಎಂದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿರಸ್ತ್ರಾಣದ ಎರಡು ಬದಿಗಳು ತುಂಡಾಗಿ ಪೈಗಂಬರರ ಮುಖದ ಒಳಗೆ ನುಗ್ಗಿತ್ತು. ಆಗ ನಾನು ಓಡುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಧಾವಿಸುತ್ತಿದ್ದೆ.ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹಾರುತ್ತಾ ಹೋಗುವ ರೀತಿಯಲ್ಲಿ ಬಹಳ ವೇಗವಾಗಿ ಹೋಗುವುದನ್ನು ನಾನು ಕಂಡೆ.ಹೇ ಅಲ್ಲಾಹ್, ಈ ವ್ಯಕ್ತಿಯನ್ನು ಸಂತೋಷಕ್ಕೆ ಕಾರಣವಾಗಿಸು ಎಂದು ನಾನು ದುಆ ಮಾಡಿದೆ. ಎಂದರೆ, ಈ ವ್ಯಕ್ತಿಯಿಂದ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ನಮಗೆ ಸಂತೋಷವುಂಟಾಗಲಿ ಎಂದು. ನನಗಿಂತ ಮುಂಚೆ ಅಲ್ಲಿಗೆ ತಲುಪಿದ ವ್ಯಕ್ತಿ ಅಬೂ ಉಬೈದ ಬಿನ್ ಜರಾಹ್ ಆಗಿದ್ದರು ಎಂದು ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರ ಸಮೀಪಕ್ಕೆ ತಲುಪಿದಾಗ ತಿಳಿದುಬಂತು. ಅವರು ನನ್ನೊಡನೆ ಹೇಳಿದರು: ಹೇ ಅಬೂಬಕ್ಕರ್, ನಾನು ಅಲ್ಲಾಹನ ಹೆಸರಿನಲ್ಲಿ ಹೇಳುತ್ತೇನೆ, ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಮುಖದಿಂದ ಶಿರಸ್ತ್ರಾಣದ ವಲಯವನ್ನು ಕಿತ್ತೆಗೆಯಲು ನನಗೆ ಅವಕಾಶಮಾಡಿಕೊಡು. ಎಂದರೆ, ದವಡೆಯ ಒಳಗೆ ಸಿಲುಕಿಕೊಂಡಿದ್ದ ಶಿರಸ್ತ್ರಾಣವನ್ನು ಹೊರಗೆ ತೆಗೆಯಲು ಬಿಡು ಎಂದು. ನಾನು ಹಾಗೆ ಮಾಡಲು ಅನುಮತಿಕೊಟ್ಟೆ. ಹೀಗೆ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಶಿರಸ್ತ್ರಾಣದ ಎರಡು ಬದಿಯಲ್ಲಿ ಒಂದು ಬದಿಯನ್ನು ತನ್ನ ಹಲ್ಲುಗಳಿಂದ ಕಚ್ಚಿಕೊಂಡು ಎಷ್ಟು ಜೋರಾಗಿ ಕಿತ್ತೆಳೆದರೆಂದರೆ, ಅದನ್ನು ಎಳೆದ ನಂತರ, ಅದರ ಶಕ್ತಿಯಿಂದ ಅವರು ಹಿಂದಕ್ಕೆ ಎಸೆಯಲ್ಪಟ್ಟು ನೆಲಕ್ಕೆ ಬಿದ್ದುಬಿಟ್ಟರು. ಆ ಶಿರಸ್ತ್ರಾಣ ಅಷ್ಟು ಗಟ್ಟಿಯಾಗಿ ಒಳಗೆ ನುಗ್ಗಿತ್ತು. ಇದರಿಂದ ಅಬೂ ಉಬೈದರ ಮುಂದಿನ ಒಂದು ಹಲ್ಲು ಮುರಿದುಹೋಯಿತು. ಅನಂತರ ಅವರ ಶಿರಸ್ತ್ರಾಣದ ಇನ್ನೊಂದು ಬದಿಯನ್ನು ಸಹ ಹಲ್ಲುಗಳಿಂದ ಕಚ್ಚಿ ಜೋರಾಗಿ ಹೊರಗೆ ಎಳೆದರು. ಹೀಗೆ ಅವರ ಇನ್ನೊಂದು ಹಲ್ಲು ಸಹ ಮುರಿದುಹೋಯಿತು. ಉಹದ್ ಯುದ್ಧದ ವೇಳೆ ಜನರು ಚದುರಿಹೋದಾಗ, ಸ್ಥಿರಚಿತ್ತರಾಗಿ ನಿಂತಿದ್ದ ಕೆಲವು ವ್ಯಕ್ತಿಗಳಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹು ಸಹ ಒಳಪಡುತ್ತಾರೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–313, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಿಜರೀ ಧುಲ್‌ಖಅ್‌ದ 6ರಿಗೆ ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಸಂಧಿಪತ್ರ ಬರೆಯಲಾದಾಗ, ಒಪ್ಪಂದದ ಎರಡು ನಕಲು ಪ್ರತಿಯನ್ನು ತಯಾರಿಸಲಾಗಿತ್ತು. ಉಭಯ ಪಕ್ಷಗಳಿಂದ ಹಲವು ಆದರಣೀಯ ವ್ಯಕ್ತಿಗಳು ಸಾಕ್ಷಿಯೆಂಬ ನೆಲೆಯಲ್ಲಿ ಸಂಧಿಪತ್ರದಲ್ಲಿ ಸಹಿ ಹಾಕಿದ್ದರು. ಮುಸ್ಲಿಮರ ಕಡೆಯಿಂದ ಸಹಿ ಮಾಡಿದವರಲ್ಲಿ ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮತ್ತು ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಸೇರುತ್ತಾರೆ. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ಪುಟ–769)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರನ್ನು ಹಲವು ಯುದ್ಧಗಳಿಗೆ ಮತ್ತು ದಂಡಯಾತ್ರೆಗಾಗಿ ಕಳುಹಿಸಿದ್ದರು.

ಧುಲ್‌ಖಸ್ಸದ ಕಡೆಗೆ ದಂಡಯಾತ್ರೆ: ಈ ಸೈನ್ಯವನ್ನು ಹಿಜರೀ ರಬೀಉಲ್ ಆಖಿರ್ 7 ತಾರೀಕಿಗೆ ಕಳುಹಿಸಲಾಗಿತ್ತು. ಇದರ ಬಗ್ಗೆ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ. ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ:

ರಬೀಉಲ್ ಆಖಿರ್ ತಿಂಗಳಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಅನ್ಸಾರಿಯನ್ನು ಧುಲ್‌ಕಸ್ಸದ ಕಡೆಗೆ ರವಾನಿಸಿದರು. ಅದು ಮದೀನದಿಂದ ಇಪ್ಪತ್ತು ಮೈಲು ದೂರದಲ್ಲಿ ಆಗಿತ್ತು. ಅಲ್ಲಿ ಆ ಕಾಲದಲ್ಲಿ ಬನೂ ಸಅ್‌ಲಬ ಗೋತ್ರದವರು ನೆಲೆಸಿದ್ದರು. ಆ ಗೋತ್ರದ ನೂರು ಯುವಕರು ಯುದ್ಧಕ್ಕಾಗಿ ತಯಾರಾಗಿ ನಿಂತಿರುವುದನ್ನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಮತ್ತು ಅವರ ಹತ್ತು ಸಂಗಡಿಗರು ರಾತ್ರಿ ಸಮಯದಲ್ಲಿ ಅಲ್ಲಿ ತಲುಪಿದಾಗ ಕಂಡರು. ಸಹಾಬರ ಸಂಘಕ್ಕಿಂತ ಅವರ ಪಾರ್ಟಿಯ ಸಂಖ್ಯೆ ಹತ್ತು ಪಟ್ಟು ಅಧಿಕವಾಗಿತ್ತು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಬೇಗನೇ ಅವರ ಸೈನ್ಯದ ಮುಂದೆ ಸಾಲಾಗಿ ತನ್ನ ಸಂಘವನ್ನು ನಿಲ್ಲಿಸಿದರು. ಮುಸ್ಲಿಮರ ಸಂಘ ಯುದ್ಧದ ಉದ್ದೇಶದಿಂದ ಹೋಗಿದ್ದರೆ, ಇಷ್ಟು ಕಡಿಮೆ ಸಂಖ್ಯೆಯಲ್ಲಿ ಹೋಗುತ್ತಿರಲಿಲ್ಲ. ಹೇಗಿದ್ದರೂ ಉಭಯ ಪಕ್ಷಗಳ ನಡುವೆ ಬಹಳವಾಗಿ ಬಾಣ ಹೂಡುವಿಕೆ ನಡೆಯಿತು.ಅನಂತರ ಸಹಾಬರ ಬೆರಳೆಣಿಕೆಯಷ್ಟು ಮಾತ್ರವಿದ್ದ ಸಂಘದ ಮೇಲೆ ಸತ್ಯನಿಷೇಧಿಗಳು ಆಕ್ರಮಣ ನಡೆಸಿತು. ಸತ್ಯನಿಷೇಧಿಗಳ ಪಾರ್ಟಿಯ ಸಂಖ್ಯೆ ಹೆಚ್ಚು ಇದ್ದ ಕಾರಣ ಇಸ್ಲಾಮಿನ ತ್ಯಾಗಿಗಳಾದ ಈ ಹತ್ತು ವ್ಯಕ್ತಿಗಳು ಶಹೀದ್ ಆದರು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮರ ಸಂಗಡಿಗರೆಲ್ಲರು ಹುತಾತ್ಮರಾದರು. ಆದರೆ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಪಾರಾದರು. ಏಕೆಂದರೆ, ಅವರನ್ನು ಇತರರ ಹಾಗೆ ಮೃತರೆಂದು ಭಾವಿಸಿ, ಅವರ ವಸ್ತ್ರ ಇತ್ಯಾದಿಗಳನ್ನೆಲ್ಲ ಕಳಚಿ ಅವರನ್ನು ಉಪೇಕ್ಷಿಸಿ ಹೊರಟುಹೋದರು.ಬಹುಶಃ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಕೂಡ ಅಲ್ಲಿ ಬಿದ್ದುಕೊಂಡು ಸಾಯುತ್ತಿದ್ದರು, ಆದರೆ, ಭಾಗ್ಯವಶಾತ್, ಒಬ್ಬ ಮುಸ್ಲಿಮ್ ವ್ಯಕ್ತಿ ಅಲ್ಲಿಂದ ದಾಟಿಹೋಗುತ್ತಿದ್ದಾಗ, ಹಝ್ರತ್ ಮುಹಮ್ಮದ್ ಬಿನ್ ಮಸ್ಲಮರನ್ನು ಗುರುತಿಸಿ ಅವರನ್ನು ಎತ್ತಿಕೊಂಡು ಮದೀನಕ್ಕೆ ತಲುಪಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಸ್ಥಿತಿಗತಿಗಳ ಬಗ್ಗೆ ಗೊತ್ತಾದಾಗ, ಅವರು ಖುರೈಶಿ ಗೋತ್ರದವರೂ ಶ್ರೇಷ್ಠ ಸಹಾಬಿಯರಲ್ಲಿ ಸೇರಿದವರೂ ಆಗಿದ್ದ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರನ್ನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮರ ಪ್ರತಿಕಾರ ತೀರಿಸಲು ಧುಲ್‌ಖುಸ್ಸದ ಕಡೆಗೆ ರವಾನೆ ಮಾಡಿದರು. ಈ ಸಮಯದಲ್ಲಿ ಬನೂ ಸಅ್‌ಲಬದ ಜನರು ಮದೀನದ ಆಸುಪಾಸಿನ ಹಳ್ಳಿಗಳ ಮೇಲೆ ಹಲ್ಲೆ ನಡೆಸಲು ಉದ್ದೇಶಿಸಿರುವರು ಎಂಬ ಮಾಹಿತಿ ಲಭಿಸಿದ ಕಾರಣದಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರ ನಾಯಕತ್ವದಲ್ಲಿ ಸಿದ್ಧರಾದ ನಲ್ವತ್ತು ಸಹಾಬರ ಸಂಘವನ್ನು ಕಳುಹಿಸಿದರು. ರಾತ್ರಿ ಸಮಯದಲ್ಲಿ ಹೊರಟು, ಬೆಳಿಗ್ಗಿನ ಹೊತ್ತು ಅಲ್ಲಿ ತಲುಪಲು ಸಹ ಆಜ್ಞಾಪಿಸಿದ್ದರು. ಹಝ್ರತ್ ಉಬೈದ ಬಿನ್ ಜರಾಹ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶದಂತೆ, ಬೆಳಿಗ್ಗಿನ ಸಮಯದಲ್ಲಿ ಅವರ ಮೇಲೆ ಆಕ್ರಮಣ ನಡೆಸಿದರು. ಅಚಾನಕ್ಕಾದ ಈ ಹಲ್ಲೆಯ ಕಾರಣದಿಂದ ಗಾಬರಿಗೊಂಡು, ಸ್ವಲ್ಪ ಹೊತ್ತು ಹೋರಾಡಿದ ನಂತರ ಶತ್ರುಗಳು ಓಡಿಹೋಗಿ, ಸಮೀಪದ ಪರ್ವತಗಳ ಮರೆಯಲ್ಲಿ ಅವಿತುಕೊಂಡರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹು ಯುದ್ಧ ಸಂಪತ್ತುಗಳನ್ನು ವಶಪಡಿಸಿ ಮದೀನದ ಕಡೆಗೆ ಮರಳಿಹೋದರು. (ಸೀರತ್ ಖಾತುಮುನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–668)

ಇದು ಅವರು ಮಾಡಿದ ದೌರ್ಜನ್ಯದ ಪ್ರತೀಕಾರ ಮಾಡಲಿಕ್ಕೆ ಅಥವಾ ಅವರಿಗೆ ಶಿಕ್ಷೆ ನೀಡಲಿಕ್ಕೆ ಮಾಡಲಾದ ಹಲ್ಲೆಯಾಗಿತ್ತು.

ಎರಡನೇ ಯುದ್ಧದ ಹೆಸರು ಧಾತುಸ್ಸಲಾಸಿಲ್ ಎಂದಾಗಿತ್ತು.ಈ ಯುದ್ಧವನ್ನು ಧಾತುಸ್ಸಲಾಸಿಲ್ ಎಂದು ಹೇಳಲು ಕಾರಣವೇನೆಂದರೆ, ಒಟ್ಟಾಗಿ ಹೋರಾಡಲಿಕ್ಕಾಗಿ ಮತ್ತು ಯಾರೂ ಓಡಿಹೋಗದಿರಲಿಕ್ಕಾಗಿ ಶತ್ರುಗಳ ಸೈನ್ಯದ ಎಲ್ಲರೂ ಪರಸ್ಪರ ತಮ್ಮನ್ನು ತಾವೇ ಸರಪಳಿಗಳಿಂದ ಕಟ್ಟಿಹಾಕಿದ್ದರು. ಎಂದರೆ, ಸಾಲುಸಾಲಾಗಿ ಒಟ್ಟಾಗಿ ನಿಂತು ಹೋರಾಡಿಲಿಕ್ಕಾಗಿ ಹೀಗೆ ಮಾಡಿದ್ದರು. ಇದರ ಮತ್ತೊಂದು ಕಾರಣವೂ ಹೇಳಲಾಗುತ್ತದೆ. ಅದೇನೆಂದರೆ, ಆ ಜಾಗದಲ್ಲಿ ಒಂದು ಕಾರಂಜಿಯಿತ್ತು. ಅದರ ಹೆಸರು ಅಸ್ಸಿಲ್‌ಸಿಲ್ ಎಂದಾಗಿತ್ತು. ಕೆಲವರ ಪ್ರಕಾರ ಹಿಜರೀ 8ಗೆ ಮತ್ತು ಕೆಲವರ ಪ್ರಕಾರ ಹಿಜರೀ 7ಗೆ ಬನೂ ಖುಝಾಅರ ಜನರು ಮದೀನದ ಮೇಲೆ ಆಕ್ರಮಣ ನಡೆಸಲು ಯೋಜನೆ ಹಾಕುತ್ತಿದ್ದಾರೆ ಎಂಬ ಮಾಹಿತಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಲಭಿಸಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ರ್ ಬಿನ್ ಆಸ್‌ರನ್ನು(ರ) ಮುನ್ನೂರು ಮುಹಾಜಿರರು ಮತ್ತು ಅನ್ಸಾರರೊಂದಿಗೆ ಅದನ್ನು ತಡೆಯಲು ರವಾನೆ ಮಾಡಿದರು. ಸೈನ್ಯದಲ್ಲಿ 30 ಕುದುರೆಗಳಿದ್ದುವು.ಈ ಸ್ಥಳ ಮದೀನದಿಂದ ಹತ್ತು ದಿನದ ಯಾತ್ರೆಯನ್ನು ಮಾಡಿ ತಲುಪುವಷ್ಟು ದೂರದಲ್ಲಿತ್ತು. ಶತ್ರುಗಳ ಸಂಖ್ಯೆ ಬಹಳ ಅಧಿಕವಿದೆ, ಆದ್ದರಿಂದ ನೆರವಿಗಾಗಿ ಹೆಚ್ಚಿನ ಸೈನ್ಯವನ್ನು ಕಳುಹಿಸಬೇಕೆಂದು ಎಂದು ಹೇಳಿ ಬನೂ ಖುಝಾಅದ ಪ್ರದೇಶಕ್ಕೆ ತಲುಪಿದ ನಂತರ ಹಝ್ರತ್ ಅಮ್ರ್ ಬಿನ್ ಆಸ್‌ರವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂದೇಶ ಕಳುಹಿಸಿದರು.ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂದೇಶ ಲಭಿಸಿದ ಕೂಡಲೇ, ಮುಹಾಜಿರರು ಮತ್ತು ಅನ್ಸಾರರು ಒಳಗೊಂಡಿರುವ ಒಂದು ಸಂಘವನ್ನು ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹುರ ನಾಯಕತ್ವದಲ್ಲಿ ಅವರ ನೆರವಿಗಾಗಿ ರವಾನಿಸಿದ್ದರು.ಅಮ್ರ್ ರಝಿಯಲ್ಲಾಹು ಅನ್‌ಹುರ ಬಳಿಗೆ ಹೋಗಿ ಸೇರಲು ಮತ್ತು ಭಿನ್ನತೆ ಉಂಟುಮಾಡದಿರಲು ಸಹ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರ್ದೇಶಿಸಿದ್ದರು. ಎಂದರೆ, ಒಮ್ಮತಾಭಿಪ್ರಾಯದಿಂದ ತೀರ್ಮಾನಗಳನ್ನು ಕೈಗೊಳ್ಳಬೇಕೆಂದು ಹೇಳಿದರು. ನೆರವಿಗಾಗಿ ಹೋದ ಸೈನ್ಯವು ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ಸೈನ್ಯದೊಂದಿಗೆ ಸೇರಿದಾಗ, ಸಂಪೂರ್ಣ ಸೈನ್ಯದ ನಾಯಕತ್ವ ಯಾರು ವಹಿಸುವುದು ಎಂಬ ಸವಾಲು ಉದಯಿಸಿತು. ಹಝ್ರತ್ ಅಬೂ ಉಬೈದರ(ರ) ಸ್ಥಾನದ ದೃಷ್ಟಿಯಲ್ಲಿ ನೋಡುವುದಾದರೆ, ಅವರು ನಾಯಕತ್ವಕ್ಕೆ ಅರ್ಹರಾಗಿದ್ದರು. ಆದರೆ ನಾಯಕತ್ವವನ್ನು ನಾನೇ ವಹಿಸುವೆನು ಎಂದು ಹಝ್ರತ್ ಅಮ್ರ್ ಬಿನ್ ಆಸ್(ರ) ಒತ್ತಾಯಪೂರ್ವಕವಾಗಿ ಹೇಳಿದ್ದ ಕಾರಣದಿಂದ ಮತ್ತು ಭಿನ್ನತೆ ಮಾಡಬಾರದು ಎಂಬ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶವೂ ಇದ್ದ ಕಾರಣದಿಂದ ಹಝ್ರತ್ ಅಬೂ ಉಬೈದ(ರ) ಸಂತೋಷದಿಂದ ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ನೇತೃತ್ವವನ್ನು ಅಂಗೀಕರಿಸಿದರು. ಅವರ ನಾಯಕತ್ವದ ಅಡಿಯಲ್ಲಿ ಅತ್ಯಂತ ಶೌರ್ಯದಿಂದ ಶತ್ರುಗಳ ವಿರುದ್ಧ ಹೋರಾಡಿ ಶತ್ರುಗಳನ್ನು ಸೋಲಿಸಿದರು. ವಿಜಯದ ನಂತರ ಮದೀನಕ್ಕೆ ಬಂದಾಗ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಜರಾಹ್‌ರ(ರ) ಅನುಸರಣೆಯ ಕುರಿತು ಕೇಳಿದಾಗ, **ರಹಿಮಲ್ಲಾಹು ಅಬಾ ಉಬೈದ** ಎಂದು ಹೇಳಿದರು. ಎಂದರೆ, ಅವರು ಅನುಸರಣೆಯ ಉನ್ನತ ಮಟ್ಟವನ್ನು ಸ್ಥಾಪಿಸಿರುವರು, ಆದ್ದರಿಂದ ಅವರ ಮೇಲೆ ಅಲ್ಲಾಹನ ಕಾರುಣ್ಯ ವರ್ಷಿಸಲಿ. (ರಹ್ಮತ್ ದಾರೀನ್ ಕೆ ಸೌ ಶೇದಾಯಿ ಲೇಖಕರು ತಾಲಿಬ್ ಹಾಶ್ಮಿ, ಪುಟ–

33, ಅಲ್‌ಬದರ್ ಪಬ್ಲಿಕೇಶನ್ಸ್ ಉರ್ದು ಬಾಝಾರ್ ಲಾಹೋರ್, 2003) (ಶರಹ್ ಝುರ್‌ಖಾನಿ, ಸಂಪುಟ-2, ಪುಟ-357-360, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1996)

ಅನಂತರ ಸೈಫುಲ್ ಬಹ್ರ್ ಯುದ್ಧ: ಈ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭಾಗಿಯಾಗಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭಾಗಿಯಾಗಿರದ ಯುದ್ಧಗಳನ್ನು ಸರಿಯಾ ಎಂದು ಹೇಳಲಾಗುತ್ತದೆ. ಈ ಸೈನ್ಯ ಹಿಜರೀ 8ಗೆ ಸಮುದ್ರದ ದಡದ ಕಡೆಗೆ ರವಾನೆಯಾಗಿತ್ತು. ಅಲ್ಲಿ ಬನೂ ಜಹೀನದ ಒಂದು ಗೋತ್ರ ನೆಲೆಸಿತ್ತು. ಈ ಯುದ್ಧವನ್ನು ಜೈಶುಲ್ ಖಬ್‌ತ್ ಎಂದೂ ಹೇಳಲಾಗುತ್ತದೆ. ಇದಕ್ಕೆ ಈ ಹೆಸರು ಬರಲು ಕಾರಣವೇನೆಂದರೆ, ಆಹಾರದ ಕೊರತೆಯ ಕಾರಣದಿಂದ ಸಹಾಬರು ಅಲ್ಲಿದ್ದ ಖಬತ್ ಎಂಬ ಹೆಸರಿನ ಎಲೆಗಳನ್ನು ತಿನ್ನಲು ನಿರ್ಬಂಧಿತರಾದರು. ಖ಼ಬತ್‌ನ ಒಂದು ಅರ್ಥ ಎಲೆಗಳ ಉದುರುವಿಕೆ ಎಂದೂ ಆಗಿದೆ. ಈ ಯುದ್ಧದ ಪ್ರಸ್ತಾಪ ಸಹೀಹ್ ಬುಖ಼ಾರಿಯಲ್ಲೂ ಇದೆ. ಇದರ ಬಗ್ಗೆ ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ಕಳುಹಿಸಿದರು. ನಾವು ಮುನ್ನೂರು ಸವಾರರಿದ್ದರು. ನಮ್ಮ ಅಮೀರ್ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಆಗಿದ್ದರು. ಖುರೈಶಿನ ವ್ಯಾಪಾರ ಸಂಘದ ಮೇಲ್ನೋಟವಹಿಸುತ್ತಾ ನಿಂತಿದ್ದೆವು. ಯುದ್ಧದ ಯಾವುದೇ ಉದ್ದೇಶವಿರಲಿಲ್ಲ. ಸಮುದ್ರದ ದಡದಲ್ಲಿ ನಾವು ಅರ್ಧ ತಿಂಗಳ ವರೆಗೆ ಇದ್ದುವು. ನಮಗೆ ಅತಿ ಕಠಿಣವಾದ ಹಸಿವು ಇತ್ತು. ಹಸಿವಿನಂದ ನಾವು ಎಲೆಗಳನ್ನು ಕೂಡ ತಿಂದೆವು. ಕೆಲವು ಸಂದರ್ಭಗಳಲ್ಲಿ ದಂಡಯಾತ್ರೆಗಳು ಯುದ್ಧಗಳ ಉದ್ದೇಶದಿಂದ ಮಾಡಲಾಗುತ್ತಿರಲಿಲ್ಲ. ಬೇರೆ ಉದ್ದೇಶಗಳಿರುತ್ತಿದ್ದುವು. ಆದರೆ, ಕೆಲವು ಬಾರಿ ಯುದ್ಧಗಳನ್ನು ಮಾಡಬೇಕಾಗಿ ಸಹ ಬರುತ್ತಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಭಾಗಿಯಾಗಿರದ ಇಂತಹ ದಂಡಯಾತ್ರೆಯನ್ನು ಅರಬಿಯಲ್ಲಿ ಸರಿಯಾ ಎಂದು ಹೇಳಲಾಗುತ್ತದೆ. ಹೇಗಿದ್ದರೂ ಅವರು ಹೇಳುತ್ತಾರೆ: ನಾವು ಎಲೆಗಳನ್ನು ಕೂಡ ತಿಂದೆವು. ಆದ್ದರಿಂದ ಈ ಸೈನ್ಯವನ್ನು ಜೈಶುಲ್ ಖಬ್ತ್ ಎಂದು ಹೇಳಲಾಗುತ್ತದೆ. ಈ ನಡುವೆ ಸಮುದ್ರವು ನಮಗಾಗಿ ಒಂದು ಜೀವಿಯನ್ನು ಹೊರಗೆ ಹಾಕಿತು. ಎಂದರೆ, ಒಂದು ಜೀವಿ ಸತ್ತು ಸಮುದ್ರದಿಂದ ಹೊರಗೆಬಂದಿತ್ತು ಅಥವಾ ಸಮುದ್ರದ ಹೊರಗೆ ಬಂದು ಸತ್ತುಹೋಯಿತು. ಅದನ್ನು ಅಂಬರ್ ಎಂದು ಹೇಳಲಾಗುತ್ತದೆ. ಅದು ಒಂದು ಮೀನಾಗಿತ್ತು. ಬಹಳ ದೊಡ್ಡದಾದ ಒಂದು ಮೀನು. ನಾವು ಅದರ ಮಾಂಸವನ್ನು ಅರ್ಧ ತಿಂಗಳು ತಿಂದೆವು. ಅದರ ಕೊಬ್ಬನ್ನು ದೇಹದ ಮೇಲೆ ಒರೆಸುತ್ತಿದ್ದೆವು. ಹೀಗೆ ನಮ್ಮ ಶರೀರ ಹಿಂದಿನ ಹಾಗೆ ಪುಷ್ಠಿಗೊಂಡಿತು. ಒಂದು ಬಾರಿ ಸುಫ್‌ಯಾನ್ ಬಿನ್ ಐನಿಯ ತಮ್ಮ ವರದಿಯಲ್ಲಿ ಹೀಗೆ ಹೇಳಿರುವರು: ಹಝ್ರತ್ ಅಬೂ ಉಬೈದ[ರ] ಮೀನಿನ ಪಕ್ಕೆಲುಬುಗಳಿಂದ ಒಂದು ಎಲುಬನ್ನು ತೆಗೆದರು. ಅದನ್ನು ನಿಲ್ಲಿಸಿದರು. ಮತ್ತೆ ಒಬ್ಬ ಉದ್ದ ಮೈಕಟ್ಟಿನ ವ್ಯಕ್ತಿಯನ್ನು ಒಂಟೆಯ ಮೇಲೆ ಸವಾರ ಮಾಡಲು ಹೇಳಿ ಅದರ ಅಡಿಯಿಂದ ದಾಟಿಸಿದರು. ಹಝ್ರತ್ ಜಾಬಿರ್ ಹೇಳುತ್ತಾರೆ: ಸೈನ್ಯದಲ್ಲಿ ಒಬ್ಬ ವ್ಯಕ್ತಿಯು ಜನರ ಆಹಾರಕ್ಕಾಗಿ ಮೂರು ದಿವಸಗಳ ಕಾಲ ಮೂರು ಮೂರು ಒಂಟೆಗಳನ್ನು ಕೊಯ್ದರು. ಅನಂತರ ಹಝ್ರತ್ ಅಬೂ ಉಬೈದ[ರ] ಅವರನ್ನು ತಡೆದರು. ಅಮ್ರ್ ಬಿನ್ ದೀನಾರ್ ಹೇಳುತ್ತಿದ್ದರು: ಅಬೂ ಝುಕ್‌ವಾನ್ ನಮಗೆ ಹೇಳುತ್ತಿದ್ದರು. ಖೈಸ್ ಬಿನ್ ಸಅದ್ ತನ್ನ ತಂದೆಯೊಂದಿಗೆ ಹೇಳಿದರು: ನಾನು ಸಹ ಈ ಸೈನ್ಯದಲ್ಲಿ ಇದ್ದೆ. ಅವರಿಗೆ ಹಸಿವಾದಾಗ, ಹಝ್ರತ್ ಅಬೂ ಉಬೈದ[ರ] ಒಂಟೆಯನ್ನು ಕೊಯ್ಯಲು ಹೇಳಿದರು. ನಾನು ಒಂಟೆಯನ್ನು ಝಿಬಹ್ ಮಾಡಿದೆ. ಅನಂತರ ಅವರಿಗೆ ಹಸಿವು ಆದಾಗ, ಹಝ್ರತ್ ಅಬೂ ಉಬೈದ[ರ] ಒಂಟೆಯನ್ನು ಕೊಯ್ಯಲು ಹೇಳಿದರು. ನಾನು ಒಂಟೆಯನ್ನು ಝಿಬಹ್ ಮಾಡಿದೆ. ಅನಂತರ ಅವರಿಗೆ ಹಸಿವು ಆದಾಗ, ಹಝ್ರತ್ ಅಬೂ ಉಬೈದ[ರ] ಒಂಟೆಯನ್ನು ಕೊಯ್ಯಲು ಹೇಳಿದರು. ಹೀಗೆ ನಾನು ಒಂಟೆಯನ್ನು ಝಿಬಹ್ ಮಾಡಿದೆ. ಅನಂತರ ಈಗ ಎಂತಹ ಸ್ಥಿತಿ ಬಂದಿತ್ತೆಂದರೆ, ಅವರು ಸವಾರಿಗಾಗಿ ಕೊಂಡುಹೋದ ಒಂಟೆಗಳನ್ನೇ ಕೊಯ್ದು ತಿನ್ನುತ್ತಿದ್ದರು. ಖೈಸ್ ಹೇಳುತ್ತಾರೆ, ಪುನಃ ಹಸಿವಾದಾಗ, ಹಝ್ರತ್ ಅಬೂ ಉಬೈದ[ರ] ಒಂಟೆಯನ್ನು ಕೊಯ್ಯಲು ಹೇಳಿದರು. ಅನಂತರ ಒಂಟೆಯನ್ನು ಕೊಯ್ಯುವುದನ್ನು ತಡೆದರು.

ಇನ್ನೊಂದು ವರದಿಯಲ್ಲಿ ಹೀಗೆ ಬರುತ್ತದೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಜೈಶುಲ್ ಖಬ್‌ತಿನ ಸೈನ್ಯದೊಂದಿಗೆ ನಾವು ಹೊರಟೆವು. ಹಝ್ರತ್ ಅಬೂ ಉಬೈದರನ್ನು(ರ) ಅಮೀರರನ್ನಾಗಿ ಮಾಡಲಾಗಿತ್ತು. ನಮಗೆ ಕಠಿಣವಾದ ಹಸಿವು ಆದಾಗ, ಸಮುದ್ರವು ಒಂದು ಸತ್ತ ಮೀನನ್ನು ಹೊರಗೆ ಹಾಕಿತ್ತು. ಜೀವಂತವಾಗಿ ಬಂದಿರಲಿಲ್ಲ. ಸತ್ತ ಸ್ಥಿತಿಯಲ್ಲಿ ಹೊರಗೆ ಬಂದಿತ್ತು.ನಾವು ಇಂತಹ ಮೀನನ್ನು ಎಂದೂ ನೋಡಿರಲಿಲ್ಲ. ಬಹಳ ದೊಡ್ಡ ಮೀನಾಗಿತ್ತು.ಅದರ ಬಗ್ಗೆಗಿನ ವಿವರಣೆಯಿಂದ ಅದು ತಿಮಿಂಗಲವಾಗಿರಬಹುದು ಎಂದು ತೋರುತ್ತದೆ.ಅದನ್ನು ಅರಬಿಯಲ್ಲಿ ಅಂಬರ್ ಎಂದು ಹೇಳಲಾಗುತ್ತದೆ.ನಾವು ಇದರ ಮಾಂಸವನ್ನು ಅರ್ಧ ತಿಂಗಳ ತನಕ ತಿಂದೆವು.ಅನಂತರ ಹಝ್ರತ್ ಅಬೂ ಉಬೈದ[ರ] ಮೀನನ ಪಕ್ಕೆಲುಬುಗಳಿಂದ ಒಂದು ಎಲುಬನ್ನು ತೆಗೆದರು. ಸವಾರರು ಅದರ ಅಡಿಯಿಂದ ದಾಟಿದರು. ಅಬೂ ಝುಬೇರ್ ನನ್ನೊಡನೆ ಹೀಗೆಯೂ ಹೇಳಿದ್ದಾಗಿ ಇಬ್ನು ಜರೀಜ್ ಹೇಳುತ್ತಾರೆ: ಅವರು ಹಝ್ರತ್ ಜಾಬಿರ್ ಹೇಳಿದ್ದಾಗಿ ಕೇಳಿದ್ದರು: ತಿನ್ನಿರಿ, ಮೀನನ್ನು ತಿನ್ನಿರಿ ಎಂದು ಹಝ್ರತ್ ಅಬೂ ಉಬೈದ ಹೇಳುತ್ತಿದ್ದರು. ಎಂದರೆ, ನಿಸ್ಸಂಶಯವಾಗಿಯೂ ಇದು ಸತ್ತ ಮೀನಾಗಿದೆ.ಆದರೆ ತಿನ್ನಿರಿ, ಯಾವುದೇ ರೀತಿಯ ಚಿಂತೆ ಮಾಡಬೇಕಾಗಿಲ್ಲ. ನಾವು ಮದೀನಕ್ಕೆ ತಲುಪಿದಾಗ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಇದರ ಬಗ್ಗೆ ಪ್ರಸ್ತಾಪಿಸಿದ್ದೆವು. ಎಂದರೆ, ಈ ರೀತಿಯಲ್ಲಿ ಒಂದು ಮೀನು ದಡಕ್ಕೆ ಬಂದಿತ್ತು.ನಮಗೆ ಅದರ ಆವಶ್ಯವಿದ್ದ ಕಾರಣ ತಿಂದೆವು ಎಂದು ಹೇಳಿದೆವು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನ ನಿಮಗಾಗಿ ಒದಗಿಸಿ ಕೊಟ್ಟ ಆಹಾರವನ್ನು ತಿನ್ನಿರಿ. ಅಲ್ಲಾಹನು ನಿಮ್ಮ ಸ್ಥಿತಿಯನ್ನು ಕಂಡುಕೊಂಡು ನಿಮಗಾಗಿ ಅದನ್ನು ಕಳುಹಿಸಿದ್ದನು. ಅದನ್ನು ನೀವು ತಿಂದಿದ್ದೀರಿ, ಆದ್ದರಿಂದ ಯಾವುದೇ ತಪ್ಪಿಲ್ಲ. ಏನಾದರೂ ಬಾಕಿಯಿದ್ದರೆ, ನಮ್ಮನ್ನು ಸಹ ತಿನ್ನಿಸು. ಅವರಲ್ಲಿ ಯಾರೋ ಒಬ್ಬರು, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರಿಂದ ಸ್ವಲ್ಪ ಮಾಂಸವನ್ನು ಕೊಟ್ಟರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ತಿಂದರು. (ಸಹೀಹ್ ಬುಖಾರಿ, ಕಿತಾಬುಲ್ ಮಘಾಝಿ, ಹದೀಸ್-4361-4362) ಎಂದರೆ, ಮರಳಿಬರುವಾಗ ಅವರು ಉಳಿದ ಸ್ವಲ್ಪ ಮಾಂಸವನ್ನು ಕೊಂಡುಬಂದಿದ್ದರು. ಅದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಿಂದರು.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬರು ಸೈಫುಲ್ ಬಹ್ರ್ ಯುದ್ಧಕ್ಕೆ ಸಂಬಂಧಿಸಿ ತಮ್ಮ ವ್ಯಾಖ್ಯಾನದಲ್ಲಿ ಬರೆಯುತ್ತಾರೆ: ಮೇಲೆ ಉಲ್ಲೇಖಿಸಲಾದ ಯುದ್ಧವು, ಯುದ್ಧದ ಉದ್ದೇಶದಿಂದ ಮಾಡಲಾದದ್ದು ಆಗಿರಲಿಲ್ಲ. ಈ ಸೈನ್ಯದಲ್ಲಿರುವವರನ್ನು ವ್ಯಾಪಾರದ ಸಂಘದ ಸಂರಕ್ಷಣೆಗಾಗಿ ಕಳುಹಿಸಲಾಗಿತ್ತು. ಈ ದಂಡಯಾತ್ರೆ ಇಬ್ನು ಸಅದ್‌ರ ಪ್ರಕಾರ ಮುನ್ನೂರು ಮುಹಾಜಿರರು ಮತ್ತು ಅನ್ಸಾರರನ್ನು ಒಳಗೊಂಡಿತ್ತು. ಹಝ್ರತ್ ಅಬೂ ಉಬೈದ[ರ] ಇದರ ಅಮೀರ್ ಆಗಿದ್ದರು. ಇದು ಸೈಫುಲ್ ಬಹ್ರ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಬಹೀರ ಖುಲ್‌ಝುಮ್‌ರ ಸಮೀಪ ವ್ಯಾಪಾರ ಸಂಘ ಹೋಗುತ್ತಿತ್ತು. ಅಲ್ಲಿ ಸುರಕ್ಷೆ ಮತ್ತು ಮೇಲ್ನೋಟಕ್ಕಾಗಿ ಒಂದು ಸೈನ್ಯವನ್ನು ನಿಲ್ಲಿಸಲಾಗಿತ್ತು. ಆದ್ದರಿಂದ ಇದನ್ನು ಸೈಫುಲ್ ಬಹ್ರ್ ಎಂದು ಹೆಸರಿಸಲಾಗಿದೆ. ಈ ಸೈನ್ಯದ ಉದ್ದೇಶ ಸುರಕ್ಷೆ ಮತ್ತು ಮೇಲ್ನೋಟವಹಿಸುವುದಾಗಿತ್ತು. ಸೈಫ್ ಎಂದರೆ ದಡ ಎಂದಾಗಿದೆ. ಇಬ್ನು ಸಅದ್‌ರು 'ಸರಿಯತುಲ್ ಖಬತ್' ಎಂಬ ಶೀರ್ಷಿಕೆಯ ಅಡಿಯಲ್ಲಿ ಇದರ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸಿದ್ದಾರೆ. 'ಖಬತ್' ಎಂದರೆ, ಮರದ ಎಲೆಗಳು. ಪ್ರಯಾಣ ಭತ್ಯ ಮುಗಿದ ಕಾರಣದಿಂದ, ಯೋಧರಿಗೆ ಎಲೆಗಳು ತಿನ್ನಬೇಕಾಗಿಬಂದಿತ್ತು. ಈ ಘಟನೆ ನಡೆದದ್ದು ಹಿಜರೀ 8ಗೆ ಎಂದು ಇಬ್ನು ಸಅದ್ ಬರೆದಿರುವರು. ಇದು ಹುದೈಬಿಯಾ ಸಂಧಿಯ ಕಾಲವಾಗಿತ್ತು. ಸಿರಿಯಾದಿಂದ ಬರುವ ಖುರೈಶಿನ ಯಾತ್ರಿಕರ ತಂಡವನ್ನು ಯಾರಾದರೂ ಕೆಣಕಿದರೆ, ಮುಸ್ಲಿಮರು ಒಪ್ಪಂದ ಮುರಿದರು ಎಂಬ ನೆಪವನ್ನು ಖುರೈಶಿನವರು ಹೇಳದಿರಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಂದಾಲೋಚನೆ ಮಾಡಿ, ಮುನ್ನೆಚ್ಚರಿಕೆಯ ಕ್ರಮವೆಂಬ ರೀತಿಯಲ್ಲಿ ಪ್ರಸ್ತುತ ಸುರಕ್ಷಾ ಸಂಘವನ್ನು ಸೈಫುಲ್ ಬಹ್ರಿಗೆ ಕಳುಹಿಸಿದ್ದರು.

ಅದು ಹುದೈಬಿಯ ಸಂಧಿ ನಡೆದಿದ್ದ ಕಾಲವಾಗಿತ್ತು.ಅವರನ್ನು ಯಾರಾದರೂ ಕೆಣಕಿದರೆ, ಮುಸ್ಲಿಮರು ನಮ್ಮ ಮೇಲೆ ಹಲ್ಲೆ ಮಾಡಿದ ಕಾರಣ ಹುದೈಬಿಯಾ ಒಪ್ಪಂದ ಕೊನೆಗೊಂಡಿದೆ ಎಂಬ ನೆಪವನ್ನು ಖುರೈಶಿಗಳು ಮಾಡದಿರಲು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವ್ಯಾಪಾರ ತಂಡದ ರಕ್ಷಣೆಗಾಗಿ ಈ ಸಂಘವನ್ನು ಕಳುಹಿಸಿದ್ದರು. ಈ ಸ್ಥಳ ಐದು ದಿನದ ಯಾತ್ರೆಯ ದೂರದಲ್ಲಿದೆ ಎಂದು ಇಬ್ನು ಸಅದ್ ಹೇಳುತ್ತಾರೆ. ಇದಾಗಿದೆ ಶಾಂತಿ ಸ್ಥಾಪನೆಯ ಪ್ರಯತ್ನ. ಶತ್ರುಗಳ ಸುರಕ್ಷೆಯ ವ್ಯವಸ್ಥೆಯನ್ನು ಸಹ ಮಾಡಿದ್ದರು.ಹೇಗಿದ್ದರೂ ಅಲ್ಲಾಹನ ವಿಧಿ ನಡೆಯಬೇಕಿತ್ತು. ಒಪ್ಪಂದ ಸತ್ಯನಿಷೇಧಿಗಳ ಕಡೆಯಿಂದ ಮುರಿಯಲ್ಪಟ್ಟಿತ್ತು.ಹೀಗೆ ಅದು ಮಕ್ಕಾ ವಿಜಯಕ್ಕೆ ಕಾರಣವಾಯಿತು.

ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ಮಕ್ಕಾ ವಿಜಯದಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕವನ್ನು ಪ್ರವೇಶಿಸಿದರು. ಹಝ್ರತ್ ಝುಬೇರ್‌ರನ್ನು[ರ] ಸೈನ್ಯದ ಒಂದು ಬದಿಯಲ್ಲಿ ಮತ್ತು ಖ಼ಾಲಿದ್ ಬಿನ್ ವಲೀದ್‌ರನ್ನು[ರ] ಇನ್ನೊಂದು ಬದಿಯಲ್ಲಿ ನಿಶ್ಚಯಿಸಿದರು. ಕಾಲಾಳು ಸೈನ್ಯದ ಮತ್ತು ಕಣಿವೆಯ ಇಳಿಜಾರು ಪ್ರದೇಶದ ನೇತೃತ್ವವನ್ನು ಹಝ್ರತ್ ಅಬೂ ಉಬೈದರಿಗೆ[ರ] ವಹಿಸಿಕೊಡಲಾಗಿತ್ತು. (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್, ಬಾಬ್ ಫತಹ್ ಮಕ್ಕ, ಹದೀಸ್-1780)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹ್ರೈನಿನ ಜನರೊಂದಿಗೆ ಜಿಝ್ಯಾದ ನಿಬಂಧನೆಯೊಂದಿಗೆ ಮೈತ್ರಿ ಮಾಡಿದ್ದರು ಎಂದು ಅಬೂಹುರೈರ(ರ) ವರದಿ ಮಾಡಿರುವರು. ಅವರ ಅಮೀರರನ್ನಾಗಿ ಅಲಾ ಬಿನ್ ಹಝ್ರಮಿರನ್ನು ನಿಶ್ಚಯಿಸಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದರನ್ನು ಜಿಝ್ಯಾ ವಸೂಲು ಮಾಡಲು ಕಳುಹಿಸಿದರು. ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹು ಜಿಝ್ಯ ಪಡೆದುಕೊಂಡು ಮರಳಿಬಂದರು. ಜನರಿಗೆ ಅವರು ಬಂದದ್ದು ತಿಳಿಯಿತು. ಫಜ್ರ್ ನಮಾಝನ್ನು ಎಲ್ಲರೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿಂದೆ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಂದಕ್ಕೆ ನೋಡಿ, ಮುಗುಳ್ನಗುತ್ತಾ ಹೇಳಿದರು: ಹಝ್ರತ್ ಅಬೂ ಉಬೈದ ಏನನ್ನಾದರೂ ತಂದಿರುವರು ಎಂಬುವುದರ ಬಗ್ಗೆ ನಿಮಗೆ ಮಾಹಿತಿ ಲಭಿಸಿದೆ ಎಂದು ತೋರುತ್ತದೆ. ಹೌದು ಎಂದು ಜನರು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರೊಡನೆ ಹೇಳಿದರು: ಸಂತೋಷಪಡಿರಿ ಮತ್ತು ನಿಮಗೆ ಉತ್ತಮವಾದುದರಲ್ಲಿ ಪ್ರತೀಕ್ಷೆಹೊಂದಿರಿ. ನಿಮಗೆ ದಾರಿದ್ರ್ಯ ಬರುವುದು ಎಂಬ ಭಯ ನನಗಿಲ್ಲ, ಬದಲಿಗೆ, ಲೌಕಿಕ ಸಂಪತ್ತು ನಿಮಗೆ ಲಭಿಸುವಾಗ, ನೀವು ಅತಿಯಾಗಿ ಲಾಲಸೆ ಪಡುವಿರಿ ಎಂಬುವುದರ ಬಗ್ಗೆ ನನಗೆ ಹೆದರಿಕೆಯಿದೆ. (ಸಹೀಹ್ ಬುಖಾರಿ ಕಿತಾಬುಲ್ ಜಝ್ಯಾ ವಲ್‌ಮವಾಯಿದಹ್, ಹದೀಸ್–3158) ಲೌಕಿಕತೆಯಲ್ಲಿ ಮುಳುಗುವಾಗ, ಲೋಕದ ಸೌಕರ್ಯಗಳು ನಿಮಗೆ ಸಿಗುವಾಗ ನೀವು ದುರಾಸೆಗೆ ಒಳಪಟ್ಟು ನಾಶವಾಗುವಿರಿ ಎಂಬ ಭಯ ನನಗೆ ಇದೆ. ಲೌಕಿಕತೆಯಲ್ಲಿ ಮುಳುಗಿ ನಿಮ್ಮನ್ನು ನೀವು ನಾಶಮಾಡುವಿರಿ ಎಂಬ ಭೀತಿ ನನಗಿದೆ. ಒಟ್ಟಿನಲ್ಲಿ ಈ ಒಂದು ಮುನ್ನೆಚ್ಚರಿಕೆಯನ್ನು ಪ್ರತಿಯೊಬ್ಬರು ತನ್ನ ಮುಂದಿರಿಸಬೇಕು. ಹಣ ಲಭಿಸುತ್ತಿರುವ ಹೆಚ್ಚಿನ ಮುಸ್ಲಿಮರು ಮತ್ತು ಅವರ ನೇತಾರರು ಈ ಲಾಲಸೆಯಲ್ಲಿ ಬಹಳ ಮುಂದಿರುವುದನ್ನು ನಾವು ನೋಡುತ್ತಿದ್ದೇವೆ. ಲೋಕದ ಆಸೆ ಅವರಲ್ಲಿ ತುಂಬ ಅಧಿಕವಾಗಿದೆ. ಅಲ್ಲಾಹನ ಹೆಸರು ಉಚ್ಚರಿಸುತ್ತಾರೆ. ಆದರೆ, ಲೌಕಿಕತೆಗೆ ಮತ್ತು ಸ್ಥಾನಮಾನಕ್ಕೆ ಆದ್ಯತೆ ನೀಡುತ್ತಿದ್ದಾರೆ. ನಾವು ನಮ್ಮ ಸ್ಥಿತಿಯನ್ನು ಸದಾ ಅವಲೋಕಿಸುತ್ತಿರಬೇಕು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದಂತೆ, ಸಂಪತ್ತು ಬರುವುದು. ಆದರೆ ನಾವು ಈ ಐಶ್ವರ್ಯದ ಕಾರಣ ನಮ್ಮ ಧಾರ್ಮಿಕತೆಯನ್ನು ಮರೆಯಬಾರದು.

ಹಿಜರೀ ಹತ್ತರಲ್ಲಿ ವಿದಾಯದ ಹಜ್ಜಿನ ಸಂದರ್ಭದಲ್ಲಿ ಹಝ್ರತ್ ಅಬೂ ಉಬೈದ(ರ) ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹಜ್ಜ್ ಮಾಡಿದ್ದರು. (ಅಸ್‌ರಹ್ ಮುಬಶ್ಶಿರಹ್, ಬಶೀರ್ ಸಜಿದ್, ಪುಟ–801, ಅಲ್‌ಬದರ್ ಪಬ್‌ಲಿಕೇಶನ್ಸ್, ಉರ್ದು ಬಾಝಾರ್ ಲಾಹೋರ್ 2000)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನರಾದಾಗ, ಪೈಗಂಬರರಿಗೆ ತಯಾರಿಸಲಾಗುವ ಗೋರಿ, ಲಹದ್ ಉಳ್ಳದ್ದು, ಎಂದರೆ, ಇಟ್ಟಿಗೆಯಿಂದ ಕಟ್ಟಿದ ಒಳಕೋಣೆಯುಳ್ಳದ್ದು ಆಗಿರಬೇಕೋ ಅಥವಾ ಲಹದ್ ಇಲ್ಲದ್ದು, ಎಂದರೆ, ಹೊಂಡ ರೂಪದಲ್ಲಿರುವುದು ಆಗಿರಬೇಕೋ ಎಂಬುದರ ಬಗ್ಗೆ ಚರ್ಚೆಯುಂಟಾಯಿತು. ಹೀಗೆ ಹಝ್ರತ್ ಅಬ್ಬಾಸ್(ರ) ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ(ರ) ಬಳಿಗೆ ಒಬ್ಬ ವ್ಯಕ್ತಿಯನ್ನು ಮತ್ತು ಹಝ್ರತ್ ಅಬೂ ತಲ್‌ಹರ(ರ) ಸಮೀಪಕ್ಕೆ ಒಬ್ಬ ವ್ಯಕ್ತಿಯನ್ನು ಕಳುಹಿಸಿದರು. ಇವರಲ್ಲಿ ಯಾರು ಮೊದಲು ಬರುತ್ತಾರೋ, ಅವರು ಹೇಳುವ ರೀತಿಯ ಖಬರನ್ನು ತಯಾರು ಮಾಡಲು ತೀರ್ಮಾನಿಸಲಾಯಿತು. ಹಝ್ರತ್ ಅಬೂ ಉಬೈದ(ರ) ಮಕ್ಕ ನಿವಾಸಿಗಳ ಶೈಲಿಯಂತೆ ಲಹದ್ ಇಲ್ಲದ ಖಬರ್ ತಯಾರು ಮಾಡುತ್ತಿದ್ದರು. ಹಝ್ರತ್ ಅಬೂ ತಲ್‌ಹ(ರ) ಮದೀನ ನಿವಾಸಿಗಳ ವಿಧಾನದ ಪ್ರಕಾರ ಲಹದ್ ಉಳ್ಳ ಖಬರ್ ತಯಾರು ಮಾಡುತ್ತಿದ್ದರು. ಹೀಗೆ ಹಝ್ರತ್ ಅಬೂ ತಲ್‌ಹರ ಬಳಿಗೆ ಕಳುಹಿಸಲಾದ ವ್ಯಕ್ತಿ ಅವರನ್ನು ಭೇಟಿಯಾದರು. ಆದರೆ, ಹಝ್ರತ್ ಅಬೂ ಉಬೈದರ(ರ) ಬಳಿಗೆ ಕಳುಹಿಸಲಾದ ವ್ಯಕ್ತಿಗೆ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಹೀಗೆ ಹಝ್ರತ್ ಅಬೂ ತಲ್‌ಹ(ರ) ಅಲ್ಲಿಗೆ ಬಂದರು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಲಹದ್ ಉಳ್ಳ ಖಬರ್ ತಯಾರು ಮಾಡಿದರು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನರಾದ ಕೂಡಲೆ, ಖಿಲಾಫತ್‌ಗಾಗಿ ಅನ್ಸಾರ್ ಮತ್ತು ಮುಹಾಜಿರರ ನಡುವೆ ಉಂಟಾದ ಭಿನ್ನಾಭಿಪ್ರಾಯದ ಬಗ್ಗೆ ಸಹೀಹ್ ಬುಖಾರಿಯಲ್ಲಿ ಇದೆ.ಸಹಾಬಿಯೋರ್ವರ ಬಗ್ಗೆ ಪ್ರಸ್ತಾಪಿಸಲಾದಾಗ ಇದರ ಬಗ್ಗೆ ಮುಂಚೆ ಹೇಳಿದ್ದೆ. ಆದರೆ ಇಲ್ಲಿ ಹಝ್ರತ್ ಅಬೂ ಉಬೈದರ(ರ) ಪ್ರಸ್ತಾಪದಲ್ಲಿಯೂ ಹೇಳಿದ್ದರೆ ಉತ್ತಮವೇ ಆಗಿದೆ. (ಸೋಈರತ್ ಇಬ್ನೆ ಹಿಶ್ಶಾಮ್, ಸಂಪುಟ–2, ಪುಟ–663)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ನಂತರ ಅನ್ಸಾರರು ಹಝ್ರತ್ ಸಅದ್ ಬಿನ್ ಉಬಾದರ ಮನೆಯಲ್ಲಿ ಒಟ್ಟುಗೂಡಿದರು.ನಮ್ಮಿಂದ ಒಬ್ಬ ಅಮೀರ್ ಮತ್ತು ಮುಹಾಜಿರರಿಂದ ಒಬ್ಬ ಅಮೀರ್ ಆಗಬೇಕೆಂದು ಅವರು ಹೇಳಿದರು.ಅವರ ಬಳಿಗೆ ಹಝ್ರತ್ ಅಬೂಬಕ್ಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಉಬೈದ ಬಿನ್ ಜರಾಹ್(ರ) ಹೋದರು. ಹಝ್ರತ್ ಉಮರ್(ರ) ಏನೋ ಹೇಳಲು ಹೋದರು. ಆದರೆ, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅವರನ್ನು ಮೌನವಾಗಿರಲು ಹೇಳಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ನನಗೂ ಉತ್ತಮವೆಂದು ತೋರುತ್ತಿದ್ದ, ನನಗೆ ಇಷ್ಟವಾದ ಒಂದು ಭಾಷಣವನ್ನು ನಾನು ತಯಾರು ಮಾಡಿದ್ದೆ. ಹಝ್ರತ್ ಅಬೂಬಕ್ಕರ್ ಹಾಗೆ ಮಾತನಾಡಲಾರರು ಎಂಬ ಚಿಂತೆ ನನಗಿತ್ತು. ಆದ್ದರಿಂದ ನಾನು ಮಾತನಾಡಲು ಬಯಸಿದ್ದೆ. ಆದರೆ, ಹಝ್ರತ್ ಅಬೂಬಕ್ಕರ್(ರ) ಭಾಷಣ ಮಾಡಿದ್ದಾಗ, ಅದು ಎಲ್ಲ ಭಾಷಣಗಳಿಗಿಂತ ಭವ್ಯವಾದದ್ದೂ ವಾಕ್ಪಟುತ್ವವುಳ್ಳದ್ದೂ ಆಗಿತ್ತು. ಮುಹಾಜಿರರು ಅಮೀರರು ಆಗಿರುವರು ಮತ್ತು ಅನ್ಸಾರರು ಮಂತ್ರಿಗಳು ಆಗಿರುವರು ಎಂದು ಇದೇ ಭಾಷಣದಲ್ಲಿ ಅವರು ಹೇಳಿದ್ದರು.ಆಗ ಅಬೂ ಹಬ್ಬಾಬ್ ಬಿನ್ ಮುಂಝಿರ್ ಹೇಳಿದರು: ಖಂಡಿತವಾಗಿಯೂ ಅಲ್ಲ. ಅಲ್ಲಾಹನಾಣೆ ನಾವು ಹಾಗೆ ಆಗಲು ಬಿಡುವುದಿಲ್ಲ. ಒಬ್ಬ ಅಮೀರ್ ನಿಮ್ಮಿಂದ ಆಗಿರುವುದು ಮತ್ತು ಒಬ್ಬ ಅಮೀರ್ ಆಗಿರುವುದು. ಹಝ್ರತ್ ಅಬೂಬಕ್ಕರ್(ರ) ಹೇಳಿದರು: ಅಲ್ಲ, ನಾವು ಅಮೀರ್ ಆಗಿದ್ದೇವೆ ಮತ್ತು ನೀವು ಮಂತ್ರಿಗಳು. ಏಕೆಂದರೆ, ಕುಲೀನತೆ ಪ್ರಕಾರ ಖುರೈಶಿಯರು ಅರಬರಾದ ನಿಮಗಿಂತ ಉತ್ತಮ ಮತ್ತು ಬಹಳ ಹಿಂದಿನವರಾಗಿರುವರು, ಪ್ರಾಚೀನರು. ಹಝ್ರತ್ ಉಮರ್(ರ) ಅಥವಾ ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರಲ್ಲಿ ಯಾರನ್ನಾದರೂ ಖಲೀಫರನ್ನಾಗಿ ಮಾಡಿ ಬೈಅತ್ ಮಾಡಿರಿ. ಆಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಬೂಬಕ್ಕರ್‌ರೊಡನೆ ಹೇಳಿದರು: ನಾವಂತು ನಿಮ್ಮ ಬೈಅತ್ ಮಾಡುವೆವು. ಏಕೆಂದರೆ, ನೀವು ನಮ್ಮ ಸರದಾರರಾಗಿರುವಿರಿ ಮತ್ತು ನಮ್ಮಲ್ಲಿ ಎಲ್ಲರಿಗಿಂತ ಉತ್ತಮರಾಗಿರುವಿರಿ. ನೀವು ನಮ್ಮಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅತ್ಯಂತ ಪ್ರಿಯರಾಗಿರುವಿರಿ. ಹೀಗೆ ಹೇಳಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಅವರ ಕೈಯನ್ನು ಹಿಡಿದು ಅವರ ಬೈಅತ್ ಮಾಡಿದರು. ಅನಂತರ ಇತರ ಜನರು ಸಹ ಹಝ್ರತ್ ಅಬೂಬಕ್ಕರರ(ರ) ಬೈಅತ್ ಮಾಡಿದರು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–3668)

ಹೇಗಿದ್ದರೂ, ಹಝ್ರತ್ ಅಬೂಬಕ್ಕರರ(ರ) ದೃಷ್ಟಿಯಲ್ಲಿ ಹಝ್ರತ್ ಅಬೂ ಉಬೈದರ(ರ) ಪದವಿ ಏನಾಗಿತ್ತೆಂದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ನಂತರ, ಅವರು ಹಝ್ರತ್ ಅಬೂ ಉಬೈದರ(ರ) ಹೆಸರು ಖಿಲಾಫತಿಗಾಗಿ ನಿರ್ದೇಶಿಸಿದ್ದರು. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ತನ್ನ ಮರಣಕ್ಕೆ ಮುಂಚೆ ಹೀಗೆ ಹೇಳಿದ್ದರು: ಹಝ್ರತ್ ಅಬೂ ಉಬೈದ(ರ) ಜೀವಂತವಾಗಿದ್ದರೆ, ಮುಂದಿನ ಖಲೀಫರನ್ನಾಗಿ ಮಾಡಲು, ನಾನು ಅವರ ನಾಮ ನಿರ್ದೇಶಿಸುತ್ತಿದ್ದೆ. ಏಕೆಂದರೆ, ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶನದ ಪ್ರಕಾರ ಪೈಗಂಬರರ ಸಮುದಾಯದ ವಿಶ್ವಸ್ತ ವ್ಯಕ್ತಿಯಾಗಿದ್ದರು. ಖಿಲಾಫತ್ ಬಗ್ಗೆ ಚರ್ಚೆ ನಡೆದಾಗ, ಹಝ್ರತ್ ಅಬೂ ಉಬೈದ(ರ) ಅನ್ಸಾರ್‌ರನ್ನು ಸಂಬೋಧಿಸಿ ಹೇಳಿದ್ದರು: ಹೇ ಅನ್ಸಾರರೇ, ನೀವು ಮೊಟ್ಟಮೊದಲು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಹಾಯ ಮಾಡಿದ ಜನರಾಗಿರುವಿರು. ಹೀಗಿರುವಾಗ ಮೊಟ್ಟಮೊದಲು ಭಿನ್ನತೆಗೆ ಕಾರಣ ನೀವೇ ಆಗದಿರಲಿ. (ಸೈರುಸ್ಸಹಾಬ, ಸಂಪುಟ–2, ಪುಟ–126–127, ದಾರುಲ್ ಇಶಾಅತ್ ಉರ್ದು ಬಾಝಾರ್ ಕರಾಚಿ)

ಹಝ್ರತ್ ಅಬೂಬಕ್ಕರ್(ರ) ಖಲೀಫರಾದಾಗ, ಅವರು ಬೈತುಲ್ ಮಾಲಿನ ಕೆಲಸವನ್ನು ಹಝ್ರತ್ ಅಬೂ ಉಬೈದರಿಗೆ(ರ) ಒಪ್ಪಿಸಿದ್ದರು. ಹಿಜರೀ 13ರಲ್ಲಿ, ಹಝ್ರತ್ ಅಬೂಬಕ್ಕರ್(ರ) ಹಝ್ರತ್ ಅಬೂ ಉಬೈದರನ್ನು(ರ) ಸೇನಾಧಿಪತಿಯನ್ನಾಗಿ ಮಾಡಿ ಸಿರಿಯಾದ ಕಡೆಗೆ ಕಳುಹಿಸಿದ್ದರು. ಹಝ್ರತ್ ಉಮರ್ ಖಲೀಫರಾದಾಗ, ಹಝ್ರತ್ ಖಾಲಿದ್ ಬಿನ್ ವಲೀದ್‌ರನ್ನು ಸೇನಾಧಿಪತಿ ಸ್ಥಾನದಿಂದ ನೀಗಿಸಿ, ಹಝ್ರತ್ ಅಬೂ ಉಬೈದರನ್ನು ಸೇನಾಧಿಪತಿಯನ್ನಾಗಿ ಮಾಡಿದರು. ಸಿರಿಯಾ ವಿಜಯದ ಬಗ್ಗೆ ಹೀಗೆ ಪ್ರಸ್ತಾಪ ಸಿಗುತ್ತದೆ: ಹಿಜರಿ 13ರಲ್ಲಿ ರೋಮನ್ನರ ಸುತ್ತ ಹಲವು ಕಡೆಯಿಂದ ದಾಳಿ ಮಾಡಲಾಯಿತು. ಒಂದು ಸೈನ್ಯದ ನೇತಾರ ಹಝ್ರತ್ ಯಝೀದ್ ಬಿನ್ ಅಬೂಸುಫ್‌ಯಾನ್ ಆಗಿದ್ದರು. ಅಬೂ ಸುಫ್‌ಯಾನ್‌ರ ಒಬ್ಬ ಮಗನ ಹೆಸರು ಸಹ ಯಝೀದ್‌ಎಂದಾಗಿತ್ತು. ಇವರು ಜೋರ್ದಾನಿನ ಪೂರ್ವದ ಕಡೆಯಿಂದ ದಾಳಿ ಮಾಡಿದರು. ಎರಡನೇ ಸಂಘದ ನೇತಾರ ಹಝ್ರತ್ ಶರ್ಜೀಲ್ ಬಿನ್ ಹಸನ ಆಗಿದ್ದರು. ಅವರು ಬಲ್‌ಕದ ಕಡೆಯಿಂದ ಆಕ್ರಮಣ ನಡೆಸಿದರು. ಮೂರನೇ ಸೈನ್ಯದ ನಾಯಕ ಹಝ್ರತ್ ಅಮ್ರ್ ಬಿನ್ ಆಸ್ ಆಗಿದ್ದರು. ಅವರು ಪಲಸ್ತೀನ್ ಕಡೆಯಿಂದ ಸಿರಿಯಾಗೆ ಪ್ರವೇಶಿಸಿದರು. ನಾಲ್ಕನೇ ಸಂಘದ

ನಾಯಕ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಆಗಿದ್ದರು. ಅವರು ಹಮ್ಸ್ ಕಡೆಗೆ ಧಾವಿಸಿದರು. ಈ ಎಲ್ಲ ಸೈನ್ಯ ಒಂದು ಸ್ಥಳದಲ್ಲಿ ಒಟ್ಟುಸೇರುವಾಗ, ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಸೇನಾಧಿಪತಿಯಾಗಿರುವುದು ಎಂದು ಹಝ್ರತ್ ಅಬೂಬಕ್ಕರ್(ರ) ಹೇಳಿದರು. ಪ್ರತಿ ಸೈನ್ಯದಲ್ಲಿ ನಾಲ್ಕು ಸಾವಿರ ಸೈನಿಕರಿದ್ದರು. ಆದರೆ ಅಬೂ ಉಬೈದರ ಸೈನ್ಯದಲ್ಲಿ ಎಂಟು ಸಾವಿರ ಸೈನಿಕರಿದ್ದರು.ಸೈನ್ಯ ರವಾನೆಯಾಗುವಾಗ ಹಝ್ರತ್ ಅಬೂಬಕ್ಕರ್(ರ) ಸೈನ್ಯಗಳ ಸೇನಾಧಿಪತಿಗಳೊಡನೆ ಹೇಳಿದರು: ನೋಡಿರಿ, ನಿಮ್ಮ ಮೇಲೆಯೂ ನಿಮ್ಮ ಸಂಗಡಿಗರ ಮೇಲೆಯೂ ಪ್ರಯಾಸವನ್ನು ಉಂಟುಮಾಡದಿರಿ. ನಿಮ್ಮ ಸಮುದಾಯ ಮತ್ತು ಸಂಗಡಿಗರೊಡನೆ ಅಸಂತುಷ್ಟಿಯನ್ನು ಪ್ರಕಟಿಸಬೇಡಿರಿ. ಅವರೊಡನೆ ಸಮಾಲೋಚಿಸಿರಿ ಮತ್ತು ನ್ಯಾಯದಿಂದ ವರ್ತಿಸಿರಿ. ದೌರ್ಜನ್ಯದಿಂದ ದೂರವಿರಿರಿ, ದೌರ್ಜನ್ಯಗಾರ ವಿಜಯ ಸಾಧಿಸಲಾರನು. ದೌರ್ಜನ್ಯಗಾರನು ಎಂದೂ ಸಾಧನೆಯ ಮುಖವನ್ನು ನೋಡಲಾರನು. ಶತ್ರುಗಳೊಡನೆ ಹೋರಾಡಬೇಕಾಗಿ ಬಂದರೆ, ಹಿಮ್ಮೆಟ್ಟಬೇಡಿರಿ. ಯಾವನು ಯುದ್ಧದ ದಿನದಂದು ಹಿಮ್ಮೆಟ್ಟುವನೋ ಅವನ ಮೇಲೆ ಅಲ್ಲಾಹನ ಶಿಕ್ಷೆ ಎರಗುವುದು. ಅವನ ಸ್ಥಾನ ನರಕವಾಗಿರುವುದು. ಪವಿತ್ರ ಖುರ್‌ಆನಿನ ಸೂರ ಅನ್‌ಫಾಲಿನ 17ನೇ ವಚನವನ್ನು ನೋಡಿರಿ. ನೀವು ಶತ್ರುಗಳ ಮೇಲೆ ವಿಜಯ ಸಾಧಿಸಿದರೆ, ಮಕ್ಕಳು, ವೃದ್ಧರು ಮತ್ತು ಸ್ತ್ರೀಯರಲ್ಲಿ ಯಾರನ್ನೂ ಕೊಲ್ಲಬೇಡಿರಿ. ಮೃಗಗಳನ್ನು ಕೊಲ್ಲಬೇಡಿರಿ. ಪ್ರತಿಜ್ಞೆಗಳನ್ನು ಉಲ್ಲಂಘಿಸಬೇಡಿರಿ. ಒಪ್ಪಂದವನ್ನು ಮಾಡಿ ಅದನ್ನು ಸ್ವತಃ ಮುರಿಯಬೇಡಿರಿ. ಹಝ್ರತ್ ಅಬೂ ಉಬೈದ(ರ) ಮೊಟ್ಟಮೊದಲು ಸಿರಿಯಾದ ಪಟ್ಟಣವಾದ ಮಾಬ್‌ನ ಮೇಲೆ ವಿಜಯ ಸಾಧಿಸಿದರು. ಅಲ್ಲಿಯ ನಿವಾಸಿಗಳು ಜಿಝ್ಯದ ನಿಬಂಧನೆಯೊಂದಿಗೆ ಮೈತ್ರಿಸಂಧಾನ ಮಾಡಿರಿ. ಅನಂತರ ಅವರು ಜಾಬಿಯದ ದಿಕ್ಕಿಗೆ ಹೊರಟರು. ಅಲ್ಲಿ ರೋಮನ್ನರ ದೊಡ್ಡ ಸೈನ್ಯ ಹೋರಾಡಲು ತಯಾರಾಗಿ ನಿಂತಿದ್ದನ್ನು ನೋಡಿದರು. ಆದ್ದರಿಂದ ಹಝ್ರತ್ ಅಬೂಬಕ್ಕರೊಡನೆ(ರ) ಹಝ್ರತ್ ಅಬೂ ಉಬೈದ(ರ) ಹೆಚ್ಚಿನ ಸಹಾಯಕ್ಕಾಗಿ ವಿನಂತಿಸಿದರು. ಹಝ್ರತ್ ಅಬೂಬಕ್ಕರ್(ರ) ಇರಾಕಿನಲ್ಲಿ ಯುದ್ಧದಲ್ಲಿ ನರತರಾಗಿದ್ದ ಹಝ್ರತ್ ಖ಼ಾಲಿದ್ ಬಿನ್ ವಲೀದ್‌ರೊಡನೆ(ರ) ಹೇಳಿದರು: ಅರ್ಧ ಸೈನ್ಯವನ್ನು ಹಝ್ರತ್ ಮಸ್‌ನರ ನೇತೃತ್ವದಲ್ಲಿ ಬಿಟ್ಟುಕೊಂಡು ಹಝ್ರತ್ ಅಬೂ ಉಬೈದರ(ರ) ಸಹಾಯಕ್ಕಾಗಿ ಹೊರಡಲು ಹೇಳಿದರು. ಹಝ್ರತ್ ಅಬೂಬಕ್ಕರ್(ರ) ಅಬೂ ಉಬೈದರಿಗೆ(ರ) ಹೀಗೆ ಪತ್ರ ಬರೆದರು: ನಾನು ಖ಼ಾಲಿದ್‌ರನ್ನು ಅಮೀರ್ ಆಗಿ ನಿಶ್ಚಯಿಸಿದ್ದೇನೆ. ನೀವು ಅವರಿಗಿಂತ ಉತ್ತಮ ಮತ್ತು ಶ್ರೇಷ್ಠರೆಂದು ನನಗೆ ಚೆನ್ನಾಗಿ ಗೊತ್ತಿದೆ. ಪತ್ರದ ಪೂರ್ಣ ರೂಪ ಹೀಗಿದೆ: ಅಲ್ಲಾಹನ ದಾಸನಾದ ಅತೀಕ್ ಬಿನ್ ಅಬೂಖಹಾಫ, ಅತೀಖ್ ಎಂಬುದು ಹಝ್ರತ್ ಅಬೂಬಕ್ಕರರ ಯಥಾರ್ಥ ಹೆಸರಾಗಿತ್ತು. ಅಬೂಖಹಾಫ ಅವರ ತಂದೆಯ ಹೆಸರು. ಅಲ್ಲಾಹನ ದಾಸನಾದ ಅತೀಕ್ ಬಿನ್ ಅಬೂಖಹಾಫರ ಪತ್ರ ಅಬೂ ಉಬೈದ ಬಿನ್ ಜರಾಹ್‌ರ ಹೆಸರಲ್ಲಿ.ನಿಮ್ಮ ಮೇಲೆ ಅಲ್ಲಾಹನ ಸಮಾಧಾನವಿರಲಿ. ನಾನು ಸಿರಿಯಾದ ಸೈನ್ಯದ ಸೇನಾ ನಾಯಕತ್ವವನ್ನು ಖ಼ಾಲಿದಿಗೆ ಒಪ್ಪಿಸಿದ್ದೇನೆ. ನೀವು ಇದನ್ನು ವಿರೋಧಿಸಬೇಡಿರಿ. ಕೇಳಿರಿ ಮತ್ತು ಅನುಸರಿಸಿರಿ. ನಾನು ನಿನ್ನನ್ನು ಅದರ ಅಧಿಪತಿಯನ್ನಾಗಿ ಮಾಡಿದ್ದೇನೆ. ನೀವು ಅವರಿಗಿಂತ ಶ್ರೇಷ್ಠರಾಗಿದ್ದೀರಿ ಎಂದು ನನಗೆ ಗೊತ್ತಿದೆ. ಆದರೆ, ಯುದ್ಧ ಕೌಶಲದ ಸಾಮರ್ಥ್ಯ ನಿಮಗಿಂತ ಖ಼ಾಲಿದ್ ಬಿನ್ ವಲೀದ್‌ರಿಗೆ ಹೆಚ್ಚಿದೆ ಎಂದು ನನಗೆ ಅನಸುತ್ತದೆ. ಅಲ್ಲಾಹನು ನನ್ನನ್ನು ಮತ್ತು ನಿಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲಿ. ಹೀಗೆ ಅವರು ಪತ್ರ ಬರೆದರು. ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ) ಇರಾಕಿನ ಒಂದು ಪಟ್ಟಣವಾದ ಹೀರದಿಂದ ಹಝ್ರತ್ ಅಬೂ ಉಬೈದರಿಗೆ ಹೀಗೆ ಪತ್ರ ಬರೆದರು: ಅಲ್ಲಾಹನ ಶಾಂತಿ ನಿಮ್ಮ ಮೇಲೆ ವರ್ಷಿಸಲಿ. ನನ್ನೊಡನೆ ಹಝ್ರತ್ ಅಬೂಬಕ್ಕರ್(ರ) ಸಿರಿಯಾಗೆ ಬರಲು ಆದೇಶಿಸಿದ್ದಾರೆ. ಸೈನ್ಯದ ನಾಯಕತ್ವವನ್ನು ನನಗೆ ವಹಿಸಿಕೊಟ್ಟಿದ್ದಾರೆ. ಅಲ್ಲಾಹನಾಣೆ, ನಾನು ಈ ನೇತೃತ್ವವನ್ನು ಎಂದೂ ಆಗ್ರಹಿಸಿರಲಿಲ್ಲ ಮತ್ತು ನನಗೆ ಅದರ ಬಯಕೆಯೂ ಇರಲಿಲ್ಲ. ನಿಮಗೆ ಮೊದಲು ಇದ್ದ ಅದೇ ಸ್ಥಾನ ಈಗಲೂ ಇರುವುದು.ನಾವು ನಿಮ್ಮನ್ನು ಅನುಸರಿಸದೇ ಇರುವುದಿಲ್ಲ. ನಿಮ್ಮನ್ನು ಕಡೆಗಣಿಸಿ ಯಾವುದೇ ತೀರ್ಮಾನವನ್ನು ಮಾಡಲಾರೆವು. ನೀವು ಮುಸ್ಲಿಮರ ಸರದಾರರಾಗಿರುವಿರಿ, ನಿಮ್ಮ ಶ್ರೇಷ್ಠತೆಯನ್ನು ನಾವು ಅಲ್ಲಗಳೆಯುವುದಿಲ್ಲ. ಮಾತ್ರವಲ್ಲ ನಿಮ್ಮ ಸಲಹೆಗಳಿಂದ ನಾವು ಸ್ವತಂತ್ರರೂ ಅಲ್ಲ. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–19–21) (ಅಶ್ರಹ್ ಮುಬಶ್ಶುರಹ್, ಬಶೀರ್ ಸಾಜಿದ್, ಪುಟ–804, ಅಲ್‌ಬದರ್ ಪಬ್‌ಲಿಕೇಶನ್‌ಸ್ ಉರ್ದು ಬಝ಼ಾರ್ ಕರಾಚಿ,2000) (ಸೈರುಸ್ಸಹಾಬ, ಸಂಪುಟ–4, ಪುಟ–457–459, ದಾರುಲ್ ಇಶಾಅತ್ ಕರಾಚಿ) (ಫರ್‌ಹಂಗ್ ಸೀರತ್, ಪುಟ–110, ಝುವಾರ ಅಕಾಡಮಿ ಪಬ್‌ಲಿಕೇಶನ್ಸ್ ಕರಾಚಿ, 2003)

ಇದಾಗಿದೆ ಸತ್ಯವಿಶ್ವಾಸದ ಭವ್ಯತೆ. ಎರಡೂ ಕಡೆಯಿಂದ ಯಾವ ರೀತಿಯಲ್ಲಿ ವಿನಯದಿಂದ ಅನುಸರಣೆಯನ್ನು ಪ್ರಕಟಿಸಲಾಯಿತು ಎಂದು ನೋಡಿರಿ!

ಜಮಾದಿಲ್ ಅವ್ವಲ್ ಹಿಜರೀ 13ರಲ್ಲಿ ನಡೆದ ಅಜ್‌ನಾದೀನ್ ಯುದ್ಧ: ಅಜ್‌ನಾದೀನ್ ಫಲಸ್ತೀನನ ಪರಿಸರ ಪ್ರದೇಶದ ಒಂದು ಗ್ರಾಮವಾಗಿದೆ. ಈ ಸ್ಥಳದಲ್ಲಿ ಒಂದು ಲಕ್ಷದಷ್ಟು ರೋಮನ್ನರು ಸೈನ್ಯದ ವಿರುದ್ಧ ಮುಸ್ಲಿಮರ ಯುದ್ಧ ನಡೆಯಿತು.ಅಜ್‌ನಾದೀನ್ ಸೈನ್ಯದ ಸೇನಾ ನಾಯಕರು ರೋಮಿನ ಅರಸನಾದ ಹರ್ಕ್ಯುಲಸಿನ ಸಹೋದರ ತಿಯೋಡೋರ್ ಆಗಿದ್ದರು.35 ಸಾವಿರದಷ್ಟು ಇದ್ದ ಮುಸ್ಲಿಮರ ಸೈನ್ಯ ಒಂದು ಲಕ್ಷದಷ್ಟು ಇದ್ದ ಶತ್ರುಗಳ ಸೈನ್ಯವನ್ನು ಸೋಲಿಸಿ ಅಜ್‌ನಾದೀನ್ ಮೇಲೆ ವಿಜಯ ಸಾಧಿಸಿತು.
(ಅಶ್ರಹ್ ಮುಬಶ್ಶುರಹ್, ಬಶೀರ್ ಸಾಜಿದ್, ಪುಟ–805, ಅಲ್‌ಬದರ್ ಪಬ್‌ಲಿಕೇಶನ್‌ಸ್ ಉರ್ದು ಬಝ಼ಾರ್ ಕರಾಚಿ, 2000) (ಮುಜಮುಲ್‌ಬಲದಾನ್, ಸಂಪುಟ–1, ಪುಟ–129, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಅಜ್‌ನಾದೀನಿನ ಮೇಲೆ ವಿಜಯ ಸಾಧಿಸಿದ ನಂತರ ಮುಸ್ಲಿಮರು ಶತ್ರುಗಳನ್ನು ಸುತ್ತುವರೆದರು. ಇದು ಹಿಜರೀ ಮುಹರ್ರಮ್ 14ರಂದಾಗಿತ್ತು. ಈ ಮುತ್ತಿಗೆ ಆರು ತಿಂಗಳ ವರೆಗೆ ಜಾರಿಯಲ್ಲಿತ್ತು. ಶತ್ರುಗಳು ಸೈನ್ಯ ಕೋಟೆಯನ್ನು ಮುಚ್ಚಿದರು. ಮುಸ್ಲಿಮರ ಐವರು ಸೇನಾಧಿಪತಿಗಳು ತಮ್ಮ ಸೈನ್ಯದ ಸಮೇತ ಈ ಪಟ್ಟಣವನ್ನು ಸುತ್ತುವರೆದಿದ್ದರು. ಹಝ್ರತ್ ಅಬೂ ಉಬೈದ ತನ್ನ ಸೈನ್ಯದೊಂದಿಗೆ ಪೂರ್ವ ದಿಕ್ಕಿನ ಬಾಗಿಲ ಬಳಿ ಇದ್ದರು. ಉಳಿದ ಮೂರು ಕಮಾಂಡರರು ಸಹ ಬೇರೆ ಬೇರೆ ಬಾಗಿಲ ಬಳಿ ಇದ್ದರು. ರೋಮನ್ನರು ಕೆಲವು ಸಂದರ್ಭಗಳಲ್ಲಿ ಹೊರಗೆ ಬಂದು ಯುದ್ಧ ಮಾಡುತ್ತಿದ್ದರು. ಆದರೆ, ಪುನಃ ವಾಪಸ್ಸು ಹೋಗುತ್ತಿದ್ದರು. ಕೋಟೆಯೊಳಗೆ ಹೋಗುತ್ತಿದ್ದರು. ರೋಮಿನ ಅರಸ ನೆರವಿಗಾಗಿ ಸೈನ್ಯವನ್ನು ಕಳುಹಿಸುವುದು ಎಂದು ಅವರು ಪ್ರತೀಕ್ಷಿಸುತ್ತಿದ್ದರು. ಆದರೆ, ಮುಸ್ಲಿಮರ ಸೈನ್ಯಗಳ ಕಾವಲು ಅವರ ಪ್ರತೀಕ್ಷೆಯ ಮೇಲೆ ಕೆಸರು ಚೆಲ್ಲಿತು. ಒಂದು ರಾತ್ರಿ ಪಟ್ಟಣದ ಒಂದು ಹಬ್ಬ ನಡೆಯಿತು. ಆಗ ಕೋಟೆಯ ಕಾವಲುಗಾರರು ಹಬ್ಬದ ಖುಶಿಯ ಕಾರಣದಿಂದ ಕಾವಲು ವಹಿಸುವುದರಿಂದ ಅಜಾಗರೂಕರಾದರು. ಹಝ್ರತ್ ಖ಼ಾಲಿದ್ ಬಿನ್ ವಲೀದ್ ತಮ್ಮ ಕೆಲವು ಸಂಗಡಿಗರ ಸಮೇತ ಕೋಟೆಯ ಗೋಡೆಯನ್ನು ಹತ್ತಿ ಪಟ್ಟಣದೊಳಗೆ ಪ್ರವೇಶಿಸಿದರು ಮತ್ತು ಕೋಟೆಯ ಬಾಗಿಲನ್ನು ತೆರೆದರು.ಹೀಗೆ ಅವರ ಸೈನ್ಯ ಪಟ್ಟಣದೊಳಗೆ ಪ್ರವೇಶಿಸಿತು.ಇದನ್ನು ನೋಡಿ ಪಟ್ಟಣದ ಮತ್ತೊಂದು ಬದಿಯಲ್ಲಿ ಇದ್ದ ಪಟ್ಟಣ ನಿವಾಸಿಗಳು ಹಝ್ರತ್ ಅಬೂ ಉಬೈದರೊಂದಿಗೆ ಮೈತ್ರಿ ಸಂಧಾನ ಮಾಡಿದರು.ಆದರೆ, ಇದರ ಮಾಹಿತಿ ಹಝ್ರತ್ ಖ಼ಾಲಿದ್ ಬಿನ್ ವಲೀದ್‌ರಿಗೆ ಲಭಿಸಿರಲಿಲ್ಲ. ಅವರು ಯುದ್ಧ ಮಾಡುತ್ತಾ ಹೋಗುತ್ತಿದ್ದರು. ನಮ್ಮನ್ನು ಖ಼ಾಲಿದ್‌ರಿಂದ ರಕ್ಷಿಸು ಎಂದು ಜನರು ಹಝ್ರತ್ ಅಬೂ ಉಬೈದರೊಂದಿಗೆ ವಿನಂತಿಸಿದರು. ಪಟ್ಟಣದ ಮಧ್ಯದಲ್ಲಿ ಈ ಎರಡು ಸರದಾರರು ಮುಖಾಮುಖಿಯಾದರು. ಹೀಗೆ ಹಝ್ರತ್ ಅಬೂ ಉಬೈದ(ರ) ಮತ್ತು ಖ಼ಾಲಿದ್ ಬಿನ್ ವಲೀದ್ ಭೇಟಿಯಾದಾಗ, ಪಟ್ಟಣದವರೊಂದಿಗೆ ಮೈತ್ರಿ ಸಂಧಾನ ಮಾಡಲಾಯಿತು. ಏಕೆಂದರೆ, ಹಝ್ರತ್ ಅಬೂ ಉಬೈದ ಮೊದಲೇ ಒಪ್ಪಂದ ಮಾಡಿದ್ದರು. (ಅಶ್‌ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ–805–806, ಅಲ್‌ಬದರ್ ಪಬ್ಲಿಕೇಶನ್ಸ್, ಉರ್ದು ಬಝ಼ಾರ್ ಲಾಹೀರ್ 2000)

ಫಹಲ್ ಯುದ್ಧ: ಫಹಲ್ ಎಂಬುದು ಸಿರಿಯಾದ ಒಂದು ಪಟ್ಟಣವಾಗಿದೆ. ಡಮಸ್ಕಸ್ ಮೇಲೆ ವಿಜಯ ಸಾಧಿಸಿದ ನಂತರ ಮುಸ್ಲಿಮರು ಮುಂದಕ್ಕೆ ಧಾವಿಸಿದರು.ರೋಮನ್ನರು ಬೇಸಾನ್ ಎಂಬ ಸ್ಥಳದಲ್ಲಿ ಒಟ್ಟುಸೇರಿ ಮುಸ್ಲಿಮರ ಮೇಲೆ ಆಕ್ರಮಣ ನಡೆಸಲು ತಯಾರಿ ಮಾಡುತ್ತಿದ್ದಾರೆ ಎಂದು ತಿಳಿದುಬಂತು. ಮುಸ್ಲಿಮರು ಅವರ ವಿರುದ್ಧ ಹೋರಾಡಲಿಕ್ಕಾಗಿ ಫಹಲ್ ಎಂಬ ಸ್ಥಳದಲ್ಲಿ ಡೇರೆಹಾಕಿದರು. ರೋಮನ್ನರ ಸೇನಾಧಿಪತಿ ಮೈತ್ರಿ ಮಾಡುವ ಉದ್ದೇಶದೊಂದಿಗೆ ತಮ್ಮ ರಾಯಭಾರಿಯನ್ನು ಹಝ್ರತ್ ಅಬೂ ಉಬೈದರ ಬಳಿಗೆ ಕಳುಹಿಸಿದರು. ರಾಯಭಾರಿ ಅಲ್ಲಿಗೆ ತಲುಪಿದಾಗ, ನೋಡಿದ್ದೇನೆಂದರೆ, ಉನ್ನತ ಮತ್ತು ಕೆಳಗಿನ ಆಫೀಸರರು ಒಂದೇ ರೀತಿಯಲ್ಲಿ ಇರುವರು. ಸೇನಾಧಿಪತಿ ಮತ್ತು ಸೈನಿಕರು ಅಲ್ಲಿ ಕುಳಿತ್ತಿದ್ದರು. ಯಾವುದೇ ವ್ಯತ್ಯಾಸ ಕಾಣುತ್ತಿರಲಿಲ್ಲ. ಕೊನೆಗೆ ಆ ರಾಯಭಾರಿ ಗೊಂದಲಗೊಂಡು ನಿಮ್ಮ ಸೇನಾಧಿಪತಿ ಯಾರೆಂದು ಒಬ್ಬರೊಡನೆ ಕೇಳಿದರು.ನೆಲದಲ್ಲಿ ಕುಳಿತ್ತಿದ್ದ ಒಬ್ಬ ಸಾಧಾರಣ ವ್ಯಕ್ತಿಯ ಕಡೆಗೆ ಬೊಟ್ಟು ಮಾಡಿ ತೋರಿಸಲಾಯಿತು. 'ಈ ಸೈನ್ಯದ ಸೇನಾಧಿಪತಿ ನೀವೇ ಆಗಿರುವಿರಾ? ಎಂದು ರಾಯಭಾರಿ ಸಮೀಪಕ್ಕೆ ಹೋಗಿ ಕೇಳಿದರು. ಹೌದೆಂದು ಹಝ್ರತ್ ಅಬೂ ಉಬೈದ(ರ) ಹೇಳಿದರು. ತಮ್ಮ ಸೈನ್ಯವನ್ನು ಇಲ್ಲಿಂದ ವಾಪಸ್ಸು ಕೊಂಡುಹೋಗಿರಿ ಎಂದು ರಾಯಭಾರಿ ವಿನಂತಿಸಿದರು. ಅದಕ್ಕೆ ಪ್ರತಿಫಲವಾಗಿ, ನಿಮ್ಮ ಪ್ರತಿಯೊಬ್ಬ ಸಿಪಾಯಿಗೆ ಎರಡು ಚಿನ್ನದ ಅಶ್ರಫಿಗಳು ಲಭಿಸುವುವು, ಸೇನಾಧಿಪತಿಗೆ ಒಂದು ಸಾವಿರ ದೀನಾರ್ ಸಿಗುವುದು ಮತ್ತು ನಿಮ್ಮ ಖ಼ಲೀಫರಿಗೆ ಎರಡು ಸಾವಿರ ದೀನಾರ್ ಕೊಡಲಾಗುವುದು ಎಂದೂ ಆ ರಾಯಭಾರಿ ಹೇಳಿದರು. ಹಝ್ರತ್ ಅಬೂ ಉಬೈದ(ರ) ಅದನ್ನು

ನಿರಾಕರಿಸಿ ಹೀಗೆ ಹೇಳಿದರು: ನಾವು ಪೈಸೆಯನ್ನು ಪಡೆಯಲು ಇಲ್ಲಿಗೆ ಬಂದಿಲ್ಲ. ಹಣ ಮತ್ತು ಸಂಪತ್ತು ಪಡೆಯುವ ಉದ್ದೇಶದಿಂದ ಇಲ್ಲಿಗೆ ಬಂದಿಲ್ಲ. ನಾವು ಅಲ್ಲಾಹನ ಸಂದೇಶವನ್ನು ಹರಡಲು ಬಂದಿದ್ದೇವೆ. ರಾಯಭಾರಿ ಅವರಿಗೆ ಬೆದರಿಕೆ ಹಾಕುತ್ತಾ ಅಲ್ಲಿಂದ ಹೊರಟುಹೋದ. ಅವನ ಕೋಪದ ನೋಟವನ್ನು ನೋಡಿ ಹಝ್ರತ್ ಅಬೂ ಉಬೈದ(ರ) ಅನ್‌ಹು ಸೈನ್ಯದೊಡನೆ ಯುದ್ಧಕ್ಕಾಗಿ ತಯಾರಾಗಲು ಅದೇಶಿಸಿದರು. ಮರುದಿನ ಬೆಳಿಗ್ಗೆ ಯುದ್ಧ ನಡೆಯಿತು. ಹಝ್ರತ್ ಅಬೂ ಉಬೈದ ಸೈನ್ಯದ ಹೃದಯಭಾಗದಲ್ಲಿ, ಎಂದರೆ, ಮಧ್ಯೆದಲ್ಲಿ ಇದ್ದರು. ಬಹಳ ಯುಕ್ತಿಯಿಂದ ಸೈನ್ಯವನ್ನು ನಡೆಸುತ್ತಿದ್ದರು. ಹೀಗೆ ಮುಸ್ಲಿಮರು ಅಲ್ಪ ಸಂಖ್ಯೆಯಲ್ಲಿ ಇದ್ದು ಕೂಡ ರೋಮನ್ನರನ್ನು ಸೋಲಿಸಿದರು. ಇದರ ಪರಿಣಾಮದಿಂದ ಅರ್ದನಿನ ಸಂಪೂರ್ಣ ಪ್ರದೇಶ ಮುಸ್ಲಿಮರಿಗೆ ಲಭಿಸಿತು. (ಅಶ್‌ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ-807-808, ಅಲ್‌ಬದರ್ ಪಬ್ಲಿಕೇಶನ್ಸ್, ಉರ್ದು ಬಝಾರ್ ಲಾಹೀರ್ 2000)

ಹಿಮ್ಸಿನ ಮೇಲೆ ವಿಜಯ: ಫಹಲ್ ಮೇಲೆ ವಿಜಯ ಸಾಧಿಸಿದ ನಂತರ ಹಝ್ರತ್ ಅಬೂ ಉಬೈದ(ರ) ಹಿಮ್ಸಿನ ಕಡೆಗೆ ಹೊರಟರು. ಇದು ಸಿರಿಯಾದ ಒಂದು ಪ್ರಸಿದ್ಧ ಪಟ್ಟಣವಾಗಿತ್ತು. ಯುದ್ಧ ರೀತಿಯಲ್ಲೂ ರಾಜಕೀಯವಾಗಿಯೂ ಮುಖ್ಯವಾದ ಪಟ್ಟಣವಾಗಿತ್ತು. ಮಾರ್ಗ ಮಧ್ಯೆ ಲೆಬಾನಿನ ಬಾಲ್‌ಬುಕ್ ಎಂಬ ಪುರಾತನ ಪಟ್ಟಣದಿಂದ ದಾಟಿದರು. ಇದು ಡಮಸ್ಕಸ್‌ನಿಂದ ಮೂರು ದಿನದ ಯಾತ್ರೆಯ ದೂರದಲ್ಲಿದೆ. ಬಾಲ್‌ಬುಕ್ ಪಟ್ಟಣವು ವಿಗ್ರಹರಾಧನೆಯ ದೊಡ್ಡ ಕೇಂದ್ರವಾಗಿತ್ತು. ಅಲ್ಲಿಯ ನಿವಾಸಿಗಳು ಹಝ್ರತ್ ಅಬೂ ಉಬೈದರೊಡನೆ ಯುದ್ಧ ಮಾಡುವ ಬದಲಿಗೆ ಮೈತ್ರಿ ಸಂಧಾನ ಮಾಡಲು ವಿನಂತಿಸಿದರು. ಅದನ್ನು ಜಿಝ್ಯಿಯಾಧ ಶರತ್ತಿನೊಂದಿಗೆ ಅಂಗೀಕರಿಸಲಾಯಿತು. ಅನಂತರ ಹಝ್ರತ್ ಅಬೂ ಉಬೈದ(ರ) ಅವರೊಡನೆ ಯಾವುದೇ ಯುದ್ಧ ಮಾಡಲಿಲ್ಲ. ಕೇವಲ ಜಿಝ್ಯಿಯ ಪಡೆಯುತ್ತಿದ್ದರು. ಅವರು ಅವರ ಧರ್ಮದಲ್ಲಿ ನೆಲೆನಿಂತಿದ್ದರು. ಅನಂತರ ಅಬೂ ಉಬೈದ ಹಿಮ್ಸಿನ ದಿಕ್ಕಿಗೆ ಹೋದರು. ಅದನ್ನು ಸುತ್ತುವರೆದರು. ಹಝ್ರತ್ ಖಾಲಿದ್ ಬಿನ್ ವಲೀದ್ ಸಹ ಅವರೊಂದಿಗೆ ಇದ್ದರು. ಪಟ್ಟಣದವರಿಗೆ ರೋಮನಿನ ಅರಸನಿಂದ ನೆರವು ಸಿಗಬಹುದು ಎಂಬ ಪ್ರತೀಕ್ಷೆಯಿತ್ತು. ಆದ್ದರಿಂದ ಅವರು ಯುದ್ಧ ಮಾಡಲು ತಯಾರಾದರು. ಆದರೆ ಅವರಿಗೆ ಯಾವುದೇ ನೆರವು ಸಿಗದೇ ಹೋದಾಗ, ಅವರು ತಮ್ಮ ಅಸ್ತ್ರಗಳನ್ನು ಕೆಳಗೆ ಹಾಕಿದರು. ಮೈತ್ರಿಮಾಡಲು ವಿನಂತಿಸಿದರು. ಅದನ್ನು ಅಂಗೀಕರಿಸಲಾಯಿತು. ಮೈತ್ರಿಯೊಂದಿಗೆ ಅವರಿಗೆ ಜೀವ ಮತ್ತು ಸಂಪತ್ತಿನ ಸಂರಕ್ಷಣೆಯನ್ನು ಸಹ ಮಾಡಿಕೊಡಲಾಯಿತು. ಅವರ ಆರಾಧನಾಲಯ ಮತ್ತು ಕಟ್ಟಡಗಳನ್ನು ಸುರಕ್ಷಿತಗೊಳಿಸಲಾಯಿತು. ಮನೆಗಳು ಮತ್ತು ಆರಾಧನಾಲಯಗಳು ಸುರಕ್ಷಿತವಾಯಿತು. ತಮ್ಮ ಧರ್ಮದಲ್ಲಿ ನೆಲೆನಿಂತವರ ಮೇಲೆ ಜಿಝ್ಯಿಯ ಮತ್ತು ಖರಾಜ್ ವಿಧಿಸಲಾಯಿತು. ಎಂದರೆ, ತಮ್ಮ ಧರ್ಮದಲ್ಲಿ ನೆಲೆನಿಲ್ಲಬಹುದು. ಆದರೆ ಜಿಝ್ಯಿಯ ಮತ್ತು ಖರಾಜ್ ಎಂದರೆ, ತೆರಿಗೆ ಕೊಡಬೇಕಾಗುವುದು.

ಲಾಝ್‌ಕಿಯಾ ವಿಜಯ: ಅದರ ನಂತರ ಮುಸ್ಲಿಮರ ಸೈನ್ಯ, ಸಿರಿಯಾ ಪಟ್ಟಣವಾದ ಲಾಝ್‌ಕಿಯಾವನ್ನು ಸುತ್ತುವರೆದರು. ಇದು ಸಮುದ್ರದ ದಡದಲ್ಲಿ ಇದೆ. ಇದು. ಹಿಮ್ಸಿನ ಆಸುಪಾಸಿನ ಒಂದು ಪ್ರದೇಶವಾಗಿತ್ತು. ಸುರಕ್ಷೆಯ ವ್ಯವಸ್ಥೆಯ ದೃಷ್ಟಿಯಲ್ಲಿ ತುಂಬ ಸುದೃಢವಾದ ಪಟ್ಟಣವಾಗಿತ್ತು ಲಾಝ್‌ಕಿಯಾ. ಪಟ್ಟಣದ ನಿವಾಸಿಗಳ ಬಳಿ ದವಸಧಾನ್ಯಗಳ ಶೇಖರಣೆಗಳು ತುಂಬ ಇತ್ತು. ಆದ್ದರಿಂದ ಅವರಿಗೆ ಮುತ್ತಿಗೆಯ ಬಗ್ಗೆ ಯಾವುದೇ ಪರಿವೆ ಇರಲಿಲ್ಲ. ಹಝ್ರತ್ ಅಬೂ ಉಬೈದ(ರ) ಅದರ ಮೇಲೆ ವಿಜಯ ಸಾಧಿಸಲು ಒಂದು ಹೊಸ ವಿಧಾನವನ್ನು ಕಂಡುಹಿಡಿದರು. ಅವರು ಮೈದಾನದಲ್ಲಿ ಒಂದು ರಾತ್ರಿ ಹಲವು ಹೊಂಡಗಳನ್ನು ಮಾಡಿದರು. ಅದನ್ನು ಹುಲ್ಲುಗಳಿಂದ ಮರೆಸಿದರು.ಬೆಳಿಗ್ಗೆ ಮುತ್ತಿಗೆಯನ್ನು ತೆರೆದು ಹಿಮ್ಸಿನ ಕಡೆಗೆ ಹೊರಟು ಹೋದರು. ಹೊಂಡಗಳನ್ನು ಮಾಡಿ, ಹುಲ್ಲುಗಳಿಂದ ಮರೆಸಿದ ನಂತರ, ಮರಳಿಹೋಗುತ್ತಿದ್ದೇವೆ ಎಂಬ ರೀತಿಯಲ್ಲಿ ಅಲ್ಲಿಂದ ಹೊರಟುಹೋದರು. ಪಟ್ಟಣದವರು ಮತ್ತು ಪಟ್ಟಣದಲ್ಲಿದ್ದ ಸೈನಿಕರು ಇದರಿಂದ ಸಂತೋಷಗೊಂಡರು.ಸಮಾಧಾನದಿಂದ ಪಟ್ಟಣದ ಬಾಗಿಲುಗಳನ್ನು ತೆರೆದರು.ಸುರಂಗಗಳ ರೂಪದಲ್ಲಿದ್ದ ಹೊಂಡಗಳಲ್ಲಿ ಹಝ್ರತ್ ಅಬೂ ಉಬೈದರ(ರ) ಸೈನ್ಯ ಅವಿತುಕೊಂಡಿತ್ತು. ಬೆಳಿಗ್ಗೆ ಪಟ್ಟಣದ ಬಾಗಿಲುಗಳನ್ನು ತೆರೆಯಲಾದಾಗ, ಅವರು ಅಚಾನಕ್ಕಾಗಿ ಶತ್ರುಗಳ ಮೇಲೆ ಆಕ್ರಮಣ ನಡೆಸಿದರು.ಪಟ್ಟಣದೊಳಗೆ ಪ್ರವೇಶಿಸಿ, ಪಟ್ಟಣದ ಮೇಲೆ ವಿಜಯ ಸಾಧಿಸಿತು. (ಸೈರುಸ್ಸಹಾಬ, ಶಾಹ್ ಮುಈನುದ್ದೀನ್ ನದವಿ, ಸಂಪುಟ-2, ಪುಟ-128, ದಾರುಲ್ ಇಶಾಅತ್ ಉರ್ದು ಬಝಾರ್ ಕರಾಚಿ ಪಾಕಿಸ್ತಾನ್) (ಅಶ್‌ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ-809, ಅಲ್‌ಬದರ್ ಪಬ್ಲಿಕೇಶನ್ಸ್, ಉರ್ದು ಬಝಾರ್ ಲಾಹೀರ್ 2000)

ಇದರ ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ಅಧಿಕವಾಗಿ ದುಆ ಮಾಡಿರಿ.ಅಲ್ಲಾಹನು ಅವರನ್ನು ಮೌಲವಿಯರ ಮತ್ತು ಆಡಳಿತಗಾರರ ಉಪದ್ರವಗಳಿಂದ ಸುರಕ್ಷಿತಗೊಳಿಸಲಿ.ಅಲ್ಲಿ ಪುನಃ ವಿರೋಧದ ಶಕ್ತವಾದ ಅಲೆಗಳು ಎದ್ದಿವೆ. ಕಾನೂನಿನ ರಕ್ಷಕರು, ನ್ಯಾಯವನ್ನು ತಿಳಿದಿಲ್ಲವೆಂದು ಮಾತ್ರವಲ್ಲ, ಅದನ್ನು ಗಾಳಿಗೆ ತೂರುತ್ತಿದ್ದಾರೆ. ರಾಜಕೀಯ ಸ್ಥಿರತೆ ಬಹುಶಃ ಸಿಗಬಹುದು ಎಂದು ಭಾವಿಸಿಕೊಂಡು ಮೌಲವಿಯರು ಹೇಳುವುದರ ಹಿಂದೆ ಹೋಗುತ್ತಿದ್ದಾರೆ. ಆದರೆ ಇದು ಅವರ ತಪ್ಪು ಗ್ರಹಿಕೆಯಾಗಿದೆ. ಇದೇ ಸಂಗತಿ ಅವರ ನಾಶಕ್ಕೆ ಕಾರಣವಾಗುವುದು ಎಂಬುದನ್ನು ನೆನಪಿಡಲಿ. ನಾವಂತು ಹಿಂದಿನಿಂದಲೇ ಈ ಕಷ್ಟತೆಗಳಿಂದ ಸಾಗುತ್ತಾ ಬಂದಿದ್ದೇವೆ. ಈಗಲೂ ಅಲ್ಲಾಹನ ಸಹಾಯದಿಂದ ಇವುಗಳನ್ನು ದಾಟುವೆವು. ಇನ್‌ಶಾ ಅಲ್ಲಾಹ್. ಆದರೆ ಇವರು ತಮ್ಮ ಕುಚೇಷ್ಟೆಗಳಿಂದ ಹಿಂದೆ ಸರಿಯದಿದ್ದರೆ, ಇವರ ನಾಶ ಖಚಿತವಾದುದಾಗಿದೆ. ಆದ್ದರಿಂದ ಅಹ್ಮದಿಯರು ತುಂಬಾ ದುಆ ಮಾಡಿರಿ. ಅಲ್ಲಾಹನು ಈ ಕಷ್ಟತೆಗಳನು ನೀಗಿಸಲಿ.

ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ಮತ್ತು ಹೊರಗಿನ ಅಹ್ಮದಿಯರು ಸಹ ಅಲ್ಲಾಹನೊಂದಿಗೆ ತಮ್ಮ ಸಂಬಂಧವನ್ನು ವರ್ಧಿಸಬೇಕು.ಅಲ್ಲಾಹನ ಸಹಾಯ ಮತ್ತು ನೆರವು ಬೇಗನೆ ಬರಲಿ ಮತ್ತು ಈ ಸಂಕಷ್ಟಗಳಿಂದ ಅಲ್ಲಿರುವ ಅಹ್ಮದಿಯರು ಮುಕ್ತಿ ಪಡೆಯಲಿ.

**********************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮೀನು ಎಂದರ್ಥ ಅದೇ ರೀತಿ ನೂನ್ ಎಂಬುದು ವೇಗ ಮತ್ತು ಮೀನಿನ ಅರ್ಥವು ಕೊಡುತ್ತದೆ. ಅಂದ ಹಾಗೆ ಯೂನುಸ್(ಅ) ರ ಆ ಸ್ಥಿತಿ ಒಂದು ರೀತಿಯ ಮಗ್ಝಾಝಿಬತ್‌ನಂತೆಯೇ ಇತ್ತು. ವಾಸ್ತವದಲ್ಲಿ ಶಿಕ್ಷೆ ದೂರವಾದ ಕಾರಣ ಅವರಲ್ಲಿ ಒಂದು ಸಂಶಯಭಾವ ಉಂಟಾಯಿತು. ತನ್ನ ದುಆ ವ್ಯರ್ಥವಾಯಿತಲ್ಲ, ನನ್ನ ಭವಿಷ್ಯವಾಣಿ ಏಕೆ ಪೂರ್ತಿ ಆಗಲಿಲ್ಲ ಎಂದು. ಇದು ಮಗ್ಝಾಝಿಬತ್ ಸ್ಥಿತಿಯಾಗಿತ್ತು. ಅದರಿಂದ ಒಂದು ಪಾಠ ದೊರೆಯುತ್ತದೆ. ಅದೇನೆಂದರೆ ಅಲ್ಲಾಹನ ವಿಧಿಯನ್ನು ಬದಲಿಸಬಹುದು ಎಂಬುದಾಗಿದೆ. ಪಶ್ಚಾತ್ತಾಪಪಡುವುದು, ರೋಧಿಸುವುದು, ದಾನ ನೀಡುವುದರಿಂದ ಪಾಪಗಳು, ಅಪರಾಧಗಳು ರದ್ದುಗೊಳ್ಳುತ್ತವೆ. ಸತ್ಕರ್ಮಗಳ ತತ್ವದ ಮೂಲ ಇದೇ ಆಗಿದೆ. ಇದು ಅಲ್ಲಾಹನನ್ನು ರಾಜಿ ಮಾಡುವ ವಿಧಾನವಾಗಿದೆ. ಸ್ವಪ್ನ ಸಾಕ್ಷ್ಯದ ಅರ್ಥ ಜ್ಞಾನದಲ್ಲಿ ಸಂಪತ್ತು ಯಕೃತ್ತಿನಂತಿದೆ. ಆದುದರಿಂದಲೇ ಸಂಪತ್ತನ್ನು ದಾನ ಮಾಡುವುದು ಯಕೃತ್ತು ನೀಡಿದಂತೆಯೇ ಸರಿ. ಮನುಷ್ಯನು ದಾನ ಮಾಡುವಾಗ ಎಷ್ಟೊಂದು ಸ್ಥಿರತೆಯನ್ನು ತೋರಿಸುತ್ತಾನೆ. ವಾಸ್ತವವೇನೆಂದರೆ ಕೇವಲ ಮಾತುಗಳಿಂದ ಏನೂ ಸಾಧಿಸಲಾಗುವುದಿಲ್ಲ. ನಡೆದು ತೋರಿಸುವುದು ಮುಖ್ಯವಾಗಿರುತ್ತದೆ. ಸದಖ ಎನ್ನಲು ಅದೇ ಕಾರಣ ಅದು ಸತ್ಯವಂತರ ಲಕ್ಷಣವಾಗಿರುತ್ತದೆ. (ಮಲ್ಫೂಝಾತ್ ಸಂಪುಟ 1, ಪುಟ 218-219 ಮುದ್ರಣ ಖಾದಿಯಾನ್ 2018)

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮತ್ತು ನಿಜವಾದ ಇಸ್ಲಾಂ ಸ್ಪಷ್ಟವಾಗತೊಡಗಿತು. ಅವರ ವರ್ತನೆಯಲ್ಲಿಯೂ ಬದಲಾವಣೆಯಾಯಿತು. ಈಗ ಎಂದು ಮಥನಾಡಿದರೂ ಮಿರ್ಝಾ ಸಾಹಿಬ್ ಹೇಳುವ ಬದಲು ಅಲ್ಬಾಇಯಾದಲ್ಲಿ ಒಛುಛು ಪದವನ್ನು ಬಳಸುತ್ತಾರೆ. ಬೈಅತ್ ಮಾಡಲು ಹೇಳಿದಾಗ, ಹೇಳಿದರು. ನನಗೆ ಇನ್ನು ಶೋಧನೆ ನಡೆಸಬೇಕಾಗಿದೆ. ಅಂತಿಮವಾಗಿ ಅವರು ಹಜ್‌ರತ್ ಮಸೀಹ್ ಮೌಊದ್ (ಅ) ರವರ ಗ್ರಂಥ "ಇಸಾಮಿ ಉಸುಲ್ ಕೀ ಫಿಲಸಫಿ" ಗ್ರಂತದ ಅಲ್ಬಾಇಯನ್ ಅನುವಾದ ಓದಿದರು. ಅವರಿಗೆ ಈ ಗ್ರಂತ ಎಷ್ಟು ಮೆಚ್ಚಿಗೆ ಆಯಿತೆಂದರೆ ಅದನ್ನು ಅವರು ಎರಡು ಸಲ ಪ್ರಾರಂಭದಿಂದ ಕೊನೆಯವರೆಗೆ ಓದಿದರು. ಅದರ ನಡುವೆಯೇ ಅವರು ಹಝ್‌ರತ್ ಮಸೀಹ್ ಮೌಊದ್ (ಅ) ರನ್ನು ಸ್ವಪ್ನದಲ್ಲಿ ಕಂಡರು. ಅದರಲ್ಲಿ ಹುಝೂರ್ ಅವರಿಗೆ ಖಿಲಾಫತ್‌ದೊಂದಿಗೆ ಸಂಬಂಧ ಹೊಂದಲು ಸಂದೇಶ ನೀಡಿದರು. ಆಗ ಅವರು ಬೈಅತ್ ಮಾಡಿದರು. ಬೈಅತ್ ನಂತರ ಅವರು ಅಲ್ಬಾನಿಯನ್ ವೆಬ್‌ಸೈಟಿನ ಮೇಲೆ ಬಿತ್ತರಗೊಳ್ಳುವ ಎಲ್ಲ ಸಂದೇಶಗಳನ್ನು ಗಮನವಹಿಸಿ ಅಧ್ಯಯನ ಮಾಡುತ್ತಾರೆ. ಮತ್ತು ಸದಾ ಪವಿತ್ರ ಖುರ್‌ಆನ್ ಜಮಾಅತಿನಿಂದ ಅನುವಾದಿತಗೊಂಡ ಅಲ್ಬಾನಿಯನ್ ಅನುವಾದ ತುಂಬ ಕೌತುಕದಿಂದ ಅಧ್ಯಯನ ಮಾಡುತ್ತಾರೆ. ಅದೇ ರೀತಿ ಖುತುಬಗಳು ಮತ್ತು ಭಾಷಣಗಳು ವಿಧಿಬದ್ಧವಗಿ ಆಲಿಸುತ್ತಾರೆ.

ವಿರೋಧಿಯರ ಅಪಪ್ರಚಾರ ಫಲವಾಗಿ ಆದ ಬೈಅತ್‌ಗಳು ತಂಝಾನಿಯಾದಿಂದ ರೋವೋಮಾ ವಲಯದ ಒಂದು ಜಮಾಅತಿನ ಮುಅಲ್ಲಿಮ್ ಹೇಳುತ್ತಾರೆ. ನಮ್ಮ ಊರಿನಲ್ಲಿ ವಹಾಬಿ ಪಂಥದ ಓರ್ವ ಮೌಲ್ವಿ ಹಿಂದಿನ ವರ್ಷ ಜಮಾಅತಿನ ವಿರುದ್ಧ ಪ್ರಚೋದಾತ್ಮಕ ಭಾಷಣಗಳನ್ನು ಮಾಡಿ ದ್ವೇಷ ಹರಡಿದ್ದರು. ತಮ್ಮ ಖುತುಬದಲ್ಲಿ ಜಮಾಅತಿನ ವಿರುದ್ಧ ವಿಶೇಷವಾಗಿ ಹಝ್‌ರತ್ ಮಸೀಹ್

ಮೌಊದ್ (ಅ) ರವರ ವ್ಯಕ್ತಿಗತ ವಿಷಯವಾಗಿ ಅಶಲೀಲ ಭಾಷೆ ಉಪಯೋಗ ಮಾಡುತ್ತಿದ್ದರು. ಅವರ ಮಾತಿನ ಲಹರಿ ಎಷ್ಟೊಂದು ಕೆಟ್ಟದ್ದಾಗಿತ್ತೆಂದರೆ ಆ ಮಸೀದಿಗೆ ಹೋಗುವ ಕೆಲವು ಮಹಿಳೆಯರು ಮಸೀದಿಗೆ ಹೋಗುವುದೇ ನಿಲ್ಲಿಸಿದ್ದರು.

ಈ ವಿರೋಧದ ಕಾರಣದಿಂದಾಗಿ ಆ ಮಹಿಳೆಯರಲ್ಲಿ ಒಬ್ಬಳು ಜಮಾಅತಿನ ಬಗ್ಗೆ ತನಿಖೆ ಕೈಗೆತ್ತಿಕೊಂಡರು ಮತ್ತು ಕೊನೆಗೆ ಅಹ್ಮದಿಅತ್ ಅನ್ನು ಸತ್ಯ ಹಾಗೂ ನಿಜವಾದುದು ಎಂದು ತಿಳಿದು ಬೈಅತ್ ಮಾಡಿದರು. ಇನ್ನೊಂದೆಡೆ ಆ ಮೌಲ್ವಿಯ ಅಪಮಾನ ಹೇಗಾಯಿತೆಂದರೆ ಅನೈತಿಕ ಸಂಬಂಧವಾಗಿ ಅವನು ಸೆರೆಹಿಡಿಯಲ್ಪಟ್ಟ. ಊರಿನವರು ಅವನ ಮೇಲೆ ಹೌಹಾರಿದರು. ಇವನ ದೆಸೆಯಿಂದ ನಮ್ಮ ಊರಿನ ಹೆಸರು ಕೆಟ್ಟಿತು ಎಂದು. ಅದೇ ರೀತಿ ಇನ್ನು ಕೆಲವು ಘಟನೆಗಳು ಘಟಿಸಿವೆ.

ಫಿಜಿಯ ಮರಬ್ಬಿ ಸಾಹೇಬರು ಬರೆಯುತ್ತಾರೆ. ರಾಂಖಿ ಎಂಬ ಒಂದು ದ್ವೀಪವಿದೆ. ಅದರ ಪ್ರವಾಸ ಮಾಡುವ ಭಾಗ್ಯ ದೊರೆಯಿತು. ನಾವು ಸಾಹಿತ್ಯ (Literature) ಹಂಚುತ್ತಿದ್ದರು. ಇಬ್ಬರು ಯೂರೋಪಿಯನ್ ಪಾದರಿಗಳು ಅಲ್ಲಿಗೆ ಬಂದರು. ಅವರ ಜೊತೆ ಒಂದು ಸ್ಥಳೀಯ ಕ್ರೈಸ್ತ ಕುಟುಂಬವು ಇತ್ತು. ಅವರ ಜೊತೆ ತಬ್ಲೀಗ್ ಮಾತುಕತೆ ಪ್ರಾರಂಭವಾಯಿತು. ನಾನು Bible ನಿಂದ ಏಕದೇವತ್ವ ಮತ್ತು ರಸೂಲುಲ್ಲಾಹ್ (ಸ) ರವರ ಸತ್ಯತೆ ಸಾಬೀತುಪಡಿಸಿದಾಗ ಆ ಪಾದರಿಯವರಿಂದ ಯಾವ ಮಾತು ಹೊರಡಲಿಲ್ಲ. ನಿರುತ್ತರವಾದರು. ಇಬ್ಬರು ಪಾದರಿಯರು ಕೆಲಸಗಳ ನೆಪಒಡ್ಡಿ ನಾಚಿಕೆಪಟ್ಟು ಅಲ್ಲಿಂದ ಹೊರಟುಬಿಟ್ಟರು. ಅವರು ಹೊದ ಮೇಲೆ ಆ ಕ್ರೈಸ್ತ ಕುಟುಂಬದೊಂದಿಗೆ ಮಾತುಕತೆಯಾದ ನಂತರ ತಿಳಿಯಿತು. ಅವರು ಕ್ರೈಸ್ತರಾಗಿದ್ದರು. ಕೆಲ ಅವಧಿಯಿಂದ ವಿವಿಧ ಪಂಥಗಳ ಸಮಸ್ಯೆಗಳಿಂದಾಗಿ ನಾಸ್ತಿಕರಾಗಿಬಿಟ್ಟಿದ್ದರು. ಆದುದರಿಂದ ಆ ಕುಟುಂಬಕ್ಕೆ ಇಸ್ಲಾಮಿನ ನಿಜವಾದ ಶಿಕ್ಷಣ ತಿಳಿಸಲಾಯಿತು ಮತ್ತು ಜಮಾಅತಿನ ಸಾಹಿತ್ಯ ನೀಡಲಾಯಿತು. ಆ ಕುಟುಂಬ ಜೊತೆಯಲ್ಲಿ ಪ್ರಶ್ನೋತ್ತರಗಳ ದೀರ್ಘವಾದ ಸಭೆ ನಡೆಯಿತು. ಮತ್ತು ಅಲ್ಲಮ್ದು ಲಿಲ್ಲಾಹ್ ಅವರು ಜಮಾಅತಿನ ಸಾಹಿತ್ಯ ಓದಿದ ನಂತರ ಬೈಅತ್ ಮಾಡಿದರು.

### ಮಾದರಿ ನೋಡಿ ಬೈಅತ್ ಮಾಡುವವರು.

ಮಾದರಿ ನೋಡಿ ಬೈಅತ್ ಮಾಡುವ ಘಟನೆ ಒಂದು ಹೀಗಿದೆ. ಕೋರೋಕನ್ ಹಾಸಾದ ಒಬ್ಬ ಮಿತ್ರರು ದಾವೂದ್ ಇಲಾಂಗ ಸಾಹಿಬ್ ಅವರಿಗೆ ಮಿಷನ್ ಹೌಸ್‌ನಲ್ಲಿ ಒಂದು ಕೆಲಸ ಕೊಡಲಾಯಿತು. ಕೆಲಸ ಮುಗಿದ ನಂತರ ಅವರಿಗೆ ಅವರ ದುಡಿಮೆ ಕೊಡಲಾಯಿತು. ಮುಅಲ್ಲಿಮ್ ಸಾಹಿಬ್ ಹೇಳುತ್ತಾರೆ. ಅವರು ಅದರಿಂದ ಸ್ವಲ್ಪ ಭಾಗ ತೆಗೆದು ಕಮಿಷನ್ ರೂಪದಲ್ಲಿ ಕೊಡಲು ಮುಂದಾದರು. ನಾನು ತೆಗೆದುಕೊಳ್ಳಲಿಲ್ಲ. ಮತ್ತು ಅವರಿಗೆ ಹೇಳಿದೆ. ಇದು ನಿಮ್ಮ ಹಕ್ಕು ನನಗೆ ತೆಗೆದುಕೊಳ್ಳಲು ಆಗುವುದಿಲ್ಲ. ಆಗ ದಾವೂದ್ ಸಾಹಿಬ್ ಹೇಳಿದರು. ಇದು ಮೊದಲ ಸಲ ನಾನು ನೋಡುತ್ತಿದ್ದೇನೆ. ಒಬ್ಬನಿಗೆ ಕಮಿಷನ್ ಕೊಡ ಹೊರಟರೆ ನಿರಾಕರಿಸುತ್ತಿದ್ದಾರೆ. ಮತ್ತೆ ಮೂರು ವಾರಗಳ ನಂತರ ಬಂದರು ಮತ್ತು ಹೇಳಿದರು. ನಾನು ತುಂಬ ಯೋಚಿಸಿದ್ದೇನೆ. ಯಾವ ರೀತಿಯಲ್ಲಿ ನೀವು ಕಾರ್ಯ ನಿರ್ವಹಿಸುತ್ತಿದ್ದೀರಿ. ನಿಮ್ಮ ಆಚಾರ ವಿಚಾರವೇನಿದೆ. ಅದು ತಪ್ಪು ಆಗಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ನಾನು ಬೈಅತ್ ಮಾಡುತ್ತೇನೆ. ಬೈಅತ್ ಮಾಡಿದ ನಂತರ ದಾವೂದ್ ಸಾಹಿಬರಲ್ಲಿ ತುಂಬ ಬದಲಾವಣೆಯಾಯಿತು. ಈಗ ತುಂಬ ಸಕ್ರಿಯರಾಗಿದ್ದಾರೆ. ಚಂದಾಗಳಲ್ಲಿಯೂ ವಿಧಿಬದ್ಧರಾಗಿದ್ದಾರೆ.

ಬಶಿಕೀಕ್ ಖಿರ್‌ಗಿಸ್ತಾನ್‌ನಿಂದ MUKASHOVA ಸಾಹಿಬ ಬರೆಯುತ್ತಾರೆ. ನನ್ನ ವಯಸ್ಸು 37 ವರ್ಷವಾಗಿದೆ. 9 ವರ್ಷ ಹಿಂದೆ ಅಹ್ಮದಿಅತ್ತಿನ ಪರಿಚಯವಾಯಿತು. ಆಗ ನನ್ನ ಪತಿ ಅರಸ್‌ಲಾನ್ ಬೈಅತ್ ಮಾಡಿ ಅಹ್ಮದಿಅತ್ ಸೇರಿದ್ದ. ನಾವು ಒಂದು ಸಾಧಾರಣ ಕುಟುಂಬದವರಾಗಿದ್ದೆವು. ನಾನು ಅವರು ಬೈಅತ್ ಮಾಡುವಾಗ ಯಾವ ವಿರೋಧವು ಮಾಡಲಿಲ್ಲ. ಮತ್ತು ಸಂತೋಷವು ವ್ಯಕ್ತಪಡಿಸಲಿಲ್ಲ. ನಾನು ಅಹ್ಮದಿಯಾ ಜಮಾಅತಿನ ಬಗ್ಗೆ ತಿಳಿದಿರಲಿಲ್ಲ. ನನ್ನ ಪತಿಯನ್ನು ನೊಡುತ್ತಿದ್ದೆ. ಅವನು ಪ್ರತಿ ಶುಕ್ರವಾರ ಜುಮಅ ನಮಾಝಿಗೆ ಅವಶ್ಯವಾಗಿ ಹೋಗುತ್ತಿದ್ದ. ಅದನ್ನು ನೋಡಿ ನನಗೆ ಭಯವಾಗತೊಡಗಿತು. ಬಹುಶ: ಈಗ ನನಗೆ ಪರದೆ ಮಾಡಲು ಒತ್ತಾಯಿಸಬಹುದು ಎಂದು. ಧಾರ್ಮಿಕ ಉಗ್ರಪಂಥಿಯಾಗಬಹುದು ಎಂದು ಎಣಿಸಿದೆ. ಆದರೆ ನಾನು ಭಾವಿಸಿದೆ. ಅದರ ಬದಲು ಅವನಲ್ಲಿ ಇನ್ನು ಹೆಚ್ಚಿನ ನೀತಿವಂತಿಕೆ ಬರುತಿತ್ತು. ಅವನು ಪ್ರೀತಿಸುವ ಮತ್ತು ದಯಾಳು ಸ್ವಭಾವನಾಗುತ್ತಿದ್ದ. ಸರಿಯಾಗಿ ನೋಡಿಕೊಳ್ಳುತ್ತಿದ್ದ. ಭರವಸೆ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಬಲವಂತನಾಗಿದ್ದ. ಹೇಳುತ್ತಾರೆ. ಮತ್ತೆ ಆರ್ಥಿಕ ಸಮಸ್ಯೆಗಳಿಂದಾಗಿ ಅವನು ಶಿಕಾಗೋ (ಅಮೇರಿಕ) ಹೋದ. ನಾನು ನನ್ನ ಸಣ್ಣ ಮಕ್ಕಳೊಂದಿಗೆ ಮನೆಯಲ್ಲಿಯೇ ಇರತೊಡಗಿದೆ. ನಾನು ಬೈಅತ್ ಮಾಡಿರಲಿಲ್ಲ. ಅಮೇರಿಕ ವೀಸಾಗೋಸ್ಕರ 5 ಸಲ Documents ಕೊಟ್ಟೆ. ಪ್ರತಿಸಲವು ತಿರಸ್ಕರಿಸಲ್ಪಟ್ಟಿತು. ಅದಕ್ಕಾಗಿ ನಾನು ಜಪಾನ್ ಪ್ರವಾಸವು ಮಾಡಿದೆ. ಫ್ರಾನ್ಸ್‌ಗೆ ಹೋದೆ. ಮೆಕ್ಸಿಕೋ ಹೊದೆ. ಆದರೆ ಎಲ್ಲೂ ಕೆಲಸ ಸಾಧಿಸಲಿಲ್ಲ. ಹೇಳುತ್ತಾರೆ. ದಿನಾಲೂ ನಮ್ಮಲ್ಲಿ ಜಗಳವು ಪ್ರಾರಂಭವಾಯಿತು. ನಾನು ಯೋಚನೆ ಮಾಡುತ್ತಿದ್ದೆ. ಏಕೆ ಅಲ್ಲಾಹನು ನಮ್ಮ ಸಹಕಾರಕ್ಕೆ ಬರುತ್ತಿಲ್ಲ. ನಾನು ತುಂಬ ದುಆ ಸಹ ಮಾಡುತ್ತಿದ್ದೆ. ಆದರೆ ಬೈಅತ್ ಮಾಡಿರಲಿಲ್ಲ. ಹೇಳುತ್ತಾರೆ. ಒಂದು ದಿನ ನನ್ನ ಪತಿ ನನಗೆ ಹೇಲಿದ. ಯಾರು ಅಹ್ಮದಿಅತ್ತಿನ ಪರಿಚಯ ಹೊಂದಿಯೂ, ಇದು ಸರಿಯಾದ ಮಾರ್ಗ ಎಂದು ತಿಳಿದೂ ಬೈಅತ್ ಮಾಡುವುದಿಲ್ಲವೋ ಅಲ್ಲಾಹನು ಅವರಿಗೆ ಕಠಿಣ ಪರೀಕ್ಷೆಯಲ್ಲಿ ಹಾಕುತ್ತಾನೆ. ಆಗ ನನು ಆತ್ಮಾಲೋಕನ ಮಾಡಿಕೊಂಡೆ. ಮರುದಿನ ನಾನು ಬೈಅತ್ ಮಾಡಿದೆ ಮತ್ತು ಐದು ಸಲ ನಮಾಝುಗಳನ್ನು ಪ್ರಾಮಾಣೀಕವಾಗಿ ಮಾಡತೊಡಗಿದೆ. ಮೊದಲು ಅಷ್ಟೊಂದು ಪ್ರಾಮಾಣಿಕತೆಯಿಂದ ನಮಾಝ್ ಮಾಡಿರಲಿಲ್ಲ. ದುಆ ಮಾಡತೊಡಗಿದೆ. ಪವಿತ್ರ ಖುರ್‌ಆನ್ ಪಠಿಸತೊಡಗಿದೆ. ತಹಜ್ಜುದ್ ನಮಾಝ್ ಸಹ ನಿರ್ವಹಿಸಲು ಪ್ರಾರಂಭಿಸಿದೆ. ಮಕ್ಕಳಿಗೂ ನಮಾಝ್ ಮಾಡಿಸುತ್ತಿದ್ದೆ. ಪ್ರತಿ ಜುಮಅ ಇವರಿಗೂ ಸಹ ಹೋಗುವಂತೆ ಪ್ರಯತ್ನಪಟ್ಟೆ. ಹೇಳುತ್ತಾರೆ. ಕೆಲ ಅವಧಿ ನಂತರ ಅಲ್ಲಾಹನು ನಮಗೆ ಅನುಗ್ರಹಿಸಿದನು. ಅಮೇರಿಕ ಹೊಗಲು ಅನುಮತಿ ದೊರೆಯಿತು. ತನ್ನ ಪತಿಯ ವರ್ತನೆ ಮತ್ತು ಅಲ್ಲಾಹನ ಈ ಅನುಗ್ರಹ ಕಂಡು ದೃಢವಾಯಿತು. ಈ ಜಜಮಾಅತ್ ಸತ್ಯವಾಗಿದೆ ಎಂದು.

### ರೇಡಿಯೋ ಮೂಲಕ ಅಹ್ಮದಿಅತ್ ಸ್ವೀಕಾರ

ಅಲ್ಲಾಹನು ಯಾವ ರೀತಿ ಸಹಾಯಕ್ಕೆ ಬರುವನು ಎಂಬ ಬಗ್ಗೆ, ಮತಾದಿ ವಲಯದ ಮುಬಲ್ಲಿಗ್ ಬರೆಯುತ್ತಾರೆ. ತಜ್ಞರ ಹೇಳಿಕೆ ಅನ್ವಯ ನಮ್ಮ ರೇಡಿಯೋ ಅಹ್ಮದಿಯಾದ ಸಿಗ್‌ನಲ್ 80 ಕಿ.ಮೀ ವರೆಗೆ ಹೋಗಬಹುದು. ಅದಕ್ಕಿಮತ ದೂರ ಸಿಗ್‌ನಲ್ ಹೋಗುವುದಿಲ್ಲ. ಆದರೆ ಅಲ್ಲಾಹನು ವಾಯುವನು. ಹೀಗೆ ತಮ್ಮ ನಿಯಂತ್ರಣದಲ್ಲಿ ಇಟ್ಟಿರುವನು. ಅದು ಒಔಂಃಂಆಂ ನಗರ. ಅದು ನಮ್ಮ ರೇಡಿಯೋದಿಂದ 180 ದೂರದಲ್ಲಿದೆ. ಅಲ್ಲಿಯ ಸುನ್ನಿ ಜಮಾಅತಿನ ಇಮಾಮರು ಹೇಳುತ್ತಾರೆ. ಅಹ್ಮದಿಯಾ ರೇಡಿಯೋದ ಸಿಗ್‌ನಲ್‌ಗಳು ಅವರ ತನಕ ಉತ್ತಮ ರೀತಿಯಲ್ಲಿ ಬರುತ್ತಿವೆ ಮತ್ತು ಎಂದಿನಿಂದ ಅಹ್ಮದಿಯಾ ರೇಡಿಯೋದ ಆರಂಭ ಆಗಿದೆಯೋ ಅಲ್ಲಿಂದ ಸತತವಾಗಿ ಕೇಳುತ್ತಿದ್ದೇವೆ. ಅದರ ಫಲವಾಗಿ ಅಲ್ಲಾಹನು ಅವರ ಹೃದಯವನ್ನು ವಿಶಾಲಗೊಳಿಸಿದನು. ಅವರು ಖುದ್ದಾಗಿ ರೇಡಿಯೊ ನಿಲಯಕ್ಕೆ ಬಂದು ಪತ್ನಿ ಮತ್ತು ಮಕ್ಕಳ ಸಮೇತ ಬೈಅತ್ ಮಾಡಿದರು.

ಖಲೀಲ್ ಅಹ್ಮದ್ ಖಾನ್ ಸಾಹಿಬ್ ಮುಬಲ್ಲಿಗ್ ಚೌಡ್ ದೃಢಹೆಜ್ಜೆಯ ಕುರಿತು ಬರೆಯುತ್ತಾರೆ. ಚಅರ್‌ಸೇತ್ ಎಂಬ ಕ್ಷೇತ್ರ ದೀರ್ಘ ಅವಧಿಯಿಂದ ನಮ್ಮ ತಬ್ಲೀಗ್ ಕ್ಷೇತ್ರವಾಗಿದ್ದ ಅಲ್ಲಾಹನ ಅನುಗ್ರಹದಿಮದ ಹಿಂದಿನ ವರ್ಷ ಈ ಕ್ಷೇತ್ರದ ಸುಲ್ತಾನರು ಮತ್ತು ಅವರ ಸಹಾಯಕರು ಸೇರಿ 22, ಊರಿನ ಇಮಾಮ್ ಮತ್ತು ಚೀಫ್ ಸಹಿತ ಅಹ್ಮದಿಯಾ ಜಮಾಅತಿಗೆ ಸೇರಿದರು. ತಬ್ಲೀಗಿ ಜಮಾಅತಿನವರು ಪಾಕಿಸ್ತಾನದಿಂದ ತಂಡದ ರೂಪದಲ್ಲಿ ಚೌಡ್ ದೇಶಕ್ಕೆ ಆಗಮಿಸಿದ್ದರು. ಈ ಕ್ಷೇತ್ರಕ್ಕೆ ಬಂದು ತಲುಪಿದರು. ಒಂದು ಸಂದರ್ಭದಲ್ಲಿ ನಮ್ಮ ಮುಬಲ್ಲಿಗ್ ಸಾಹೇಬರ ಉಪಸ್ಥಿತಿಯಲ್ಲಿ ಆ ಜನರು ಬಂದರು. ಪರಿಚಯ ಆದಾಗ ತಬ್ಲೀಗಿ ಜಮಾಅತಿನವರು ತುಂಬ ಆಶ್ಚರ್ಯದಿಂದ ನಮ್ಮ ಮುಅಲ್ಲಿಮ್ ಸಾಹಿಬರಿಗೆ ಕೇಳಿದರು. ಅಹ್ಮದಿಯಾ ಜಮಾಅತ್ ಇಲ್ಲಿಯೂ ಇದೆಯೇ. ನಮ್ಮ ಮುಅಲ್ಲಿಮ್ ಸಾಹಿಬ್ ಅವರಿಗೆ ಹಝುರತ್ ಮಸೀಹ್ ಮೌಊದ್ (ಅ) ರವರ ಗ್ರಂತ "ಮಸೀಹ್ ಹಿಂದೂಸ್ತಾನ್ ಮೇ" (Jesusin India) ಉದೋಗೋರೆಯ ರೂಪದಲ್ಲಿ ನೀಡಿದರು. ಮತ್ತೆ ಆ ಜನರು ಈ ಕ್ಷೇತ್ರದಿಂದ ತೆರಳಿದರು. ಕೆಲವು ದಿನಗಳ ನಂತರ ಮತ್ತೊಮ್ಮೆ ಈ ಕ್ಷೇತ್ರಕ್ಕೆ ಬಂದರು ಮತ್ತು ಕ್ಷೇತ್ರದ ಸುಲ್ತಾನರಿಗೆ ಹೇಳಿದರು. ಅಹ್ಮದಿಯಾ ಜಮಾಅತ್ ಒಂದು ಮಿಥ್ಯ ಜಮಾಅತ್ ಆಗಿದೆ ಮತ್ತು ಹಝ್‌ರತ್ ಅಹ್ಮದಿಯಾ ಜಮಾಅತಿನಲ್ಲಿ ಸೇರಿ ಬಹು ದೊಡ್ಡ ತಪ್ಪು ಮಾಡಿದ್ದೀರಿ. ಕ್ಷೇತ್ರದ ಸುಲ್ತಾನರು ಅವರಿಗೆ ಉತ್ತರ ನೀಡಿದರು. ಯಾವ ಮಾತುಗಳನ್ನು ನೀವು ಅಹ್ಮದಿಯಾ ಜಮಾಅತಿನ ಬಗ್ಗೆ ಹೇಳಿದ್ದೀರಿ. ಅದು ನಾವು ಅವರಲ್ಲಿ ಕಾಣಲಿಲ್ಲ. ಅವರು ರಸೂಲುಲ್ಲಾಹ್ (ಸ) ರವರನ್ನು ನಂಬುವವರಾಗಿದ್ದಾರೆ. ಮಾನವೀಯತೆಯ ಸೇವೆ ಮಾಡುವವರಾಗಿದ್ದಾರೆ. ಇನ್ನುಳಿದದ್ದು ಪಾಕಿಸ್ತಾನ ಸರಕಾರ ಅವರಿಗೆ, ಕಾಫಿರ್ ಎಂದು ಘೋಷಿಸಿದೆ. ಇಲ್ಲ, ಅದಕ್ಕಾಗಿ ನೀವು ಚೌಡ್ ರಾಜಧಾನಿಗೆ ಹೋಗಿ, ಅಲ್ಲಿ ಅಹ್ಮದಿಯಾ ಜಮಾಅತಿನ ಮುಖ್ಯ ಕೇಂದ್ರವಿದೆ. ಅಲ್ಲಿ ಸರಕಾರಿ ಕಚೇರಿಗಳೂ ಇವೆ ಅಥವಾ ಮುಕ್ಯ ಕೇಂದ್ರವೂ ಇದೆ. ಅಲ್ಲಿ ಹೋಗಿ ಸರಕಾರದವರಿಗೆ ಹೇಳಿ, ನೀವು ಅಹ್ಮದಿಯಾ ಜಂಆಅತನ್ನು ಅಹ್ಮದಿಯಾ ಜಮಾಅತ್ ಮುಸ್ಲಿಮ್ ಎಂದು ಏಕೆ ರಿಜಿಸ್ಟ್ರರ್ ಮಾಡಿದ್ದೀರಿ. ಆಗ ಅವರು ಮೌನಧರಿಸಿ ಅಲ್ಲಿಂದ ಮರಳಿದರು.

ಅಹ್ಮದ್ ಮುಸ್ತಫಾ ಶಬೀ ಸಾಹಿಬ್ ಹೇಳುತ್ತಾರೆ. ಬೈಅತ್ ಮಾಡುವ 7 ವರ್ಷ ಮೊದಲು ಸ್ವಪ್ನದಲ್ಲಿ ಒಬ್ಬ ಯುವಕನನ್ನು ಭಾರತೀಯ ಉಡುಪಿನಲ್ಲಿ ನೊಡಿದೆ ಮತ್ತು ಕೇಳೀದೆ. ಇವರು ಯಾರು? ಉತ್ತರ ಸಿಕ್ಕಿತು ಇವರು "ಇಮಾಮ್ ಮಹದಿ 'ಆಗಿದ್ದಾರೆ. ನಾನು ಮನಸ್ಸಿನಲ್ಲಿ ಅಂದುಕೊಂಡೆ. ಇಮಾಮ್ ಮಹದಿ ಅಂತೂ ಆಲಿ ಬೈತ್‌ನಿಂದ ಬರುವವರಾಗಿದ್ದಾರೆ. ಇವರು ಭಾರತೀಯರು ಹೇಗೆ ಆದರು? ಮತ್ತೆ ಅಚಾನಕ್ ಆ ವ್ಯಕ್ತಿಯನ್ನು ಆಲಂಗಿಸಿಕೊಂಡೆ ಮತ್ತು ಅಳತೊಡಗಿದೆ. ಅದಾದ 7 ದಿನಗಳ ನಂತರ ನನಗೆ ಒಖಿಂ ನೋಡುತ್ತಿದ್ದೆವು. ಅಂತಿಮವಾಗಿ ಬೈಅತ್ ಮಾಡಿ ಮೋಮಿನರ ಜಮಾಅತಿನಲ್ಲಿ ಸೇರಿದರು. ಹೇಳುತ್ತಾರೆ. ಬೈಅತ್ ಆದ ನಂತರ ನನ್ನಲ್ಲಿ ಅಗಾಧ ರೀತಿಯ ಬದಲಾವಣೆ ಉಂಟಾಗಿದೆ. ನಾನು ಮೊದಲ ವ್ಯಕ್ತಿಯಗಿರಲಿಲ್ಲ. ಪವಿತ್ರ ಖುರ್‌ಆನ್ ತಿಲಾವತ್ (ಪಠಣ) ಮತ್ತು ಯೋಚಿಸಿ ಅಧ್ಯಯನ ಮಾಡುವುದು, ಜನರೊಡನೆ ಉತ್ತಮ ವರ್ತನೆ, ಅದರಿಂದ ಜನರೂ ನನ್ನನ್ನು ಮೆಚ್ಚುತ್ತಾರೆ. ಆದರೆ ಹಜ್‌ರತ್ ಅಖದಸ್ ಮಸೀಹ್ ಮೌಊದ್ (ಅ) ರವರ ಮೇಲೆ ವಿಶ್ವಾಸ ತರುವುದಿಲ್ಲ. ನನ್ನ ತಂದೆಯರು ಸಹ ನನ್ನ ಈ ಆಂತರಿಕ ನೈತಿಕ ಬದಲಾವಣೆಯನ್ನು ಕಂಡು ನನಗೆ ಹೇಳಿದರು. ನೀನು ಅದೇ

ಜಮಾಅತಿನಿಂದ ಸಂಬಂಧಿಸಿದೆ. ಆದರೆ ನಮಗೆ ಒಪ್ಪಿಸುವ ಕೆಲಸ ಮಾಡಬೇಕು. ಅವರಿಗೆ ಏನು ಗೊತ್ತು. ಈ ಬದಲಾವಣೆ ಆ ಇಮಾಮರಿಗೆ ಅನುಸರಿಸುವ ಕಾರಣವೇ ಆಗಿದೆ. ಅದನ್ನು ಅವರು ಸ್ವೀಕರಿಸಬಯಸುವುದಿಲ್ಲ.

ಮರಾಕಶ್‌ನಿಂದ ಅಲ್‌ಹಸನಿ ಸಾಹಿಬ್ ಬರೆಯುತ್ತಾರೆ. ನಾನು 2002 ರಿಂದ 2019 ರವರೆಗೆ ಪಶ್ಚಿಮ ದೇಶಗಳಲ್ಲಿದ್ದೆ. ಕೇವಲ ಹೆಸರಿಗೆ ಮಾತ್ರ ಮುಸ್ಲಿಮನಾಗಿದ್ದೆ. ನಾನು ಹಲವು ಕೆಲಸಗಳು ಅಲ್ಲಾಹನ ಮರ್ಜಿಗೆ ವಿರುದ್ಧ ಮಾಡಿರುತ್ತೇನೆ. 2016 ರಲ್ಲಿ ಆಸ್ಟ್ರೇಲಿಯಾದ ಒಂದು ಜೈಲಿನಲ್ಲಿ ಬಂಧಿಯಾಗಿದ್ದೆ. ಅಲ್ಲಿ ಜೀವನದಲ್ಲಿ ಮೊದಲ ಬಾರಿಗೆ MTA ನೋಡಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಖಸೀದ ಕೇಳಿ ತುಂಬ ಪ್ರಭಾವಿತನಾದೆ ಮತ್ತು ಇಂತಹದೊಂದು ಭಾವನೆ ಉಂಟಾಯಿತು. ಅದು ಜೀವನದಲ್ಲಿ ಎಂದೂ ಆಗಿರಲಿಲ್ಲ. ಮನಸ್ಸು ತೃಪ್ತಿ ಹಾಗೂ ಆನಂದದಿಂದ ತುಂಬಿ ಹೋಯಿತು. ನಾನು ಜೈಲಿನಲ್ಲಿ ದಿನನಿತ್ಯ MTA ನೋಡತೊಡಗಿದೆ. ವಿಚಿತ್ರವಾದ ಸಂಗತಿ ಎಂದರೆ ನಮ್ಮ ಕೋಣೆಯಲ್ಲಿ ಒಂದೇ ಟಿ.ವಿ ಇತ್ತು. ಆದರೆ ಅಲ್ಲಾಹನು ನನಗೆ ನನಗಾಗಿ ಒಂದು ಪ್ರತ್ಯೇಕ ಟಿ.ವಿ ಯ ವ್ಯವಸ್ಥೆ ಮಾಡಿದನು. ಅಲ್ಲದೇ ವೊಬೈಲ್ ಫೋನ್ ಸಹ ದೊರೆಯಿತು. ನಾನು ವಿರೋಧಿ ಮೌಲ್ವಿಗಳೊಡನೆ ಇದನ್ನು ಅವಲೋಕಿಸಿ ನೊಡಿದೆ. ನಾನು ಹಝ್ರತ್ ಮಸೀಹ್ ಮೌಊದ್(ಅ) ರವರ ಖಸೀದಗಳನ್ನು ಕೇಳಿ ಮನಸ್ಸಿನಲ್ಲಿ ಅಂದುಕೊಂಡೆ. ಇಂತಹ ಮಾತುಗಳು ಸಾಧಾರಣ ಮೌಲ್ವಿಯಿಂದ ಸಾಧ್ಯವೇ ಇಲ್ಲ. ಈ ಮಾತುಗಳಂತೂ ಮನಮೋಹಿಸುವಂತಿದೆ. ಆದುದರಿಂದ ನನು ವಿಶ್ವಾಸ ಹೊಂದಿದೆ ಮತ್ತು ನಿಶ್ಚಯಿಸಿಕೊಂಡೆ. ಯೂರೋಪಿನಿಂದ ತನ್ನ ದೇಶಕ್ಕೆ ಮರಳಿ ಹೊಗಿ ಹೊಸದಾಗಿ ಜೀವನ ಪ್ರಾರಂಭಿಸುವೆನು. ಜಮಾಅತಿನ ಪರಿಚಯ ಆಗುವುದಕ್ಕಿಂತ ಮುಂಚೆ ನನಗೆ ಕೇವಲ ಐಹಿಕ ಜೀವನದ ಬಗ್ಗೆ ಆಸಕ್ತಿ ಇತ್ತು. ಮತ್ತು ಏನೂ ಬೇಕಾಗಿರಲಿಲ್ಲ. ಆದರೆ ಇಂದು ನನ್ನ ಜೀವನ ಅಪ್ಪಟ ಬದಲಾಗಿ ಬಿಟ್ಟಿದೆ. ನಾನು ಈಗ ಒಂದು ಕೆಟ್ಟ ಮನುಷ್ಯನಿಂದ ಸತ್ಯ ಮನುಷ್ಯನಾಗಿದ್ದೇನೆ. ಈಗ ದೊರೆತ ನೆಮ್ಮದಿ ಶಾಂತಿಯ ಭಾವನೆ ಈ ಹಿಂದೆ ಎಂದೂ ದೊರೆತಿರಲಿಲ್ಲ.

ಮತ್ತೆ ಈಜಿಪ್ಟ್‌ನ ಉಸಾಮಾ ಸಾಹಿಬ್ ಹೇಳುತ್ತಾರೆ. 2015 ರಲ್ಲಿ ಒಮದು ದಿನ ಚಾನಲ್ ಬದಲಾಯಿಸುತ್ತ ಆಕಸ್ಮಿಕವಾಗಿ ಒಖಿಂ ಅಲ್–ಅರೇಬಿಯಾ ಮೇಲೆ ದೃಷ್ಟಿಯಿತ್ತು. ಅದರ ಮೇಲೆ "ಲಿಖಾ ಮಲ್ ಅರಬ್" ಕಾರ್ಯಕ್ರಮ ನವೂದಿಸಲಾಗಿತ್ತು. ಆ ಮೂಲಕ ನನಗೆ ಅಹ್ಮದಿಯಾ ಜವಾಅತಿನ ಪರಿಚಯವಾಯಿತು. ಮತ್ತೆ ನಾನು ಒಂದು ದಿನದಲ್ಲಿ ಏಳು ಏಳು ಗಂಟೆ MTA ನೋಡುತ್ತಿದ್ದೆ. ಈ ಅಭ್ಯಾಸ 2015 ರಿಂದ 2019 ರವರೆಗೆ ನಡೆಯಿತು. ಎಲ್ಲ ಖುತುಬಗಳು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಇತ್ಯಾದಿ ಕಾರ್ಯಕ್ರಮಗಳನ್ನು ನೋಡಿದೆ. ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಸತ್ಯತೆ ಇತ್ಯಾದಿ ಕಾರ್ಯಕ್ರಮಗಳನ್ನು ನೋಡಿದೆ. ಅನಂತರ ಹಝ್ರತ್ ಮಸೀಹ್ ಮೌಊದ್ (ಅ) ರವರ ಸತ್ಯತೆಯನ್ನು ಒಪ್ಪಿಕೊಂಡಿದೆ. ಆದರೆ ಇನ್ನೂ ಬೈಅತ್ ಮಾಡಿರಲಿಲ್ಲ. ಆ ನಡುವೆ ಸ್ವಪ್ನ ಕಂಡೆ. ಯಾವುದೆ ಅಪರಿಚಿತ ಮರುಭೂಮಿಯಲ್ಲಿ ಜಲ್ಸ ಆಯೋಜಿಸಲಾಗಿದೆ. Tentಗಳು ಹಾಕಲಾಗಿದೆ. ರಾತ್ರಿಯ ಸಮಯ ಆಗಿದೆ. ಅಂತಹದರಲ್ಲಿ ಅವರು ನನಗೆ ನೋಡಿದರು (ಅದರಿಂದ ತಿಳಿದು ಬರುವುದು. ಅವರು ಹಝ್ರತ್ ಮಸೀಹ್ ಮೌಊದ್(ಅ) ಆಗಿದ್ದರು. ಅಥವಾ ಇಲ್ಲ ಸ್ಪಷ್ಟವಾಗಿರಲಿಲ್ಲ) ಅವರು ಅಲ್ಲಿ ಬಂದರು ಮತ್ತು ನಾನು ಹುಝೂರರ ಹಿಂದೆ ಹಿಂದೆ ನಡೆಯುತ್ತಿದ್ದೇನೆ. ವುಝು ಮಾಡಿದ ನಂತರ ಅವರು ದೊಡ್ಡ ಖಿಜಟಿಣ ಕಡೆ ಹೋದರು. ನಾನು ಅವರ ಹಿಂದೆ ಹಿಂದೆಯೇ ಹೋಗುತ್ತಿದ್ದೆ. ಇಲ್ಲಿ ನನ್ನ ಕಣ್ಣು ತೆರೆಯಿತು. ಮತ್ತು ಸ್ವಪ್ನ ಮುಗಿಯಿತು. ನಾನು ಈ ಸ್ವಪ್ನ ಕಂಡು ಬಹಳ ಸಂತುಷ್ಟನಾದೆ. ಮತ್ತು ಅವರಿಗೆ ಪ್ರೀತಿಸತೊಡಗಿದೆ. ಅವರ ಎಲ್ಲ ಖುತುಬಗಳು ಆಲಿಸುತ್ತೇನೆ ಮತ್ತು ಅದರಂತೆ ನಡೆಯುವ ಪ್ರಯತ್ನ ಮಾಡುತ್ತೇನೆ. ಬಹುಶ: ಅವರೇ ನನಗೆ ನೋಡಿರಬಹುದು. ಇದರಿಂದ ಅದೇ ಸ್ಪಷ್ಟವಾಗುತ್ತದೆ.

ಮುಬಲ್ಲಿಗ್ ಇನ್‌ಚಾರ್ಜ್ ಗನಿಕನಾಕರಿ ಹೇಳುತ್ತಾರೆ. ಇಲ್ಲಿ ನಿಷೇಧ ಹೇರಿದ ಕಾರಣ ವಿಧಿಬದ್ಧವಾಗಿ ಜಲ್ಸ ಸಾಲಾನ ಆಯೋಜಿಸುವುದು ನಿಷಿದ್ಧವಿದೆ. ಆದುದರಿಂದ ವರ್ಷವೆಲ್ಲ ಜನರು ಹಣ ಸಂಗ್ರಹಿಸಿ ಸಿರಾಲಿಯೋನ್ ಜಲ್ಸಕ್ಕೆ ಹೋಗುತ್ತಾರೆ. ಈ ವರ್ಷವೂ ಒಂದು ದೊಡ್ಡ ಸಂಖ್ಯೆ ತನ್ನ ಖರ್ಚಿನ ಮೇಲೆ ಸಿರಾಲಿಯೋನ್ ಜಲ್ಸಕ್ಕೆ ಹೋಗಿದ್ದರು. ಯುವ ಮುಅಲ್ಲಿಮ್‌ರೊಬ್ಬರು ಅಬ್ದುರಾಹ್ ಸಾಹಿಬ್ ತುಂಬ ಬಡವರಾಗಿದ್ದರು. ಜಮಾಅತಿನ ಸಾಧಾರಣ ಭತ್ಯೆಯ ಮೇಲೆ ಉಪಜೀವನ ನಡೆಸುತ್ತಿದ್ದರು. ಒಂದು ವರ್ಷದಿಂದ ಪ್ರತಿ ತಿಂಗಳು ಜಲ್ಸದಲ್ಲಿ ಭಾಗವಹಿಸಲು ಸ್ವಲ್ಪ ಸ್ವಲ್ಪ ಹಣ ಉಳಿಸುತ್ತಿದ್ದರು. ಜಲ್ಸದ ದಿನಗಳು ಹತ್ತಿರ ಬಂದಾಗ ಅವರು ತಮ್ಮ ಕ್ಷೇತ್ರದ ಅವರ ಪ್ರಚಾರ ಪಡೆಯುತ್ತಿದ್ದ ಇಮಾಮರೊಬ್ಬರಿಗೆ ಜಲ್ಸಕ್ಕೆ ಹೋಗಲು ಸಿದ್ಧಗೊಳಿಸಿದರು. ಮತ್ತು ತನ್ನ ಎಲ್ಲ ಹಣ ಅದು ಜಲ್ಸ ಪ್ರಯಾಣಕ್ಕಾಗಿ ಉಳಿಸಿದ್ದರು. ಅವರಿಗೆ ಕೊಟ್ಟುಬಿಟ್ಟರು. ನೀವು ಜಲ್ಸಕ್ಕೆ ಹೋಗುವವರಿದ್ದರು. ಏಕೆ ಹೋಗಲಿಲ್ಲ? ಎಂದು ಕೇಳಿದಾಗ ಹೇಳಿದರು. ನಾನಂತೂ ಮೊದಲೇ ಅಹ್ಮದಿ ಆಗಿದ್ದೇನೆ. ಆದೆರ ಇಮಾಮ್ ಸಾಹೇಬರು ಹೋಗುವ ಅವಶ್ಯಕತೆ ಇತ್ತು. ಅವರು ಅಹ್ಮದಿಅತ್ತಿನ ಸತ್ಯತೆ ತಮ್ಮ ಕಣ್ಣುಗಳಿಂದ ನೋಡುವಂತಾಗಲಿ ಮತ್ತು ಆ ಸತ್ಯ ಅವರಿಗೆ ಮನವರಿಕೆಯಾಗಲಿ ಎಂಬ ಉದ್ದೇಶದಿಂದ ನಾನು ನನ್ನ ಸಂಪತ್ತು ಮತ್ತು ಭಾವನೆಗಳನ್ನು ತ್ಯಾಗ ಮಾಡಿರುತ್ತೇನೆ. ಅಹ್ಮದಿಅತ್ತಿನ ಸತ್ಯತೆ ಸ್ವಯಂ ಪರೀಕ್ಷಿಸಿ ಈ ದೈವಿಕ ಸಂಘಟನೆಯಲ್ಲಿ ಪ್ರವೇಶಿಸುವಂತಾಗಲಿ.

ಇಂತಹದೊಂದು ಕ್ರಾಂತಿ ಅಲ್ಲಾಹನು ಸೃಷ್ಟಿಸುತ್ತಿದ್ದಾನೆ. ಒಂದು ವಿಶೇಷವಾದ ಉತ್ಸಹ ಮತ್ತು ಭಾವನೆ ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಅನುಸರಿಸುವವರ ಸಹಾಯಕ್ಕಾಗಿ ಮೂಡಿಸುತ್ತಿದ್ದಾರೆ.

ಸಾವಿರಾರು ಮೈಲಿ ದೂರ ವ್ಯಕ್ತಿಯೊಬ್ಬ ಕುಳಿತುಕೊಂಡಿದ್ದಾನೆ. ಬಹುಶ: ಅವನು ಖಲೀಫರನ್ನು ಎಂದೂ ನೋಡಿಯೂ ಇರಲಿಲ್ಲ. ಆದರೆ ಒಂದು ಕಾಳಜಿ ಇದೆ. ಕಳವಳವಿದೆ. ಅದೇನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶ ಅಹ್ಮದಿಅತ್ತಿನ ಸಂದೇಶ ಜನಗಳಿಗೆ ತಲುಪಬೇಕು. ಮತ್ತು (ಅ) ರವರ ಸಂದೇಶ ಅಹ್ಮದಿಅತ್ತಿನ ಸಂದೇಶ ಜನರವರೆಗೆ ತಲುಪಬೇಕು ಮತ್ತು ಜನರು ಇದರಲ್ಲಿ ಪಾಲ್ಗೊಳ್ಳಬೇಕು.

ಬಲ್ಗಾರಿಯಾದ ಮುರಬ್ಬಿ ಸಾಹಿಬ್ ಬರೆಯುತ್ತಾರೆ. ವೈದ್ಯರೊಬ್ಬರು ಒಂಓಖಏಂಖಿಔಈ ಜಮಾಅತ್ತಿನ ನಿಷ್ಠಾವಂತ ಮಿತ್ರಾಗಿರುವರು. ಕ್ರೈಸ್ತರಾಗಿದ್ದಾರೆ. ಮೂರು ಸಲ ಜಲ್ಸ ಸಾಲಾನ ಜರ್ಮನಿಯಲ್ಲಿ ಪಾಲ್ಗೊಂಡಿದ್ದಾರೆ. ಅವರು ನನ್ನೊಡನೆ ಭೇಟಿಯೂ ಆದರು. ನನ್ನ ಜೊತೆ ಚಿತ್ರವು ತೆಗೆಸಿಕೊಂಡರು. ಬಲ್ಗಾರಿಯಾ ಬಂದ ನಂತರ ಅವೆಲ್ಲ ಚಿತ್ರಗಳು ತನ್ನ ಕ್ಲಿನಿಕ್ಸ್‌ಗಳಲ್ಲಿ ಅವು ವಿಭಿನ್ನ ಮಾರ್ಗಗಳಿವೆ. ಅದರಲ್ಲಿ ಹಾಕಲಾಗಿದೆ. ರೋಗಿಗಳಿಗೆ ಅಹ್ಮದಿಯಾ ಜಮಾಅತಿನ ಪರಿಚಯ ಉತ್ತಮ ರೀತಿಯಲ್ಲಿ ಮಾಡಿಸುತ್ತಾರೆ. ಹೀಗೆ ಅವರ ಮೂಲಕ ಹಲವು ಜನರವರೆಗೆ ಜಮಾಅತಿನ ಸಂದೇಶ ತಲುಪುತ್ತಿದೆ. ತಬ್ಲೀಗಿನ ಹೊಸ ಮಾರ್ಗಗಳು ತೆರೆಯುತ್ತಿದೆ.

ಜಲ್ಸಕ್ಕೆ ಬರುವ ಜನರು ಸಹ ಕೆಲವು ಕಾರಣಗಳಿಂದಾಗಿ ಅವರು ಅಹ್ಮದಿಅತ್ ಸ್ವೀಕರಿಸದಿರಬಹುದು. ಆದರೆ ತಬ್ಲೀಗಿಗೆ (ಪ್ರಚಾರಕ್ಕೆ) ಕಾರಣಕರ್ತರಾಗಿದ್ದಾರೆ ಮತ್ತು ಅವರ ಮೂಲಕ ಬೈಅತ್‌ಗಳು ಆಗುತ್ತಿವೆ.

ಅಮೀರ್ ಸಾಹಿಬ್ ಇಂಡೋನೇಷಿಯಾ ತನ್ನ ವರದಿಯಲ್ಲಿ ಬರೆಯುತ್ತಾರೆ. ಯೂರೋಪ್ ಕ್ಷೇತ್ರದ ಒಂದು ಊರಿನಲ್ಲಿ ಒಬ್ಬ ಮೌಲ್ವಿ ತನ್ನ ಭಾಷಣದಲ್ಲಿ ಹಝ್ರತ್ ಮಸೀಹ್ ಮೌಊದ್ (ಅ) ರವರ ಮೇಲೆ ಅನೇಕ ಆರೋಪಗಳನ್ನು ವಿವರಿಸತೊಡಗಿದ, ಬೈಅತ್ ಮಾಡಿದವರನ್ನು ಸಹ ವಿರೋಧ ಮಾಡತೊಡಗಿದರು. ಆದರೂ ನಮ್ಮ ನೌಮುಬಾಯೀನ್‌ಗಳು ಸ್ಥಿಳಚಿತ್ತರಾಗಿದ್ದರು. ಮೌಲ್ವಿಯ ವಿರೋಧದ ಪ್ರಯತ್ನಗಳು ಏನೂ ಫಲಕೊಡಲಿಲ್ಲ. ಅಲ್ಲದೆ ಆ ಮೌಲ್ವಿ ಹಬ್ಬದ ದಿನಕ್ಕಿಂತ ಮುಂಚೆಯೇ ಇಹಲೋಕ ಅಗಲಿದನು. ಅನಂತರ ಅಬೂ ಹಾಶಿಮ್ ಹೆಸರಿನ ಇನ್ನೊಬ್ಬ ಮೌಲ್ವಿ ಅವನು "ಮಜ್ಲಿಸ್ ಉಲಮಾಅದ ಅಧ್ಯಕ್ಷರಾಗಿದ್ದನು. ಅವನು ವಿರೋಧಕ್ಕೆ ನಿಂತ. ನಮ್ಮ ನೌಮುಬಾಯೀನ್‌ಗಳಿಗೆ ಈ ಜನರು ಮುಸ್ಲಿಮರಲ್ಲ ಎಂದು ಹೇಳುತ್ತಿದ್ದ ಅಹ್ಮದಿಯಾ ಜಮಾಅತಿಗೆ ಇಸ್ಲಾಂ ಧರ್ಮದಿಂದ ಯಾವುದೇ ಸಂಬಂಧವಿಲ್ಲ. ಆದರೆ ಅಲ್ಲಾಹನ ಕೃಪೆಯಿಂದ ಹೀಗಾಯಿತು. ಅವನಿಗೆ ಕೆಲ ಅವಧಿಯಲ್ಲಿಯೇ ಅಧ್ಯಕ್ಷ ಪದದಿಂದ ಕೆಳಗಿಳಿಸಲಾಯಿತು. ಮತ್ತೆ ಆಜಜು ಹೆಸರಿನ ಮೌಲ್ವಿ ಜಮಾಅತಿನ ವಿರೋಧ ಪ್ರಾರಂಭಿಸಿದನು. ನೌಮುಬಾಯೀನ್‌ಗಳಿಗೆ ಧಮಕಿ ಹಾಕುತ್ತಿದ್ದ. ಹೇಳುತ್ತಿದ್ದ ಅಹ್ಮದಿಅತ್ ತುಂಡು ತುಂಡು ಮಾಡಿ ಮೀನುಗಳ ಮುಂದೆ ಬಿಸಾಕಲಾಗುವುದು. ಆದರೆ ಅಲ್ಲಾಹನ ವಿಧಿ ಹೀಗೆ ಜಾಹಿರಾತು ಅವನಿಗೆ ಲಕ್ವ ಹೊಡೆಯಿತು. ಎಷ್ಟೋ ತಿಂಗಳವರೆಗೆ ಅಂಗಾಂಗದಂತಿದ್ದು ತೀರಿಹೋದವು. ಅವನ ಕುಟುಂಬ ಹೊರತುಪಡಿಸಿ ಯಾರೂ ಸಹ ಅವನ ಮರಣಕ್ಕೆ ಹೋಗಲಿಲ್ಲ.

ಅಂತೂ ಯಾವತ್ತೂ ಎಲ್ಲ ಕಡೆಯೂ ನಮಗೆ ಸಬರ್ (ತಾಳ್ಮೆ) ಮತ್ತು ದುಆ (ಪ್ರಾರ್ಥನೆ) ಯಿಂದ ಕಾರ್ಯ ಮಾಡಬೇಕಾಗಿದೆ. ಅದರಿಂದಾಗಿ ಹೀಗೆ ಪ್ರಾರ್ಥಿಸಬೇಕು. ಓ ಅಲ್ಲಾಹ್! ಅವರಿಗೆ ಹಿದಾಯತ್ (ಮಾರ್ಗದರ್ಶನ ನೀಡು ಅಥವಾ ಅವರ ದುರ್ವರ್ತನೆಗಳಿಂದ ನಮ್ಮನ್ನು ರಕ್ಷಿಸು. ಅವರಿಗೆ ನೀನೇ ನೋಡಿಕೋ.

ಕೊನೆಯಲ್ಲಿ ಹಝ್ರತ್ ಮಸೀಹ್ ಮೌಊದ್ (ಅ) ರವರ ಅಧ್ಯಾಪನೆ ಪ್ರಸ್ತುತಪಡಿಸುತ್ತೇನೆ. ಅವರು ಹೇಳುತ್ತಾರೆ. "ಸುಳ್ಳು ಎಂದೂ ಫಲಿಸುವುದಿಲ್ಲ. ಅಂತಿಮವಾಗಿ ನಾವು ಲೋಕದಲ್ಲಿ ನೋಡುತ್ತಿರುತ್ತೇವೆ ದುಷ್ಕರ್ಮ ಮಾಡುವವರು ಸುಳ್ಳು ಮೋಸ ಮಾಡುವರು, ದಣಿದು ಬಿಡುತ್ತಾರೆ. ಸತತ 25 ವರ್ಷಗಳಿಂದ ಅಲ್ಲಾಹನ ಮೇಲೆ ಸುಳ್ಳು ಹೇಳುವ ಸುಳ್ಳುಗಾರರನ್ನಾಗಿಸಬಹುದೇ" (ಅಷ್ಟರ ಹೊತ್ತಿಗೆ ಅವರಿಗೆ (ಅ) 25 ವರ್ಷ ಆಗಿತ್ತು) ದಣಿಯದೇ ಇರಬಹುದೇ, ಅಲ್ಲಾಹನು ಅವನಿಗೆ ಹಿಡಿಯಲಿಕ್ಕಿಲ್ಲವೇ, ಬದಲು ಅವನಿಗೆ ಸ್ಪಷ್ಟ ಸಹಕಾರ ನೀಡುವನೇ, ಇದು ಆಶ್ಚರ್ಯಕರ ಮಾತಾಗಿದೆ. ಹೀಗಾಗಲು ಸಾಧ್ಯವೇ ಇಲ್ಲ. ಅಲ್ಲಾಹನು ಸದಾ ಸತ್ಯವಂತರನ್ನೇ ಪುಷ್ಟಿ ಸಹಕಾರ ನೀಡುತ್ತಾನೆ. ಇಂದು 130 ವರ್ಷಗಳ ನಂತರವೂ ನಾವು ನೋಡುತ್ತಿದ್ದೇವೆ. ಅಲ್ಲಾಹನ ಪುಷ್ಟಿ ಸಹಕಾರ ನಮ್ಮೊಂದಿಗಿದೆ.

ಮತ್ತು ಹೇಳುತ್ತಾರೆ. ಆ ಸಮಯ ಯಾರು ನನಗೆ ಗುರುತಿಸುವವರು ಇರಲಿಲ್ಲ. ಯಾರೂ ಇಲ್ಲಿ ಬರುತ್ತಿರಲಿಲ್ಲ. ಅಲ್ಲಾಹನು ಹೇಳಿದನು. ಯಾತೂನ ಮನ್ ಕುಲ್ಲಿ ಫಜ್ಜಿನ್ ಅಮೀಖ್ ಮತ್ತು ಯಾತೀಕ ಮಿನ್ ಕುಲ್ಲಿ ಫಜ್ಜಿನ್ ಅಮೀಬ್, ಸುಳ್ಳುಗಾರನಿಂದ ಇದು ಸಾಧ್ಯವೇ? ಹೀಗೆ ಹೇಳಬಹುದು. ಹೀಗೆ ಮಾಡಬಹುದೇ, ಮತ್ತು ಅಲ್ಲಾಹನು ಅವನಿಗೆ ಬಿಟ್ಟುಬಿಡುವನೆ, ಬದಲು ಅವನ ಭವಿಷ್ಯವಾಣಿಗಳನ್ನು ಪೂರ್ತಿಕರಿಸಲು ದೂರ ದೂರದಿಂದ ಜನರು ಬರುವರೆ ಮತ್ತು ವಿಧವಿಧದ ಉಡುಗೊರೆ, ನಗದು ನೀಡುವರೆ, ಸುಳ್ಳುಗಾರನೊಂದಿಗೆ ಈ ರೀತಿಯ ವರ್ತನೆಯಿದ್ದರೆ ಪ್ರವಾದಿತ್ವ ಮೇಲಿಂದ ವಿಶ್ವಾಸವೇ ಹೊರಟು ಹೋಗಬಹುದು," ಹೇಳಿದರು. ಇದೇ ಕಾರಣದಿಂದ ನಮ್ಮ ಜಮಾಅತ್ ಪ್ರೀತಿ ಮತ್ತು ನಿಷ್ಠೆಯಲ್ಲಿ ಪ್ರಗತಿ ಸಾಧಿಸುತ್ತಿದೆ. ಯಾರು ಸುಳ್ಳುಗಾರ ಮತ್ತು ಯಾರು ಸತ್ಯವಂತನು ಮುಖ್ಯ ನೋಡಿಯೇ ಗುರುತಿಸಬಹುದಾಗಿದೆ.

ಹೇಳಿದರು. ಸತ್ಯವಂತನ ಇದು ಒಂದು ಕುರುಹಾಗಿದೆ. ಸಜ್ಜನರ ಹೃದಯಗಳಲ್ಲಿ ಸತ್ಯವಂತನ ಪ್ರೀತಿ ಹಾಕಲಾಗುತ್ತದೆ. ಮೂಡರಿಗೆ ಈ ಸ್ಥಾನ ದೊರೆಯುವುದಿಲ್ಲ, ಅವರು ಪ್ರಕಾಶದಿಂದ ವಂಚಿತರಾಗುತ್ತಾರೆ ಮತ್ತು ಸಂಶಯ ಸುಳ್ಳು ಅವರ ಕಾರ್ಯವಿಧಾನವಾಗಿರುತ್ತದೆ. ಹೇಳಿದರು. ನಮಗೆ ಆಡಂಬರವಹಿಸಬೇಕಾಗಿಲ್ಲ ನಮಗೆ ನಮ್ಮದೇ ಆದ ಯಾವ ಕೆಲಸವಿಲ್ಲ. ಅಲ್ಲಾಹನ ಕೆಲಸವಾಗಿದೆ. ಸ್ವಯಂ ಅವನು ಮಾಡುತ್ತಿದ್ದಾನೆ.

ಅವರು(ಅ) ಹೇಳುತ್ತಾರೆ. ಅಲ್ಲಾಹನು ನನಗೆ ಅಡಗಿ ಕೂಡಲು ಬಿಡುವುದಿಲ್ಲ. ಪ್ರತಾಪದಿಂದ ಹೇಳಿದರು. ಅಲ್ಲಾಹನು ನಮಗೆ ಅಡಗಿ ಕೂಡಲು ಬಿಡುವುದಿಲ್ಲ. ಅವನು ನ್ಯಾಯಪೂರ್ತಿಕರಣ ಮಾಡಿಯೇ ತೀರುತ್ತಾನೆ. ನೆನಪಿಡಿರಿ. ದೈವಿಕ ಮತ್ತು ಐಹಿಕ ಜನರಲ್ಲಿ ವ್ಯತ್ಯಾಸವಿರುತ್ತದೆ. ಅಲ್ಲಾಹನ ಕಡೆಯಿಂದ ಬಂದವರಿಗೆ ಅವನು ಸ್ವಯಂ ಅವರ ಗೌರವ ಜಾಹಿರುಪಡಿಸುತ್ತಾನೆ. ಅವರ ಸತ್ಯಪ್ರಕಾಶವನ್ನು ಉಜ್ವಲಗೊಳಿಸಿ ತೋರಿಸುತ್ತಾನೆ. ಯಾರು ಅವನ ಕಡೆಯಿಂದ ಬಂದವರಾಗಿರುವುದಿಲ್ಲ. ಸುಳ್ಳುಗಾರರಾಗಿರುತ್ತಾರೆ. ಅಂತಿಮವಾಗಿ ಅಪಮಾನಿತರಾಗಿ ವಿನಾಶ ಹೊಂದುತ್ತಾರೆ.

ಮತ್ತೆ ಹೇಳುತ್ತಾರೆ. ಅಲ್ಲಾಹನು ನಮ್ಮ ಜಮಾಅತಿನ ವಿಶ್ವಾಸ ದುರ್ಬಲವಾಗಿರಲು ಇಷ್ಟಪಡುವುದಿಲ್ಲ. ಅತಿಥಿಗಳು ಬಯಸದಿದ್ದರೂ ಆತಿಥ್ಯವಹಿಸಿದವನು ಅತಿಥಿಗಳನ್ನು ಸತ್ಕರಿಸುತ್ತಾನೆ. ಅದೇ ರೀತಿ ಅಂದ ಹಾಗೆ ದೃಷ್ಟಾಂತಗಳ ಅವಶ್ಯಕತೆಯಿಲ್ಲ. ಆದರೂ ಅಲ್ಲಾಹನು ತನ್ನ ಅನುಗ್ರಹದಿಂದ ಜಮಾಅತಿನ ವಿಶ್ವಾಸ ವೃದ್ಧಿಗೊಳಿಸಲು ದೃಷ್ಟಾಂತಗಳನ್ನು ಜಾಹೀರುಪಡಿಸುತ್ತಿದ್ದಾನೆ. ಯಾವ ಜನರು ತಮ್ಮ ವಿಶ್ವಾಸವನ್ನು ದೃಷ್ಟಾಂತಗಳೊಂದಿಗೆ ಶರತ್ತು ಒಡ್ಡಿ ಒಪ್ಪುತ್ತಾರೋ ಅವರು ತಪ್ಪು ಮಾಡುತ್ತಿದ್ದಾರೆ. ಇದು ಸತ್ಯ ಮಾತಾಗಿದೆ.

ಹಝ್‌ರತ್ ಮಸೀಹ್‌ರ ಶಿಷ್ಯಂದಿರು "ಮಾಯದ"ದ ದೃಷ್ಟಾಂತ ಬೇಡಿದರು. ಅವರಿಗೆ ಇದೆ ಉತ್ತರ ಬಂತು. ಇದಾದ ನಂತರ ಯಾರಾದರೂ ತಿರಸ್ಕರಿಸಿದರೆ ಎಂದೂ ಕಾಣದಂತಹ ಶಿಕ್ಷೆಗೆ ಗುರಿಯಾಗುವಿರಿ.

ಮತ್ತೆ ಹೇಳಿದರು. ಆದುದರಿಂದ ಶಿಷ್ಯನ ಸಂಸ್ಕೃತಿ ಇದೇ ಆಗಿದೆ. ಅವನು ಹೆಚ್ಚಿನ ಪ್ರಶ್ನೆಗಳನ್ನು ಮಾಡಬಾರದು ಮತ್ತು ದೃಷ್ಟಾಂತಕ್ಕಾಗಿ ಆತುರಪಡಬಾರದು. ಯಾರು ಈ ಸಂಸ್ಕೃತಿಯನ್ನು ನೆಚ್ಚಿಕೊಳ್ಳುವರೋ ಎಂದೂ ದೃಷ್ಟಾಂತಗಳನ್ನು ಕಾಣದೆ ಇರಲಾರರು ಮತ್ತು ಅವರ ಹೃದಯಗಳನ್ನು ತಣಿಸಲಾಗುವುದು. ಸಹಾಬರ ಅವಸ್ಥೆ ನೋಡಿ ಅವರು ದೃಷ್ಟಾಂತಗಳನ್ನು ಬೇಡಲಿಲ್ಲ. ಆದರೆ ಅಲ್ಲಾಹನು ಅವರಿಗೆ ದೃಷ್ಟಾಂತಗಳಿಂದ ವಂಚಿಸಿದ್ದನೆ? ಎಂದೂ ಇಲ್ಲ. ತಪ್ಪುಗಳ ಮೇಲೆ ಕಷ್ಟಗಳನ್ನು ಸಹಿಸಿದರು. ಪ್ರಾಣ ತ್ಯಾಗ ಮಾಡಿದರು. ಶತ್ರುಗಳು ಮಹಿಳೆಯರಿಗೂ ಸಹ ಭಯಂಕರವಾದ ಯಾತನೆ ನೀಡಿ ಹತ್ಯೆಗೈದರು. ಆದರೂ ಇನ್ನು ಸಹಕಾರ ಬಂದಿರಲಿಲ್ಲ. ಅಂತಿಮವಾಗಿ ಅಲ್ಲಾಹನ ವಾಗ್ದಾನ ಈಡೇರುವ ಸಮಯ ಬಂತು ಮತ್ತು ಅವರಿಗೆ ವಿಜಯಿಯನ್ನಾಗಿ ಮಾಡಿದನು. ಶತ್ರುಗಳನ್ನು ನಾಶಗೊಳಿಸಿದನು. ಇದು ಸತ್ಯವಾಗಿದೆ. ಅಲ್ಲಾಹನು ಸಬರ್ (ತಾಳ್ಮೆ) ಹೊಂದಿದವರ ಜೊತೆಗಿದ್ದಾನೆ.

ಹೇಳಿದರು. ಇದರಲ್ಲಿ ಯಾವ ಸಂಶಯವು ಇಲ್ಲ. ಇವೆಲ್ಲ ವಿಜಯಿಗಳ ಬೇರು ವಿಶ್ವಾಸವಾಗಿದೆ. ಆ ಮೂಲಕವೇ ಮನುಷ್ಯನು ಉನ್ನತೋನ್ನತ ಸ್ಥಾನಗಳನ್ನು ಪಡೆಯುತ್ತಾನೆ. (ಮಲ್ಫೂಝಾತ್ ಸಂಪುಟ 4, ಪುಟ 354–356, 1984)

ಮತ್ತೆ ವಿರೋಧಿಗಳಿಗೆ ಸಂಭೋದಿಸಿ ಹೇಳಿದರು. "ಇದೀಗ ಓ ವಿರೋಧಿ ಮೌಲ್ವಿಗಳೇ! ಮತ್ತು ಧರ್ಮಪಿಶಾಚಿಗಳೇ! ನಮ್ಮಲ್ಲಿ ಮತ್ತು ನಿಮ್ಮಲಿ ಈ ಭಿನ್ನಾಭಿಪ್ರಾಯಗಳ ವಾದವಿವಾದ ವಿಪರೀತಕ್ಕೆ ಹೋಯಿತು ಅಂದ ಹಾಗೆ ನಿಮ್ಮ ಸಂಖ್ಯೆಗಿಂತ ನಮ್ಮ ಜಮಾಅತ್ ಸಂಖ್ಯೆ ತೀರ ಕಡಿಮೆಯಾಗಿದೆ. ಮತ್ತು ಫಿಅತಿನ್ ಖಲೀಲ ಆಗಿದೆ. ಬಹುಶ: ಇಲ್ಲಿಯವರೆಗೆ ಅವರು (ಅ) ವಿವರಿಸುವಾಗ ನಾಲ್ಕು ಐದು ಸಾವಿರವಿತ್ತು. ಈಗಲೂ ತುಂಬ ಕಡಿಮೆ ಇದೆ. ಅಂತೂ ಅವರು (ಅ) ಹೇಳುತ್ತಾರೆ. ಆದರೂ ನಿಶ್ಚಯವಾಗಿ ತಿಳಿದುಕೊಳ್ಳಿರಿ. ಇದು ಅಲ್ಲಾಹನ ಕೈಯಿಂದ ಹಾಕಿದ ಗಿಡವಾಗಿದೆ. ಅಲ್ಲಾಹನು ಎಂದೂ ಇದನ್ನು ವ್ಯರ್ಥಗೊಳಿಸುವುದಿಲ್ಲ. ಇದನ್ನು ಸಂಪೂರ್ಣ ರೀತಿಯಲ್ಲಿ ತಿಳಿಸುವವರೆಗೆ ನಿಲ್ಲಲಿಕ್ಕಿಲ್ಲ. ಅವನೇ ಇದನ್ನು ನೀರೆರೆಯುವವನು ಮತ್ತು ಅದರ ಸುತ್ತ ರಕ್ಷಣಾಬೇಲಿ ಹಾಕುವನು ಮತ್ತು ಅಗಾಧ ರೀತಿಯ ಅಭಿವೃದ್ಧಿ ನೀಡುವನು.

ನೀವೇನು ಕಡಿಮೆ ಬಲಪ್ರಯೋಗ ಮಾಡಿದವರೇ. ಇದು ಮನುಷ್ಯ ಕಾರ್ಯವೇನಾದರು ಆಗುತ್ತಿದ್ದರೆ ಈ ಗಿಡ ಎಂದೂ ಕತ್ತರಿಸಲ್ಪಡುತ್ತಿತ್ತು. ಇದರ ಹೆಸರು ಸಹ ಉಳಿಯುತ್ತಿರಲಿಲ್ಲ. (ಮುಜ್‌ಮುಅ ಇಶ್ತಿಹರಾತ್ ಸಂಪುಟ 2 ಪು 281, 282, ಅಂಜಾಮ್ ಆಥಮ್ ರೂ. ಖ ಸಂ 11, ಪುಟ 64).

ಅಲ್ಲಾಹನು ನಮಗೆ ಮೊದಲಿಗಿಂತ ಹೆಚ್ಚು ಅಭಿವೃದ್ಧಿ ಕಾಣುವಂತೆ ಮಾಡಲಿ. ವಿರೋಧಿಗಳ ಉಪದ್ರವಗಳಿಂದ ಮತ್ತು ಕುತಂತ್ರಗಳಿಂದ ರಕ್ಷಿಸಲಿ. ಒಳ್ಳೆಯ ಸ್ವಭಾವವುಳ್ಳ ಜನರಿಗೆ ಸಹಾಯ ಮಾಡಲಿ. ಅವರಲ್ಲಿ ಅನುಮಾನ ಹುಟ್ಟಿಸುವವರ, ಪಿತೂರಿ ನಡೆಸುವವರ ಬಲೆಯಿಂದ ಬಿಡಿಸಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ಸತ್ಯಪ್ರೇಮ, ಯುಗಪುರುಷರನ್ನು ನಂಬುವವರನ್ನಾಗಿ ಮಾಡಲಿ. ಏಕೆಂದರೆ ಅವರು ಇಸ್ಲಾಮಿನ ಆತಿಥ್ಯಕ್ಕಾಗಿ ಈ ಜರಿಯಲ್ಲಾಹನ ಸಹಾಯಕರಾಗಲಿ.

ಈ ಲೋಕದಿಂದ ಗೊಂದಲ ಗಲಭೆ ಹಿಂಸೆ ಅಂತ್ಯಗೊಳಲಿ ಮತ್ತು ಏಕದೇವನ ಆರಾಧನೆ ಮಾಡುವವರಾಗಲಿ. ಅಲ್ಲಾಹನು ನಮಗೆ ತಮ್ಮ ಕರ್ತವ್ಯಗಳನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ. ಅಲ್ಲಾಹನು ಈಗ ಅವರಿಗೆ ಸದ್ಬುದ್ಧಿ ನೀಡಲಿ. ಈಗ ದುಆ ಮಾಡೋಣ. (ಅಖ್ಬಾರೆ ಬದರ್ ಉರ್ದು 24-09-2020)

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಯಾವ ಜನರ ಹತ್ತಿರ ಆ ನಗರಗಳಿಗೆ ಹೋಗಲು ಹಣವಿಲ್ಲವೋ ಅವರು ತಮ್ಮ ಆಸ್ತಿಗಳನ್ನು ಮಾರಿ ಆ ಹಲಾಲ್ ಕೆಲಸ ಮಾಡಿಯೇ ತೀರುತ್ತಿದ್ದರು. ಆದರೆ ಜನರು ಆ ಕೆಲಸ ಮಾಡದಿರುವುದು ತೋರಿಸಿಕೊಡುತ್ತದೆ. ಹಲಾಲ್ ಅಂದ ಕೂಡಲೇ ಅದನ್ನು ಮಾಡಲೇಬೇಕೆಂದಿಲ್ಲ. ಬದಲು ಸಂದರ್ಭೋಚಿತವಾಗಿ ಮಾಡಬೇಕಾಗುತ್ತದೆ. ಒಂದು ಹಲಾಲ್ ಕೆಲಸ ಮಾಡುವುದರಿಂದ ಅತೃಪ್ತಿ ಉಂಟಾಗುವಂತಿದ್ದರೆ ಅದರಿಂದ ದೂರವಿರುವುದೇ ಲೇಸು. ಉದಾಹರಣೆಗೆ ಈರುಳ್ಳಿ ತಿನ್ನುವುದು ಹಲಾಲ್ ಆಗಿದೆ. ಆದರೆ ಮಸೀದಿಯಲ್ಲಿ ಈರುಳ್ಳಿ ತಿಂದು ಹೋಗುವುದು ನಿಷಿದ್ಧವಾಗಿದೆ. ಏಕೆಂದರೆ ಜನರಿಗೆ ಅದರ ವಾಸನೆಯಿಂದ ತೊಂದರೆ ಉಂಟಾಗುತ್ತದೆ. ಅದೇ ರೀತಿ ಮನುಷ್ಯರಿಗೆ ಹಸಿರು ಬಣ್ಣದ ಬಟ್ಟೆ ಧರಿಸುವುದು ಅಥವಾ ನೀಲಿ ಬಣ್ಣದ ಬಟ್ಟೆ ಧರಿಸುವುದು ಅಥವಾ ಹಳದಿ ಬಣ್ಣ ಧರಿಸುವುದು ಹಲಾಲ್ ಆಗಿದೆ. ಆದರೆ ಯಾರೋ ಮಿತ್ರರೊಬ್ಬರು ಹಳದಿ ಬಣ್ಣದ ಬಟ್ಟೆ ಖರೀದಿಸಲು ಹೇಳಿದರೆ, ಹೇಳುತ್ತಾರೆ ಅದು ನನಗೆ ಇಷ್ಟವಿಲ್ಲ. ಅಂದರೆ ಅವನ ದೃಷ್ಟಿಯಲ್ಲಿ ಅವನಿಗೆ ಇಷ್ಟವಾದ ವಸ್ತುವೇ ಹಲಾಲ್ ಆಗಿದೆ. ಊಟದ ವಿಷಯದಲ್ಲಿ ಅಲ್ಲಾಹನ ಆಜ್ಞೆಯಿದೆ. ಹಲಾಲ್ ಮತ್ತು ಪರಿಶುದ್ಧ ವಸ್ತುಗಳನ್ನು ತಿನ್ನಿರಿ ಎಂದು. ಆದರೆ ಕೆಲ ಜನರು ಬದನೆ ತಿನ್ನುವುದಿಲ್ಲ. ಕೆಲ ಜನರು ಕುಂಬಳಕಾಯಿ ತಿನ್ನುವುದಿಲ್ಲ. ಅವರನ್ನು ಕೇಳಿದಾಗ ನೀವು ಬದನೆಕಾಯಿ ಏಕೆ ತಿನ್ನುವುದಿಲ್ಲ ಅಂದರೆ ಅವರು ಹೇಳುತ್ತಾರೆ. ನನ್ನ ಪತ್ನಿಗೆ ಅದು ಇಷ್ಟವಿಲ್ಲ ಅದೇ ರೀತಿ ಮನೆ ಕಟ್ಟುವ ಜನರು ಸಹ ತಮ್ಮ ಇಷ್ಟ ಪ್ರಕಾರದ ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಇನ್ನೊಬ್ಬ ಮೂರು ಅಂತಸ್ತಿನದು. ಒಬ್ಬನ ತನ್ನ ಮನೆಯೊಳಗೆ ಕೈದೋಟ ಇಷ್ಟಪಟ್ಟರೆ, ಇನ್ನೊಬ್ಬ ಇಷ್ಟಪಡುವುದಿಲ್ಲ. ಈಗ ಇದೆಲ್ಲ ವಸ್ತುಗಳು ಹಲಾಲೇ ಆಗಿದೆ. ಆದರೆ ಅದೆಲ್ಲದರ ರೀತಿ ನಡೆದುಕೊಳ್ಳಲು ಆಗುವುದಿಲ್ಲ. ಆದರೆ ಪತ್ನಿಗೆ ತಲಾಖ್ ಕೊಡುವ ವಿಷಯ ಬಂದಾಗ ಹೇಳುತ್ತಾರೆ. ಇದು ಜಾಯಝ್ ಆಗಿದೆ. ಹಲಾಲ್ ಆಗಿದೆ ಎಂದು ಯೋಚನೆ ಮಾಡದೇ ತಲಾಖ್ ಕೊಟ್ಟುಬಿಡುತ್ತಾರೆ. ಅದಾಗ್ಯೂ ಹಲಾಲ್ ವಸ್ತುಗಳು ಸಹ ಮನುಷ್ಯನು ತನ್ನ ಆತ್ಮತೃಪ್ತಿಯಾಗಿ, ಕೆಲ ಮಿತ್ರರ ಸಂತುಷ್ಟಿಗಾಗಿ ಮತ್ತು ಸಮಾಜದ ಸಂತುಷ್ಟಿಗಾಗಿ ಅದನ್ನು ಬಿಟ್ಟುಬಿಡುತ್ತಾರೆ. ಇಂತಹ ಸಂದರ್ಭದಲ್ಲಿ ಒಬ್ಬ ಸತ್ಯವಿಶ್ವಾಸನು ಸ್ಥಿತಿ ಹೇಗಿರುತ್ತದೆಯೆಂದರೆ ಅವನು ಈ ಹಲಾಲ್ ಕಾರ್ಯವನ್ನು ಅಲ್ಲಾಹನ ಸಂತುಷ್ಟಿಗಾಗಿ ಬಿಟ್ಟುಬಿಡುತ್ತಾನೆ ಮತ್ತು ಭಾವಿಸುವುದೇನೆಂದರೆ ಈ ಕಾರ್ಯ ನನ್ನ ಅಲ್ಲಾಹನಿಗೆ ಅನಿಷ್ಟದ್ದಾಗಿದೆ. ಆದುದರಿಂದ ಈ ಕಾರ್ಯ ನಾನು ಮಾಡುವುದಿಲ್ಲ. ಆದುದರಿಂದಲಿ ತಲಾಖ್ ಸಾರ್ವತ್ರಿಕಗೊಳಿಸುವುದು ಸನ್ಮಾರ್ಗವಲ್ಲ. ಬದಲು ತಲಾಖ್‌ನಿಂದ ಉಳಿಯುವುದು ಅಥವಾ ಉಯಿವ ಪ್ರಯತ್ನ ಮಾಡುವುದು ಸನ್ಮಾರ್ಗವಾಗಿದೆ. ಹಲಾಲ್ ಅರ್ಥ ಅಂದರೆ ಬೇಕಾದರೆ ಮಾಡಬಹುದು. ಇದು ಕಾನೂನಿನ ರೀತ್ಯ ನಿಷಿದ್ಧವಲ್ಲ. ಆದರೆ ಇತರ ಭಾವನೆಗಳಿಗೆ, ಇತರರ ಯೋಚನೆಗಳಿಗೆ ಇತರರ ಅನುಕಂಪ ಮತ್ತು ಇತರರ ಪ್ರೀತಿಗೂ ಮನ್ನಣೆ ನೀಡಬೇಕಾಗಿದೆ ಯಾವ ಹಲಾಲ್ ಕಾರ್ಯದಿಂದ ಇತರರ ಯೋಚನೆಗಳಿಗೆ, ಇತರರ ಭಾವನೆಗಳಿಗೆ ಮತ್ತು ಇತರರ ಪ್ರೀತಿಯ ಕಗ್ಗೊಲೆಯಾಗುತ್ತದೆಯೋ ಅದು ಹಲಾಲ್ ಅಲ್ಲ ಬದಲು ಒಂದು ಪಕ್ಷದಲ್ಲಿ ಹಲಾಲ್ ಆಗಿದ್ದರೆ ಇನ್ನೊಂದು ಪಕ್ಷದಲ್ಲಿ ಹರಾಮವಾಗಿರುತ್ತದೆ. ಜನರು ತಮ್ಮ ಮಿತ್ರರ ಅಸಂತುಷ್ಟಿ, ಸಮುದಾಯದ ಅಸಂತುಷ್ಟಿಗೆ ಲಕ್ಷ್ಯ ಕೊಡುವುದಾದರೆ ಅಲ್ಲಾಹನ ಅಸಂತುಷ್ಟಿಯನ್ನು ಕಡೆಗಾಣಿಸಬಹುದೆ? ಅವನ ಅಸಂತುಷ್ಟಿಗೆ ಲೆಕ್ಕಿಸದಿರುವಷ್ಟು ಅವನು ದುರ್ಬಲನೇ? ಲೌಕಿಕ ಮತ್ತು ಕ್ಷುಲ್ಲಕ ಪ್ರೇಮದಲ್ಲಿ ಜನರು ತಮ್ಮ ಪ್ರಿತಿಪಾತ್ರರ ಸಣ್ಣ ಸಣ್ಣ ಅಸಂತುಷ್ಟಿಗೆ ಹೆದರುವವರಾದರೆ, ಅದಕ್ಕೆ ಆಸ್ಪದ ಕೊಡದಿರುವವರಾದರೆ, ಒಬ್ಬ ಸತ್ಯವಿಶ್ವಾಸಿ ರಸೂಲುಲ್ಲಾಹ್(ಸ) ರ ಈ ಹದೀಸ್ ಓದಿ ಅಥವಾ ಕೇಳಿ. "ಇನ್ನ ಅಬ್‌ಗಝುಲ್ ಹಲಾಲಿ ಇಂದಲ್ಲಾಹಿ ತಲಾಖ್." ಹೇಗೆ ತಾನೆ ಸರಳ ಎಂದು ಭಾವಿಸಿ ಈ ಸಾಹಸ ತೋರುವವನಾಗುವನು ಮತ್ತು ವಿರೋಧಿಸುವವನಾಗುವನು. ಶರೀಅತ್ ಬಯಸುವುದು ಅಬ್‌ಗ್ರಝುಲ್ ಹಲಾಲ್ ಹೊಂದಿಕೊಳ್ಳಿರಿ. ಅಂದ ಮೇಲೆ ಪ್ರತಿ ಸತ್ಯವಿಶ್ವಾಸಿಯ ಕರ್ತವ್ಯವಾಗಿದೆ. ಇಂತಹ ಕಾರ್ಯಗಳಲ್ಲಿ ಹಿಂದುಳಿಯಬೇಕು ಮತ್ತು ಪತಿ ಪತ್ನಿಯರ ಜಗಳದ ಸಮಯ ಈ ಅಂಶ ಮರೆಯಬಾರದು.

**(ತಫ್ಸೀರ್ ಕಬೀರ್ ಸಂಪುಟ 2, 519–520, ಮುದ್ರಣ ಖಾದಿಯನ್ 2010)**


## ವಿಶೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609** (ವ್ಯವಸ್ಥಾಪಕರು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 05 November 2020, Issue No. 43

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

***ಜಲ್ಸ ಸಾಲಾನ ಯು.ಕೆ ಸಂದರ್ಭದಲ್ಲಿ ಸಯ್ಯದುನಾ ಅಮೀರುಲ್ ಮುಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ರವರ ವಿಶೇಷ ಸಂಬೋಧನೆ, ದಿನಾಂಕ: 9 ಆಗಸ್ಟ್ 2020, 9 ಝುಹರ್ 1399 ಸೌರಮಾನ ಶಕೆ, ಸ್ಥಳ ಐವಾನೆ ಮಸ್ರೂರ್, ಇಸ್ಲಾಮಾಬಾದ್, ಟೆಲಿಫೋರ್ಡ್ (ಸಿರೆ) ಯು.ಕೆ.***

**(ಭಾಗ–3 ಅಂತಿಮ)**

ಅಮೀರ್ ಸಹಿಬ್ ನಾಯ್‌ಜೇರಿಯಾ ಹೇಳುತ್ತಾರೆ. ಅಹ್ಮದಿ ಊರು 'ಬಾದ" ನ ಅಬ್ದುಲ್ಲ ಹೆಸರಿನ ಇಮಾಮ್ ಸಹಿಬ್ ಜಲ್ಸ ಸಾಲಾನ ನಾಯ್‌ಜೇರಿಯಾ ಸಂದರ್ಭದಲ್ಲಿ ಬೈಅತ್ ಮಾಡಿದವರು ತನ್ನ ಒಂದು ಸ್ವಪ್ನದ ಕುರಿತು ಹೇಳುತ್ತಾರೆ. ಅಹ್ಮದಿಯೋರ್ವರು ಅಹ್ಮದಿಯಾ ಜಮಾಅತಿಗೆ ಸೇರುವ ಮೊದಲು ಕಂಡಿದ್ದ ಸ್ವಪ್ನದ ವಿವಿರ ನೀಡುತ್ತ ಹೇಳಿದರು. ನಾನು ನನ್ನ ಮನೆಯ ಅಂಗಳದಲಿಲ ಅಡ್ಡ ಬಿದ್ದಿದೆ, ರಾತ್ರಿಯ ಸಮಯ, ಚಂದ್ರ ಉದಯವಾಗಿದೆ. ಆ ಚದ್ರದ ಮೆಲೆ ಕಲಿಮ ತಯ್ಯಬ ಬರೆಯಲ್ಪಟ್ಟಿದೆ. ಅದೇ ಸಮಯ ಸ್ವಪ್ನದಲಿಯೇ ನೋಡುತ್ತಾರೆ. ಅದೇ ರೀತಿಯ ಬರಹ ಕಲಿಮ ಅವರ ಅಂಗಳದ ಗೋಡೆಯ ಮೇಲೆಯೂ ಬರೆದಿದ್ದಿದೆ. ಅನಂತರ ನನ್ನ ಕಣ್ಣು ತೆರೆಯುತ್ತದೆ. ಹೇಳುತ್ತಾರೆ. ಈ ಸ್ವಪ್ನದ ಕೆಲ ದಿನಗಳ ನಂತರವೇ ಜಮಾಅತಿನ ಮುಬಲ್ಲಿಗರೊಬ್ಬರು ಹಝ್ರತ್ ಮಸೀಹ್ ಮೌಊದ್ (ಅ) ಸಂದೇಶ ತಲುಪಿಸಲು ಬಂದರು. ನನ್ನ ಮನಸ್ಸಿನಲ್ಲಿ ಅದನ್ನು ಸ್ವೀಕರಿಸಲು ಇಂಬು ಉಂಟಾಯಿತು. ನಾನು ತನ್ನ ಊರ ಸಮೇತ ಅಹ್ಮದಿಅತ್ತಿನಲ್ಲಿ ಸೇರಿಕೊಂಡೆ. ಆದರೆ ಇಂದು ಜಲ್ಸ ಸಾಳಾನದಲ್ಲಿ ಭಾಗವಹಿಸಿ ನನ್ನ ಮನಸ್ಸಿಗೆ ನೆಮ್ಮದಿಯಾಯಿತು. ಏಕೆಂದರೆ ನಾನು ಕಂಡ ಸ್ವಪ್ನದಲ್ಲಿಯ ರೀತಿಯಲ್ಲಿಯೇ ಜಲ್ಸ ವೇದಿಕೆಯ ಪರದೆಯ ಮೇಲೆ ಕಲಿಮ ಬರೆಯಲಾಗಿತ್ತು. ಅದೇ ಬಣ್ಣ ಸಹವಿತ್ತು. ಇದನ್ನು ಕಂಡು ನನಗೆ ಖಾತರಿಯಾಯಿತು. ನಾನು ಕಂಡ ಸ್ವಪ್ನ ಅಲ್ಲಾಹನ ಅನುಗ್ರಹದಿಂದ ಸತ್ಯವಾಗಿತ್ತು.

ಫ್ರಾನ್ಸ್ ನಿವಾಸಿ ಮರಾಕಶಿನ ಮಿತ್ರರೊಬ್ಬರು Ahmed Hajjani ಸಾಹಿಬ್ ತನ್ನ ಅಹ್ಮದಿಅತ್ ಸ್ವೀಕರಿಸಿದ ಘನಟೆ ಬರೆಯುತ್ತಾರೆ. ಒಂದು ಶಾಪಿಂಗ್ ಸೆಂಟರಿನಲಿಲ ಖರೀದಿಸಲು ಹೋದೆ ಆದರೆ ನನಗೆ ಬೇಕಾದ ವಸ್ತು ಎಲ್ಲೂ ಸಿಗುತ್ತಿರಲಿಲ್ಲ. ಅಲ್ಲಿ ಒಬ್ಬನಿಂದ ಕೇಳಿದರೆ ಅವನು ನನಗೆ ಮಾರ್ಗದರ್ಶನ ನೀಡಿದ ಮತ್ತು ಹೇಳಿದ. ನಿಮಗೆ ಅರಬಿ ತಿಳಿದಿದೆಯೇ? ನನ್ನ ಬಳಿ ಬಂದು ಅರೆಬಿ ಪುಸ್ತಕವಿದೆ. ಅದು ಇಮಾಮ್ ಮಹದಿಯ ಕುರಿತದ್ದಾಗಿದೆ. ನೀವು ಪಡೆಯಲು ಇಚ್ಛಿಸುವರೇ? ನಾನು ಆ ಪುಸ್ತಕ ತೆಗೆದುಕೊಂಡೆ. ಮನೆಗೆ ಹೋಗಿ ಅದನ್ನು ಓದಿದೆ. ಆದರೆ ನನ್ನ ಮನಸ್ಸು ಅದನ್ನೆಲ್ಲ ಒಪ್ಪಲಿಲ್ಲ. ಆದರೆ ಕೆಲ ಅವಧಿ ನಂತರ ಹೇಳುತ್ತಾಋಎ. ತಮ್ಮ ಮನೆಯವರಿಗೆ ಭೇಟಿಯಾಗಲು ಮರಾಕಶ್ ಹೋದೆ, ಮರಾಕಶ್‌ನವರೇ ಆಗಿದ್ದರು. ಅಲ್ಲಿ ಈ ಪುಸ್ತಕದ ಬಗ್ಗೆ ವಿಚಾರಿಸಿದೆ. ಅವರ ಮಿತ್ರರು ಹೇಳಿದರು. ಇದು ಅಹ್ಮದಿಯಾ ಜಮಾಅತಿನ ಪುಸ್ತಕವಾಗಿದೆ. ನಾವು ಮೊದಲೇ ಅಹ್ಮದಿಯರಾಗಿದ್ದೇವೆ. ಮಿತ್ರರು ಸಲಹೆ ನೀಡಿದನು. ಫ್ರಾನ್ಸ್‌ಗೆ ಮರಳಿ ಹೋದಾಗ ಅಲ್ಲಿಯ ಅಹ್ಮದಿಯಾ ಜಮಾಅತಿನೊಂದಿಗೆ ಸಂಪರ್ಕ ಹೊಂದಿರಿ. ಹೇಳುತ್ತಾರೆ. ಈ ನಡುವೆ ಫ್ರಾನ್ಸ್‌ನಲ್ಲಿ ನನ್ನ ತಂದೆಯ ವಫಾತ್ ಆಯಿತು. ನನತೆ ತಕ್ಷಣ ಮರಳಬೇಕಾಯಿತು. ದು:ಖ ಹಾಗೂ ಪರಿಸ್ಥಿತಿಗಳ ಅನ್ವಯ ನಾನು ಮರೆತುಬಿಟ್ಟೆ. ದುಆ ಮಾಡಲು ಗಮನ ಸೆಳೆಯಿತು. ಒಂದು ರಾತ್ರಿ ಸ್ವಪ್ನದಲ್ಲಿ ಕಂಡೆ. ಖಲೀಫತುಲ್ ಮಸೀಹ್ ಒಂದು ಸೋಫಾದಲ್ಲಿ ಕುಳಿತುಕೊಂಡಿರುವವರು. ಮತ್ತು ಏನೋ ಹೇಳುತ್ತಿದ್ದಾರೆ. ಆದರೆ ನನಗೆ ಖಲೀಫತುಲ್ ಮಸೀಹ್‌ರ ಮುಂದೆ ಏನೂ ಹೇಳಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿಯೇ ಬಾಗಿಲ ಮೇಲೆ ಸದ್ದಾಯಿತು. ನಾನು ಬಾಗಿಲು ತೆರೆದೆ ನೋಡುತ್ತೇನೆ. ನನ್ನ ದಿವಂಗತ ತಂದೆಯವರು ನಿಂತಿದ್ದಾರೆ. ಅವರಿಗೆ ನಾನು ಒಳಗೆ ಬರಲು ಹೇಳುತ್ತೇನೆ. ಅವರು ಹೇಳುತ್ತಾರೆ. ನಾನು ಒಳಗೆ ಬರಲಿಕ್ಕಾಗದು. ಆದರೆ ಕೇಳು! ಒಳಗೆ ಸೋಫಾ ಮೇಲೆ ಕುಳಿತಿರುವವರು ಅಲ್ಲಾಹನ ಸರಿಯಾದ ಸಂದೇಶ ನೀಡುವವರಾಗಿದ್ದಾರೆ. ನೀನು ಅವರನ್ನು ಅನುಸರಿಸಬೇಕು. ಹೇಳುತ್ತಾರೆ. ನಾನು ಸ್ವಪ್ನದಲ್ಲಿಯೇ ತಂದೆಯವರಿಗೆ ಹೇಳುತ್ತೇನೆ. ನಾನು ಅವರು ಯಾರೆಂದು ತಿಳಿದಿರುವುದಿಲ್ಲ. ಆಗ ತಂದೆಯರು ಉತ್ತರ ನೀಡುತ್ತಾರೆ. ಅವರದ್ದು ಒಂದು ಜಮಾಅತ್ ಇದೆ. ಈಗ ಅದು ಲೋಕದಾದ್ಯಂತ ಹರಡಿದೆ. ನೀನು ಅವರ ಜೊತೆಯಲ್ಲಿ ನಡೆ ಮತ್ತು ಅವರ ಬೈಅತ್ ಮಾಡು. ಹೀಗೆ ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿದನು ಮತ್ತು ನಾನು ಬೈಅತ್ ಮಾಡಿದೆ.

ಅಮೀರ್ ಸಾಹಿಬ್ ಇಂಡೋನೇಷಿಯಾ ಓರ್ವ ಅಹ್ಮದಿಯ ಅಹ್ಮದಿಯತ್ ಸ್ವೀಕಾರದ ಬಗ್ಗೆ ಬರೆಯುತ್ತಾರೆ. ಆ ಬೈಅತ್ ಮಾಡಿದವರು ನನಗೆ ತಿಳಿಸಿದರು. 'ಆ ಜಮಾಅತ್ ಪಥಭ್ರಷ್ಟವಾಗಿದೆ ಎಂದು ನನಗೆ ಹೇಳುತ್ತಿದ್ದರು. ನಾನು ಅಹ್ಮದಿಯಾ ಜಮಾಅತ್ ಸೇರುವ ಬದಲು ಸರಕಾರದ ವಿರುದ್ಧ ಹೋರಾಡುವ ಜಮಾಅತ್ ಒಂದರಲ್ಲಿ ಸೇರಿಕೊಂಡೆ. 1992 ರಲಿಲ ಆ ಜವಾಅತಿನ ಅಮೀರ್ ಸೆರೆಹಿಡಿಯಲಾಯಿತು. ಅವರ ಬದಲಿ ಅಮೀರ್‌ನ ಕೈಯಲ್ಲಿ ಬೈಅತ್ ಮಾಡುವ ಮೊದಲು ನಾನು "ಇಸ್ತಿಖಾರ" ಮಾಡಿದೆ. ಆಗ ಸ್ವಪ್ನದಲ್ಲಿ ಸಜ್ಜನರೊಬ್ಬರನ್ನು ಕಂಡೆ. ಆ ಸಜ್ಜನರು ನನಗೆ ಹೇಳೀದರು. ನಾನು ಇಮಾಮ್ ಮಹದಿಯಾಗಿದ್ದೇನೆ. ನೀವು ಜನರ ಇಮಾಮರಾಗಿದ್ದೀರಿ. ನಾನು ಮಿರ್ಝಾ ಗುಲಾಂ ಅಹ್ಮದ್ ಆಗಿದ್ದೇನೆ. ಅದರ ಒಂದು ವಾರದ ನಂತರ ನನಗೆ ಆ ಜಮಾಅತಿನ ಹೊಸ ಅಮೀರನ ಬೈಅತ್ ಮಾಡಲು ವಿವಶರನ್ನಾಗಿ ಮಾಡಿದರು. ಹೇಳಿದರು. ಬೈಅತ್ ಮಡು. ಇಲ್ಲದಿದ್ದರೆ ಹತ್ಯೆ ಮಾಡಲಾಗುವುದು. ಹೇಳುತ್ತಾರೆ. ಒಂದು ವರ್ಷದ ನಂತರ ಒಬ್ಬ ಅಹ್ಮದಿಯರಿಂದ ಭೇಟಿಯಾಯಿತು. ಅವನು ತಬ್ಲೀಗ್ ಮಾಡಿದನು. ನಾನು ಅವರಿಗೆ ಹೇಳಿದೆ. ನಿಮ್ಮ ಇಮಳಾಮ್ ಒಬ್ಬ ಪ್ರವಾದಿಯಾಗಿದ್ದರೆ ಅವಶ್ಯವಾಗಿ ಅವರ ಪುಸ್ತಕವು ಇರಬೇಕು. ಆಗ ಆ ಅಹ್ಮದಿ ಹೇಳಿದ. ನಾನು ನಿಮಗೆ ಪುಸ್ತಕ ಕೊಡುವೆನು. ಅದೇ ರಾತ್ರಿ ಮತ್ತೊಮ್ಮೆ ಸ್ವಪ್ನ ಕಂಡಿದೆ. ಸ್ವಪ್ನದಲ್ಲಿ ಒಂದು ಮಸೀದಿ ಕಂಡೆ. ಅದರ ಮೇಲೆ 'ಅಹ್ಮದಿಯಾ" ಬರೆಯಲಾಗಿತ್ತು. ಅಲ್ಲಿ ಒಬ್ಬ ಭಾರತೀಯ ವಸ್ತುಗಳನ್ನು ಧರಿಸಿದ ವ್ಯಕ್ತಿ ನಿಂತಿದ್ದನು. ಅವನು ನಗನೆ ಹೇಳಿದ. ನೀವು ಅದರಲ್ಲಿ ಸೇರಿಕೊಳ್ಳಿ. ಮೂರು ದಿನಗಳ ನಂತರ ಆ ಅಹ್ಮದಿ ಮಿತ್ರನು ನನಗೆ "ಇಸ್ಲಾಮ್ ಉಸೂಲ್ ಕಿ ಫಿಲಾಸಫಿ '(ಇಸ್ಲಾಂ ಧರ್ಮದ ತತ್ವಜ್ಞಾನ) ಪುಸ್ತಕ ಕೊಟ್ಟು ಹೋದನು. ನಾನು ಪುಸ್ತಕ ತೆರೆದೆ. ಪ್ರಾರಂಭದಲಿಲಯೇ ಹಜ್‌ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಅವರ ಚಿತ್ರವಿತ್ತು. ಅವರ ಮುಖನೋಡಿ ನೆನಪಿಗೆ ಬಂತು. ಇವರು ನಾನು ಒಂದು ವರ್ಷ ಹಿಂದೆ ಸ್ವಪ್ನದಲ್ಲಿ ಕಂಡಿದ್ದ ಸಜ್ಜನರೇ ಆಗಿದ್ದಾರೆ. ಆದುದರಿಂದ ನಾನು ಪ್ರಾರಂಭದಿಂದ ಕೊನೆಯವರೆಗೆ ಆ ಗ್ರಂತವನ್ನು ಓದಿದೆ ಮತ್ತು ಬೈಅತ್ ಮಾಡಿ ಜಮಾಅತಿಗೆ ಸೇರಿದೆ.

ದೋಗೋ, ಬೋರಕೇನಫಾಸು ವಲಯದ ಮುಬಲ್ಲಿಮ್ ಬರೆಯುತ್ತಾರೆ. ಜಮಾಅತಿನ ಮಿತ್ರರೊಬ್ಬರು ಜಿಯಾಲೋ ಹುಸೇನಿ ಸಾಹಿಬ್ ಜಮಾಅತಿಗೆ ಸೇರುವ ಘಟನೆಯ ವಿವರ ನೀಡುತ್ತ ಹೇಳುತ್ತಾರೆ. "ಭಯಂಕರ ರೀತಿಯ ವಿರೋಧವಿತ್ತು. ಯಾವತ್ತಿಗೂ ಈ ಊರಿನಲ್ಲಿ ಜಮಾಅತ್ ಸ್ಥಾಪನೆ ಆಗಲು ಸಿದ್ಧವಿರಲಿಲ್ಲ. ಆದುದರಿಂದ ಯಾವಾಗಲೂ ಯಾವುದೇ ರೀತಿಯಿಂದ ಅಹ್ಮದಿಅತ್ ಅಂತ್ಯಗೊಳಿಸಲು ಪ್ರಯತ್ನ ಮಾಡುತ್ತಿದ್ದರು. ಹೇಳುತ್ತಾರೆ. ಒಂದು ದಿನ ನಾನು ಸ್ವಪ್ನ ಕಂಡಿದೆ. ಒಂದು ಮೈದಾನವಿದೆ. ಜನರು ಎರಡು ಗುಂಪುಗಳಲ್ಲಿ ವಿಭಜನೆಗೊಂಡಿದ್ದಾರೆ. ಒಂದೆಡೆ ಅಹ್ಮದಿಯಾ ಗುಂಪು ಬಳಿ ವಸ್ತ್ರಗಳನ್ನು ಧರಿಸಿಕೊಂಡಿದೆ. ಇನ್ನೊಂದೆಡೆ ನಮ್ಮ ಗುಂಪು ವಿವಿಧ ಬಣ್ಣಗಳುಳ್ಳ ವಸ್ತ್ರಗಳನ್ನು ಧರಿಸಿಕೊಂಡಿದೆ. ಅಷ್ಟರಲ್ಲಿ ಒಂದು ಧ್ವನಿ ಮೂಡುತ್ತಿದೆ. ಎರಡೂ ಗುಂಪುಗಳನ್ನು ಚರ್ಚಾಕೂಟ ಏರ್ಪಡಿಸಲು ತಿಳಿಸಲಾಗುತ್ತದೆ. ಚರ್ಚಾಕೂಟ ಪ್ರಾರಂಭವಾಗುತ್ತದೆ. ನಾನು ನೋಡುವುದೇನೆಂದರೆ ನಮ್ಮ ಬಳಿ ಸಾಕ್ಷ್ಯಗಳೇ ಇಲ್ಲ. ಆದುದರಿಂದ ಅಹ್ಮದಿಯರ ಪರ ನಿರ್ಣಯವಾಗುತ್ತದೆ. ಜಿಯಾಲು ಹುಸೇನಿ ಸಾಹಿಬ್ ಹೇಳುತ್ತಾರೆ. ಮರುದಿನ ಮಂಜಾನೆ ಅಹ್ಮದಿಯಾ ಜಮಾಅತಿನ ಬಳಿ ಹೋದೆ ಮತ್ತು ಹೇಳಿದೆ. ಅಹ್ಮದಿಯಾ ಜಮಾಅತ್ ಸತ್ಯವಾಗಿದೆ ಎಂದು. ನನಗೆ ಮನವರಿಕೆಯಾಗಿದೆ. ಆದುದರಿಂದ ನಾನು ಜಮಾಅತಿಗೆ ಸೇರುತ್ತೇನೆ.

ಅಲ್ಬಾನಿಯಾದ ಮುಬಲ್ಲಿಗರು ಬರೆಯುತ್ತಾರೆ. ಜಾಫೇರ್ ಸಾಹಿಬ್ ಬೈಅತ್ ಮಾಡಿದರು. 29 ವರ್ಷ ಅವರ ವಯಸ್ಸಾಗಿದೆ. ಅರ್ಥಶಾಸತ್ರದಲ್ಲಿ ಅವರು ಪದವಿ ಪಡೆದವರಾಗಿದ್ದಾರೆ. ಜಮಾಅತಿನ ಬಗ್ಗೆ ಮೊದಲು ಕೇಳುತ್ತಲೇ ಇಂಟರ್‌ನೆಟ್‌ನಲ್ಲಿದ್ದ ಜಮಾಅತಿನ ವಿರುದ್ಧವಿರುವ ಎಲ್ಲ ತರಹದ ವಿಷಯಗಳನ್ನು ಅಧ್ಯಯಯನ ಮಾಡಿದೆ. ಮಸೀದಿಗೆ ಬಂದಾಗಲೆಲ್ಲಾ ಪ್ರಾರಂಭದಿಂದಲೇ ಪ್ರಶ್ನೆಗಳನ್ನು ಕೇಳುತ್ತಿದ್ದರು. ಹೇಳುತ್ತಾರೆ, ನಮ್ಮ ಉಪ ಅಧ್ಯಕ್ಷರು ಃಣರಿಚಿಡಿ ಖಚಿಟಚಿರಿ ಸಾಹಿಬ್ ಅವರೊಡನೆ ವಿವರವಾಗಿ ಮಾತನಾಡಿದರು ಮತ್ತು ಸಾಕ್ಷ್ಯಗಳೊಂದಿಗೆ ಅವರ ಪ್ರರ್ಶನೆಗಳಿಗೆ ಉತ್ತರ ನೀಡಿದರು. ಆ ಯುವಕನಿಗೆ ಹೇಳೀದರು. ನೀವು ಹಝುರತ್ ಮಸೀಹ್ ಮೌಊದ್ (ಅ) ವಿವರ ಗ್ರಂಥಗಳನ್ನು ಸರಿಯಾಗಿ ಅಧ್ಯಯನ ಮಾಡಿ, ಅಂದ ಹಾಗೆ ಅವರು ಅಧ್ಯಯನ ಮಾಡಿದರು. ಮೆಲ್ಲ ಮೆಲ್ಲನೆ ಅವರಿಗೆ ವಾಸ್ತವ

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.